ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 38 | ಸೆಪ್ಟೆಂಬರ್ 13–19, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಗಂಗೂರು ದಲಿತರ ಹೋರಾಟ

ಮುಝಫರ್ ನಗರದ ಐತಿಹಾಸಿಕ ರ್‍ಯಾಲಿ





- ವಿಭಜನಕಾರಿ, ದ್ವೇಷ ರಾಜಕೀಯಕ್ಕೆ ಸವಾಲು
- ‘ಮಿಷನ್ ಉತ್ತರ ಪ್ರದೇಶ–ಉತ್ತರಾಖಂಡ’ ಆರಂಭ



ಹಬ್ಬಗಳು

ಅಶಾಂತಿ ಹಬ್ಬದಿರಲಿ

ಇನ್ನಷ್ಟು ಸುಡುತ್ತಿದೆ ಬಡಜನರ ಒಡಲ ಬೆಂಕಿ



ಸೆಪ್ಟೆಂಬರ್ 27 ಕರ್ನಾಟಕ ಬಂದ್

ಬ್ರೆಜಿಲಿನಾದ್ಯಂತ ಕೂಗು: ‘ಬೊಲ್ಸನಾರೊ ತೊಲಗು’



ತ್ರಿಪುರಾದಲ್ಲಿನ ದುಷ್ಟ ಹಿಂಸಾಚಾರ ನಿಲ್ಲಬೇಕು

ಮಧ್ಯಪ್ರವೇಶಿಸುವಂತೆ ಪ್ರಧಾನ ಮಂತ್ರಿಗಳಿಗೆ ಯೆಚುರಿ ಪತ್ರ



ತ್ರಿಪುರಾದಲ್ಲಿ ಆಳುವ ಪಕ್ಷ ಬಿಜೆಪಿ ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಹಿಂಸಾಚಾರವನ್ನು ಹರಿಯಬಿಟ್ಟಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಒಂದು ಪೂರ್ವ-ನಿಯೋಜಿತ ರೀತಿಯಲ್ಲಿ ಸಿಪಿಐ(ಎಂ)ನ ರಾಜ್ಯಸಮಿತಿ ಕಚೇರಿಯೂ ಸೇರಿದಂತೆ ವಿವಿಧ ಕಚೇರಿಗಳ ಮೇಲೆ ಬಿಜೆಪಿಯ ಮಂದಿ ದೊಂಬಿ, ಹಲ್ಲೆ ನಡೆಸಿದ್ದಾರೆ. ಹೀಗೆ ಹಾಳುಗೆಡವಿದ ಅಥವ ಸುಟ್ಟು ಹಾಕಿದ ಕಚೇರಿಗಳಲ್ಲಿ ಉದಯಪುರ ಸಬ್ ಡಿವಿಜನಲ್ ಸಮಿತಿ ಕಚೇರಿ, ಗೋಮತಿ ಜಿಲ್ಲಾ ಸಮಿತಿ ಕಚೇರಿ, ಸೆಪಾಹಿಜಾಲ ಜಿಲ್ಲಾ ಸಮಿತಿ ಕಚೇರಿ, ಬಿಶಾಲ್‌ಗಡ್ ಸಬ್ ಡಿವಿಜನಲ್ ಸಮಿತಿ ಕಚೇರಿ, ಪಶ್ಚಿಮ ತ್ರಿಪುರಾ ಜಿಲ್ಲಾ ಸಮಿತಿ ಕಚೇರಿ ಮತ್ತು ಸದರ್ ಸಬ್ ಡಿವಿಜನಲ್ ಸಮಿತಿ ಕಚೇರಿಯೂ ಸೇರಿದೆ.

ಅತ್ಯಂತ ನಿರ್ಲಜ್ಜ ಹಲ್ಲೆ ಅಗರ್ತಲಾದಲ್ಲಿರುವ ರಾಜ್ಯ ಸಮಿತಿ ಕಚೇರಿಯ ಮೇಲೆ ನಡೆದಿದೆ. ಕಚೇರಿಯ ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನು ಲೂಟಿ ಮಾಡಿದ್ದಾರೆ, ಎರಡು ಕಾರುಗಳನ್ನು ಸುಟ್ಟು ಹಾಕಿದ್ದಾರೆ ಮತ್ತು ತ್ರಿಪುರಾದ ಜನತೆಯ ಅತ್ಯಂತ ಗೌರವಪಾತ್ರ ನೇತಾರ ದಶರಥ್ ದೇಬ್ ಅವರ ಪ್ರತಿಮೆಯನ್ನು ಒಡೆದು ಹಾಕಿದ್ದಾರೆ.

ಮಾಧ್ಯಮಗಳನ್ನೂ ಈ ಮಂದಿ ಬಿಟ್ಟಿಲ್ಲ ಎಂದು ಪೊಲಿಟ್ ಬ್ಯುರೊ ಹೇಳಿದೆ. ಇಲೆಕ್ಟ್ರಾನಿಕ್ ಮಾಧ್ಯಮಗಳ ಕಚೇರಿಗಳ ಮೇಲೆಯೂ ಹಲ್ಲೆಗಳು ನಡೆದಿವೆ, 'ಪಿಎನ್-24 ನ್ಯೂಸ್' ವಾಹಿನಿ ಮತ್ತು 'ಪ್ರತಿಬಾದಿ ಕಲಮ್' ಎಂಬ ವಾರ್ತಾಪತ್ರಿಕೆಯ ಮೇಲೆ ಹಲ್ಲೆ ನಡೆದಿದೆ. ಸಿಪಿಐ(ಎಂ) ಬೆಂಬಲಿತ ದಿನಪತ್ರಿಕೆ 'ದೇಶೇರ್ ಕಥಾ'ದ ಕಚೇರಿಯನ್ನೂ ಹಾಳುಗೆಡವಲಾಗಿದೆ.

ಈ ಸ್ಥಳಗಳಲ್ಲಿ ಇದ್ದ ಪೋಲೀಸರು ಹೆಚ್ಚಿನ ಕಡೆಗಳಲ್ಲಿ ಮೂಕಪ್ರೇಕ್ಷಕರಾಗಿ ನಿಂತಿದ್ದರು ಎಂಬುದು ಗಮನಾರ್ಹ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ರಾಜ್ಯಸಮಿತಿ ಕಚೇರಿಯ ಮುಂದೆ ಕೆಲವು ಸಿಆರ್‌ಪಿಎಫ್ ಜವಾನರು ಇದ್ದರು. ಅವರನ್ನೂ ಹಲ್ಲೆಗಳು ಆರಂಭವಾಗುವ ಒಂದು ಗಂಟೆಯ ಮೊದಲು ಹಿಂತೆಗೆದುಕೊಳ್ಳಲಾಯಿತು.

ಬಿಜೆಪಿ ಗ್ಯಾಂಗ್‌ಗಳು ಎಂತಹ ಹಮ್ಮಿನಿಂದ ಈ ದುಷ್ಕೃತ್ಯಗಳಲ್ಲಿ ತೊಡಗಿದ್ದರೆಂಬುದು ಇದರಲ್ಲಿ ರಾಜ್ಯ ಸರಕಾರದ ಶಾಮೀಲನ್ನು ತೋರಿಸುತ್ತದೆ; ರಾಜ್ಯದಲ್ಲಿನ ಪ್ರಮುಖ ಪ್ರತಿಪಕ್ಷದ ಚಟುವಟಿಕೆಗಳನ್ನು ದಮನ ಮಾಡಲು ಆಳುವ ಪಕ್ಷ ಪ್ರಯತ್ನಿಸಿ ವಿಫಲವಾದ್ದರಿಂದ ಈ ಹಲ್ಲೆಗಳು ನಡೆದಿವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಪ್ರಜಾಪ್ರಭುತ್ವದ ಮೇಲೆ ಮತ್ತು ಪ್ರತಿಪಕ್ಷದ ಮೇಲೆ ಈ ಆಕ್ರೋಶಕಾರೀ ದಾಳಿಗಳನ್ನು ಎಲ್ಲ ಪ್ರಜಾಪ್ರಭುತ್ವ-ಪ್ರೇಮಿಗಳು ಮತ್ತು ಪಕ್ಷಗಳು ಖಂಡಿಸಬೇಕಾಗಿದೆ. ಕೇಂದ್ರ ಸರಕಾರ, ನಿರ್ದಿಷ್ಟವಾಗಿ ಗೃಹ ಮಂತ್ರಾಲಯ ತ್ರಿಪುರಾದಲ್ಲಿ ಕಾನೂನು ಆಳ್ವಿಕೆಯನ್ನು ಮತ್ತು ನಾಗರಿಕರ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸಲು ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದಿರುವ ಪೊಲಿಟ್ ಬ್ಯುರೊ ರಾಜ್ಯದಲ್ಲಿ ಸಿಪಿಐ(ಎಂ) ಮೇಲೆ ದಾಳಿಗಳು ಕೊನೆಗೊಳ್ಳಬೇಕು ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆಗಳನ್ನು ನಡೆಸಬೇಕು ಎಂದು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಪ್ರಧಾನ ಮಂತ್ರಿಗಳಿಗೆ ಯೆಚುರಿ ಪತ್ರ

ತ್ರಿಪುರಾದಲ್ಲಿ ಸಪ್ಟಂಬರ್ 8 ರಂದು ಸಿಪಿಐ(ಎಂ) ಮತ್ತು ಎಡರಂಗದ ವಿರುದ್ಧ ಹರಿಯಬಿಟ್ಟ ಹಿಂಸಾಚಾರದತ್ತ ಪ್ರಧಾನ ಮಂತ್ರಿಗಳ ಗಮನ ಸೆಳೆಯಲು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಪತ್ರ ಬರೆದಿದ್ದಾರೆ.

ಈ ಹಿಂಸಾತ್ಮಕ ದಾಳಿಗಳನ್ನು ನಿಲ್ಲಿಸಲು ವಿಳಂಬ ಮಾಡದೆ ಮಧ್ಯಪ್ರವೇಶಿಸಬೇಕು ಎಂದು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿರುವ ಯೆಚುರಿ, ಈ ಹಲ್ಲೆಗಳು ನಡೆದಿರುವ ರೀತಿಯನ್ನು ನೋಡಿದರೆ, ರಾಜ್ಯ ಸರಕಾರ ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡುವ ಹಾಗೂ ಶಾಂತಿಯುತವಾಗಿ ರಾಜಕೀಯ ಚಟುವಟಿಕೆಗಳನ್ನು ಸಂಘಟಿಸುವ ಪ್ರತಿಪಕ್ಷಗಳ ಸಂವಿಧಾನಿಕ ಹಕ್ಕುಗಳನ್ನು ತುಳಿದು ಹಾಕುವುದನ್ನು ತಡೆಯುವ ತನ್ನ ಸಂವಿಧಾನಿಕ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದಿದ್ದಾರೆ.

ಜಾತಿ ಜನಗಣತಿಯ ಬೇಡಿಕೆಗೆ ಸಿಪಿಐ(ಎಂ) ಬೆಂಬಲ

ಜಾತಿ-ಆಧಾರಿತ ಜನಗಣತಿಯೊಂದನ್ನು ನಡೆಸಬೇಕು ಎಂಬ ಬೇಡಿಕೆ ಮತ್ತೆ ಎದ್ದು ಬಂದಿದೆ. ಸಾಮಾನ್ಯ ಜನಗಣತಿಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಗಣತಿ ಮಾಡುವುದನ್ನು ಬಿಟ್ಟರೆ, ಇತರ ಹಿಂದುಳಿದ ವರ್ಗಗಳ ದತ್ತಾಂಶ ಲಭ್ಯವಿಲ್ಲ. ಇತರ ಹಿಂದುಳಿದ ವರ್ಗಗಳ ವಿವಿಧ ವಿಧಗಳ ಒಂದು ಕರಾರುವಾಕ್ಕಾದ ಲೆಕ್ಕ ಇರುವುದು ಅಗತ್ಯವಾಗಿದೆ.

2021ರ ಸಾಮಾನ್ಯ ಜನಗಣತಿಯೊಂದಿಗೆ ಜಾತಿ ಜನಗಣತಿಯನ್ನೂ ನಡೆಸಬೇಕು ಎಂಬ ಬೇಡಿಕೆಯನ್ನು ತಾನು ಬೆಂಬಲಿಸುವುದಾಗಿ ಸಿಪಿಐ(ಎಂ) ಹೇಳಿದೆ.

ರೈತರಿಗೆ ಎಂಎಸ್‌ಪಿಯಲ್ಲಿ "ಹಿಂದೆಂದಿಗಿಂತಲೂ ಹೆಚ್ಚಿನ" ಏರಿಕೆ ಎಂಬುದು ಹಸಿ ಸುಳ್ಳು-ಎಐಕೆಎಸ್

ರೈತರ ಇನ್ನೊಂದು ಭಾರತ್ ಬಂದ್ ಕರೆ, ಉತ್ತರ ಪ್ರದೇಶದ ಮುಝಫ್ಫರ್‌ನಗರದಲ್ಲಿ ಬೃಹತ್ ರೈತ ರ್‍ಯಾಲಿ ಮತ್ತು ಹರ್‍ಯಾಣದ ಕರ್ನಾಲ್‌ನ ಮಿನಿ ಸಚಿವಾಲಯಕ್ಕೆ ರೈತರ ಬೃಹತ್ ಮುತ್ತಿಗೆಯ ನಡುವೆ ಕೇಂದ್ರ ಸರಕಾರ "ಹಿಂದೆಂದಿಗಿಂತಲೂ ಹೆಚ್ಚಿನ" ಬೆಂಬಲ ಬೆಲೆಯನ್ನು ಪ್ರಕಟಿಸಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಸ್ವತಃ ಪ್ರಧಾನ ಮಂತ್ರಿಗಳೇ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಯ ಈ ಏರಿಕೆ ರೈತರಿಗೆ ಗರಿಷ್ಟ ಫಲದಾಯಕ ಬೆಲೆಗಳನ್ನು ಒದಗಿಸುತ್ತದೆ ಎಂದು ಟಿಪ್ಪಣಿ ಮಾಡಿರುವುದಾಗಿಯೂ ವರದಿಯಾಗಿದೆ.

ಆದರೆ ಇದೊಂದು ಹಸಿ ಸುಳ್ಳು, ನಿಜಮೌಲ್ಯದಲ್ಲಿ ಎಂಎಸ್‌ಪಿ ಯಲ್ಲಿ ಇಳಿಕೆಯಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಟೀಕಿಸಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಸಿ2+50% ಸೂತ್ರವನ್ನು ಅನುಸರಿಸದೆ ಮತ್ತು ಲಾಗುವಾಡುಗಳ ಬೆಲೆಯೇರಿಕೆಗಳು ಮತ್ತು ಹಣದುಬ್ಬರವನ್ನು ಗಣನೆಗೆ ತಗೊಳ್ಳದೆ ನಿರ್ಲಕ್ಷ್ಯದಿಂದ ಈ ಪ್ರಕಟಣೆಯನ್ನು ಮಾಡಿದೆ ಎಂದು ಎಐಕೆಎಸ್ ಖಂಡಿಸಿದೆ.

ಎಂದಿನಂತೆ ಸರಕಾರ ಮತ್ತು ಅದರ ಪ್ರಚಾರ ಯಂತ್ರ ಇದು "ಹಿಂದೆಂದಿಗಿಂತಲೂ ಹೆಚ್ಚಿನ" ಏರಿಕೆಂದು ಹೇಳಿಕೊಳ್ಳುತ್ತಿವೆ. ಆದರೆ ವಾಸ್ತವವಾಗಿ ಇದು ಕಳೆದ 12 ವರ್ಷಗಳಲ್ಲೇ ಅತ್ಯಂತ ಕಡಿಮೆ ಏರಿಕೆ, ಗೋದಿಗೆ ಬೆಂಬಲ ಬೆಲೆಗಳಲ್ಲಿ ಹೆಚ್ಚಳ ಕ್ವಿಂಟಾಲಿಗೆ 1975ರೂ.ನಿಂದ ರೂ. 2015ಕ್ಕೆ, ಅಂದರೆ ಕೇವಲ 2.03ಶೇ. ಏರಿಕೆಯಾಗಿದೆಯಷ್ಟೇ ಎಂದು ಎಐಕೆಎಸ್ ಹೇಳಿದೆ. ಇತರ ಹಿಂಗಾರು ಬೆಳೆಗಳ ಎಂಎಸ್‌ಪಿ ಬೆಲೆಗಳಲ್ಲೂ 2.14ಶೇ.ದಿಂದ 8.6ಶೇ. ದಷ್ಟು ಏರಿಕೆ ಮಾಡಲಾಗಿದೆಯಷ್ಟೇ, ನಿಜಮೌಲ್ಯದಲ್ಲಿ, ಅಂದರೆ ಲಾಗುವಾಡುಗಳ ಬೆಲೆಯೇರಿಕೆ ಮತ್ತು ಹಣದುಬ್ಬರವನ್ನು ಪರಿಗಣಿಸಿದರೆ, ವಾಸ್ತವವಾಗಿ ರೈತರಿಗೆ ಅಪಾರ ನಷ್ಟಗಳೇ ಆಗುತ್ತವೆ ಎಂದು ಎಐಕೆಎಸ್ ಹೇಳಿದೆ.

2021-22ರ ವೆಚ್ಚಗಳಲ್ಲಿ ಸಿ2+50% ಸೂತ್ರದ ಪ್ರಕಾರ ಲೆಕ್ಕ ಹಾಕಿದ್ದರೆ ಗೋಧಿಗೆ ಕನಿಷ್ಟ ಬೆಂಬಲ ಬೆಲೆ ಕ್ವಿಂಟಾಲ್‌ಗೆ ರೂ.2195.50 ಆಗಬೇಕಿತ್ತು. ಅಂದರೆ ಲಾಗುವಾಡುಗಳಿಗೆ ಹೆಚ್ಚಿನ ವೆಚ್ಚ ತೆತ್ತು ಗೋದಿ ಬೆಳೆದ ರೈತರು 2022-23ರ ಮಾರಾಟ ಸೀಝನ್ನಿನಲ್ಲಿ ಕ್ವಿಂಟಾಲ್‌ಗೆ 180ರೂ.ಕಡಿಮೆ ಪಡೆಯುತ್ತಾರೆ.

ಸ್ವಾಮಿನಾಥನ್ ಆಯೋಗದ ಸೂತ್ರದಂತೆ 2021-21ರ ವೆಚ್ಚಗಳಲ್ಲಿ ಘೋಷಿಸಬೇಕಾಗಿದ್ದ ಎಂಎಸ್‌ಪಿ ಮತ್ತು ಈಗ ಘೋಷಿತ ಎಂಎಸ್‌ಪಿ ಹಾಗೂ ರೈತರಿಗೆ ಆಗಿರುವ ನಷ್ಟದ ಲೆಕ್ಕ ಹೀಗಿದೆ:

(ಪ್ರತಿಕ್ವಿಂಟಾಲ್‌ಗೆ ರೂ.ಗಳಲ್ಲಿ)

ಬೆಳೆ	ಘೋಷಿತ	ಸೂತ್ರದ ಪ್ರಕಾರ	ವ್ಯತ್ಯಾಸ
ಗೋದಿ	2015	2195.50	-180.50
ಬಾರ್ಲಿ	1635	2106	-471
ಕಡಲೆ	5230	6018	-788
ತೊಗರಿ	5500	6306	-806
ಸಾಸಿವೆ	5050	5205	-155
ಸೂರ್ಯಕಾಂತಿ	5441	7362	-1921

ಇಲ್ಲಿ ಸ್ವಾಮಿನಾಥನ್ ಆಯೋಗದ ಸೂತ್ರದಲ್ಲಿ ಹಿಂದಿನ ವೆಚ್ಚಗಳನ್ನಷ್ಟೆ ಲೆಕ್ಕಕ್ಕೆ ತಗೊಂಡಿದೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ(ಸಿಎಇಸಿಪಿ) ಇನ್ನೂ ಈ ವರ್ಷದ ಬೆಲೆಧೋರಣೆ ವರದಿಯನ್ನು ತನ್ನ ವೆಬ್‌ಸೈಟಿನಲ್ಲಿ ಹಾಕಿಲ್ಲ. ಅಂದರೆ ರೈತರಿಗೆ ನಿಜವಾದ ನಷ್ಟ ಮೇಲಿನ ಕೋಷ್ಟಕ ತೋರಿಸಿವುದಕ್ಕಿಂತಲೂ ಹೆಚ್ಚು.

ಇನ್ನೊಂದು ಸಂಗತಿಯೆಂದರೆ, ಸರಕಾರ ಇನ್ನೂ ಬೆಂಬಲ ಬೆಲೆಗಳಲ್ಲಿ ಖರೀದಿಯ ಖಾತ್ರಿಯನ್ನು ಕೊಡಲು ನಿರಾಕರಿಸುತ್ತಿದೆ. ಹಿಂದೆ ರೈತರು ಬಹಳಷ್ಟು ಬಾರಿ ದೂರಿರುವಂತೆ, ಈ ಕಾರಣದಿಂದಾಗಿ ಸರಕಾರ ಘೋಷಿಸಿದ ಈ ಬೆಂಬಲ ಬೆಲೆಗಳೂ ಸಿಗುವುದು ಒಂದು ಸಣ್ಣ ವಿಭಾಗಕ್ಕೆ ಮಾತ್ರ. ಕಳೆದ ವರ್ಷದ ಬೆಲೆ ಧೋರಣೆಯ ವರದಿಯ ಪ್ರಕಾರ ಸರಕಾರದ ಘೋಷಿತ ಬೆಂಬಲ ಬೆಲೆಯ ಫಲಾನುಭವಿಗಳ ಸಂಖ್ಯೆಯಲ್ಲೂ ತೀವ್ರ ಇಳಿಕೆಯಾಗಿದೆ., ಮುಖ್ಯವಾಗಿ ಬೇಳೆಕಾಳುಗಳು ಮತ್ತು ತೈಲಬೀಜಗಳಲ್ಲಿ. ಅಂದರೆ ಒಂದು ಖಾತ್ರಿ ಖರೀದಿಯಿಲ್ಲದೆ ಈ ಬೆಂಬಲ ಬೆಲೆಗಳೂ ರೈತರಿಗೆ ಸಿಗುವುದಿಲ್ಲ.

ಆದ್ದರಿಂದಲೇ ಸಿ2+50% ಸೂತ್ರದಂತೆ ಎಂಎಸ್‌ಪಿ ಒಂದು ಕಾನೂನಾತ್ಮಕ ಹಕ್ಕು ಆಗಬೇಕು ಎಂದು ರೈತರು ಆಗ್ರಹಿಸುತ್ತಿರುವುದು ಎಂದು ಮತ್ತೊಮ್ಮೆ ನೆನಪಿಸಿರುವ ಎಐಕೆಎಸ್ ಬಿಜೆಪಿ ಸರಕಾರ ಇದಕ್ಕೆ ಅನುಗುಣವಾಗಿ ಒಂದು ಪರಿಷ್ಕೃತ ಪ್ರಕಟಣೆಯನ್ನು ಕೊಡಬೇಕು ಎಂದು ಒತ್ತಾಯಿಸಿದೆ.

ಬಿಜೆಪಿಯ ಈ ಧೋರಣೆಯನ್ನು ಪ್ರತಿಭಟಿಸಲು ಎದ್ದು ನಿಲ್ಲಬೇಕು, ಈ ಕಪಟನಾಟಕವನ್ನು ಬಯಲಿಗೆಳೆಯಬೇಕು ಎಂದು ಎಐಕೆಎಸ್ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಟೋಕಿಯೊ ಪಾರಲಿಂಪಿಕ್ಸ್‌ನ ಭಾರತೀಯ ತಂಡಕ್ಕೆ ಎನ್.ಪಿ.ಆರ್.ಡಿ. ಅಭಿನಂದನೆ

"ಸರಕಾರದ ಅಸಮರ್ಪಕ ಬೆಂಬಲದ ಹೊರತಾಗಿಯೂ ಅದ್ಭುತ ಪ್ರದರ್ಶನ"

ಟೋಕಿಯೋ ಪಾರಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಭಾರತೀಯ ತಂಡ 19 ಪದಕಗಳನ್ನು ಗೆದ್ದುಕೊಂಡು ಅಭೂತಪೂರ್ವ ಪ್ರದರ್ಶನ ನೀಡಿದೆ, ದೇಶಕ್ಕೆ ಕೀರ್ತಿ ತಂದಿದೆ. ಅವರು ಮುಕ್ತಪ್ರಶಂಸೆಗೆ, ಮಾನ್ಯತೆಗೆ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ ಎಂದು ರಾಷ್ಟ್ರೀಯ ವಿಕಲಾಂಗರ ಹಕ್ಕುಗಳ ವೇದಿಕೆ(ಎನ್.ಪಿ.ಆರ್.ಡಿ.) ಅವರನ್ನು ಅಭಿನಂದಿಸಿದೆ.

ವಿಕಲಾಂಗರ ಕ್ರೀಡಾಕ್ಷೇತ್ರದಲ್ಲಿನ ಶೋಚನೀಯ ಸ್ಥಿತಿಯನ್ನು ನೋಡಿದಾಗ ನಮ್ಮ ಈ ಕ್ರೀಡಾ ಪಟುಗಳ ಯಶಸ್ಸು ಮತ್ತಷ್ಟು ಮಹತ್ವ ಪಡೆಯುತ್ತದೆ ಎಂದಿರುವ ಎನ್.ಪಿ.ಆರ್.ಡಿ. ಇವರಲ್ಲಿ ಹೆಚ್ಚಿನವರು ಬಡತನದ ಹಿನ್ನೆಲೆಯಿಂದ ಬಂದವರಾಗಿದ್ದು, ಎಲ್ಲ ರೀತಿಯ ಅಡ್ಡಿ-ಆತಂಕಗಳ ವಿರುದ್ಧ, ನಿಂದೆ-ತಾರತಮ್ಯಗಳ ವಿರುದ್ಧ ಹೋರಾಟ ನಡೆಸಬೇಕಾಗಿ ಬಂದಿದೆ ಎಂಬ ಸಂಗತಿಯನ್ನೂ ಅವರ ಸಾಧನೆಗಳನ್ನು ಮೆಚ್ಚಿಕೊಳ್ಳುವಾಗ ಗಮನಿಸಬೇಕಾಗುತ್ತದೆ ಎಂದಿದೆ.

ಅವರು ಕಳಪೆ ಮಟ್ಟದ ಕ್ರೀಡಾ ಮೂಲರಚನೆಗಳು, ವಿಕಲಾಂಗರ ಕ್ರೀಡಾಚಟುವಟಿಕೆಗಳಿಗೆ ಸಾರ್ವಜನಿಕ ಹಣನೀಡಿಕೆಯಲ್ಲಿ ಅತ್ಯಂತ ಅಸಮರ್ಪಕತೆ ಮತ್ತು ಈ ಕ್ರೀಡಾ ಸಂಸ್ಥೆಗಳ ಮೇಲೆ ರಾಜಕೀಯ-ಅಧಿಕಾರಶಾಹಿಯ ಮಾರಕ ಹಿಡಿತದ ವಿರುದ್ಧ ಸಮರವನ್ನೇ ನಡೆಸಬೇಕಾಗಿ ಬಂದಿತ್ತು. ಇದು ಸಾಲದೆಂಬಂತೆ ಕಾರ್ಪೊರೇಷನ್ ವಲಯದಿಂದ ಮಾತ್ರವೇ ಅಲ್ಲ, ಸರಕಾರ ಮತ್ತು ಕ್ರೀಡಾ ಸಂಸ್ಥೆಗಳಿಂದಲೂ ಅತ್ಯಂತ ಅಸರ್ಪಕ ಬೆಂಬಲದ ಪರಿಣಾಮಗಳನ್ನೂ ಅವರು ಎದುರಿಸಬೇಕಾಗಿದೆ ಎಂದು ಎನ್.ಪಿ.ಆರ್.ಡಿ.ನೆನಪಿಸಿದೆ.

ದುರದೃಷ್ಟವಶಾತ್, ತಪ್ಪು ವರ್ಗೀಕರಣದಿಂದಾಗಿ ಒಬ್ಬ ಪದಕವಿಜೇತರನ್ನು ಅನರ್ಹಗೊಳಿಸಲಾಗಿದೆ. ಇಂತಹ ಅಸಡ್ಡೆ ಅಕ್ಷಮ್ಯ. ಹಿಂದೊಂದು ಸಂದರ್ಭದಲ್ಲಿ ಒಬ್ಬ ಮಹಿಳಾ ಕ್ರೀಡಾಪಟು ಆಗಸ್ಟ್ 2021ರಲ್ಲಿ ಪೋಲಂಡಿನ ಲುಬ್ಲಿನ್‌ನಲ್ಲಿ 4ನೇ ವಿಶ್ವ ಕಿವುಡರ ಚಾಂಪಿಯನ್‌ಶಿಪ್ ನಲ್ಲಿ ಭಾಗವಹಿಸಲು ಮದ್ರಾಸ್ ಹೈಕೋರ್ಟಿನಿಂದ ಆದೇಶವನ್ನು ಪಡೆಯಬೇಕಾಗಿ ಬಂದಿತ್ತು.

ಭಾರತದ ಪಾರಲಂಪಿಕ್ಸ್ ಸಮಿತಿ ಹಲವು

ಪುಟ 14 ನೋಡಿ

ಸಂಪಾದಕೀಯ

ಹಬ್ಬಗಳು ಅಶಾಂತಿ ಹಬ್ಬಿಸದಿರಲಿ

ಹಬ್ಬಗಳ ಸೀಜನ್ ಆರಂಭವಾಗಿದೆ. ಎಲ್ಲಾ ಧರ್ಮಿಯರು ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಗಳು ನಮ್ಮ ಬಹುಮುಖಿ ಸಂಸ್ಕೃತಿಯ ಭಾಗವಾಗಿವೆ. ಹಬ್ಬದ ಕೆಲವು ಆಚರಣೆಗಳಲ್ಲಿ ಕೆಲವು ಮೌಢ್ಯಾಚರಣೆಗಳು ಸೇರಿಕೊಂಡಿದ್ದರೂ ಬಹುತೇಕ ಹಬ್ಬಗಳು ಕುಟುಂಬದ ಸದಸ್ಯರನ್ನು ಒಂದೆಡೆ ಸೇರಿಸುವ, ಕಾರಣಾಂತರದಿಂದ ಮರೆತುಹೋದ ಸಂಪರ್ಕಗಳನ್ನು ಮತ್ತೆ ಉರ್ಜಿತಗೊಳಿಸುವ, ಅಕ್ಕಪಕ್ಕದ ನೆರೆಮನೆಯವರೊಂದಿಗೆ ಸ್ನೇಹ ಬಾಂಧವ್ಯವನ್ನು ಬಲಪಡಿಸುವ ಸಂದರ್ಭಗಳಾಗಿ ನಡೆದುಕೊಂಡು ಬಂದಿವೆ. ಹಿಂದುಗಳು, ಮುಸಲ್ಮಾನರು, ಕ್ರೈಸ್ಥರು, ಸಿಖ್ಖರು, ಬೌದ್ಧರು, ಜೈನರು, ಆದಿವಾಸಿಗಳು ಎಲ್ಲರೂ ತಮ್ಮ ತಮ್ಮ ಸಂಪ್ರದಾಯಗಳ ಪ್ರಕಾರ ಹಬ್ಬಗಳನ್ನು ಆಚರಿಸುತ್ತಾರೆ. ಹಬ್ಬಗಳು ಎಲ್ಲರನ್ನು ಒಳಗೊಳಿಸುವ, ಎಲ್ಲರಲ್ಲೂ ಶಾಂತಿಯನ್ನು ಹರಡುವ ಪ್ರಕ್ರಿಯೆಯಾಗಿದೆ. ದೇವರನ್ನು ತಾತ್ವಿಕವಾಗಿ ನಂಬದವರು ಸಹ ಬೇರೆಯವರ ನಂಬಿಕೆಗಳಿಗೆ ಅಡ್ಡಿಯನ್ನುಂಟುಮಾಡುವುದಿಲ್ಲ.

ಆದರೆ ಇತ್ತೀಚೀನ ವರ್ಷಗಳಲ್ಲಿ ವಿಶ್ವದಲ್ಲಿ ವಿಶೇಷವಾಗಿ ಭಾರತದಲ್ಲಿ ಧಾರ್ಮಿಕ ಹಬ್ಬಗಳು ಶಾಂತಿಯನ್ನು ಪಸರಿಸುವ ಬದಲಾಗಿ ಹೆಚ್ಚು ಹೆಚ್ಚಾಗಿ ಅಶಾಂತಿಯನ್ನು ಹರಡುತ್ತಿವೆ. ಹಬ್ಬಗಳ ಮೂಲ ಆಶಯಗಳೇ ಮರೆಯಾಗುತ್ತಿವೆ. ಶಾಂತಿ ಸೌಹಾರ್ಧತೆಯನ್ನು ಹರಡುವ ಬದಲಾಗಿ ನಮ್ಮ ಹಬ್ಬಗಳು ಸಮಾಜದಲ್ಲಿ ಅಶಾಂತಿ, ಆತಂಕವನ್ನು ಹೆಚ್ಚಿಸುತ್ತಿವೆ. ಕೊರೋನಾ ಸೋಂಕಿನ ಕಾರಣದಿಂದ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ. ಇದರ ಹಿಂದಿನ ಸದುದ್ದೇಶವನ್ನು ಅರ್ಥಮಾಡಿಕೊಂಡು ಸಹಕರಿಸುವ ಬದಲಾಗಿ ಈ ಬೆಳವಣಿಗೆಯನ್ನು ಮತೀಯ ಧ್ರುವೀಕರಣಕ್ಕೆ ಬಳಸಿ ನಡೆದಿರುವುದು ಖೇದದ ವಿಷಯ.

ಬೆಂಗಳೂರಿನಲ್ಲಿ ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣಾ ವೇದಿಕೆ ಹಾಗೂ ಬಜರಂಗದಳ ನೇತೃತ್ವದಲ್ಲಿ ಪ್ರತಿಭಟನೆ ನಡೆದಿದೆ. ಗಣಪತಿ ಮೂರ್ತಿಗಳನ್ನು ತಮ್ಮೊಂದಿಗೆ ತಂದಿದ್ದ ಪ್ರತಿಭಟನಾಕಾರರು ನಗರದ ಬಿಬಿಎಂಪಿ ಕೇಂದ್ರ ಕಚೇರಿ ಎದುರು ಪ್ರತಿಭಟಸುತ್ತಾ ಸಾರ್ವಜನಿಕ ಗಣೇಶೋತ್ಸವಕ್ಕೆ ಮಾತ್ರ ನಿರ್ಬಂದ ಯಾಕೆ? ಎಂದು ಕೂಗುತ್ತಿದ್ದರು. ಮತೀಯ ಸಾಮರಸ್ಯಕ್ಕೆ ಧಕ್ಕೆ ತರುವುದೇ ಇಂತಹ ಪ್ರಚೋದಾತ್ಮಕ ಪದ ಬಳಕೆಯ ಉದ್ದೇಶವಾಗಿತ್ತು ಎಂಬುದು ಸ್ವಷ್ಟ. ದೇಶದಲ್ಲಿ ಇಂತಹ ಪ್ರಚೋದನಾಕಾರಿ ಮಾತುಗಳ, ಘೋಷಣೆಗಳ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಧ್ವಂಸಮಾಡುವವರಿಗೆ ಯಾಕೆ ಶಿಕ್ಷೆಯಾಗುವುದಿಲ್ಲ.

ಕೊರೋನಾ ಹಿನ್ನೆಲೆಯಲ್ಲಿ ಸಾವಿರಾರು ಜನರು ಯಾವುದೇ ನಿರ್ಬಂಧವಿಲ್ಲದೆ ಒಂದೆಡೆ ಸೇರುವುದು ಆಚರಣೆಗಳಲ್ಲಿ ತೊಡಗುವುದು ಅಪಾಯಕಾರಿ. ಸರ್ಕಾರ ಇಂತಹ ಮತಾಂಧರ ಒತ್ತಡಗಳಿಗೆ ಮಣಿದು ನಿರ್ಬಂಧಗಳನ್ನು ತೆಗೆದು ಹಾಕಬಹುದು. ಇದು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಸರಿಯಾದುದಲ್ಲ ಎಂಬುದನ್ನು ಅರಿಯಲು ಸರ್ಕಾರದ ಆದೇಶಕ್ಕೆ ಕಾಯಬೇಕಾಗಿಲ್ಲ. ಇಂತಹ ಸರ್ಕಾರಗಳು ನಂಬಿಕೆಗೆ ಅರ್ಹವಲ್ಲ.

ಕೊರೋನಾ ಮೂರನೇ ಅಲೆ ಬೂದಿ ಮುಚ್ಚಿದ ಕೆಂಡದಂತೆ ಕಾಡುತ್ತಿದೆ. ಯಾವುದೇ ಕಾರಣದಿಂದ ನಾವು ಮೈಮರೆಯಬಾರದು. ಗಣೇಶೋತ್ಸವವನ್ನು ರಾಜಕೀಯಗೊಳಿಸುವ ಪ್ರಯತ್ನ ನಡೆಯುತ್ತಿದೆ. ರಾಜಕೀಯ ಪುಢಾರಿಗಳು ಮಾತನಾಡುವುದು ಸಮಾಜದ ಆರೋಗ್ಯಕ್ಕೆ ಪೂರಕವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಯಾವುದೇ ಒಂದು ಮತಧರ್ಮದ ವಕ್ತಾರನಂತೆ ಮಾತನಾಡುವುದು ಸಮಾಜದಲ್ಲಿ ಶಾಂತಿಯನ್ನು ಕದಡುವ ದುರುದ್ದೇಶವನ್ನು ಹೊಂದಿದೆ. ಅಂತವರ ಮಾತುಗಳಿಂದ ಯಾರೂ ಪ್ರಚೋದನೆಗೆ ಒಳಗಾಗಬಾರದು. ಹಬ್ಬಗಳು ನಮ್ಮನ್ನು ಪರಸ್ಪರ ಹತ್ತಿರಕ್ಕೆ ತರಬೇಕು. ನಮ್ಮನ್ನು ಒಂದುಗೂಡಿಸಬೇಕು.

ಇತ್ತೀಚೆಗೆ ನ್ಯಾಯಾಲಯ ಸರ್ಕಾರಿ ಜಾಗದಲ್ಲಿ ಸ್ಥಾಪಿಸಲಾದ ಗಣ್ಯರ ಪ್ರತಿಮೆಗಳನ್ನು ಅನಧೀಕೃತ ದೇವಸ್ಥಾನಗಳನ್ನು ಸ್ಥಳಾಂತರಿಸಬೇಕೆಂದು ಆದೇಶ ಕೊಟ್ಟಿತು. ಆ ಸಮಯದಲ್ಲಿ ಕೆಲವರು 'ಮೊದಲು ದರ್ಗಾಗಳನ್ನು ತೆಗೆಯಿರಿ; ಆನಂತರವಷ್ಟೇ ಹಿಂದುಗಳ ಸ್ಮಾರಕಗಳನ್ನು ತೆಗೆಯಿರಿ. ದೇಶದಲ್ಲಿ ಸಂಘ ಪರಿವಾರ ಸ್ಥಾಪನೆಯಾದ ನಂತರವಷ್ಟೇ ಇಂತಹ ಪ್ರಚೋದನಾಕಾರಿ ರಾಜಕೀಯ ಬೆಳವಣಿಗೆಗಳು ಹೆಚ್ಚುತ್ತಾ ಬಂದಿವೆ. ಇದು ಸಂಘ ಪರಿವಾರದ ಒಡೆದು ಆಳುವ ನೀತಿ. ಅವರು ಅದನ್ನು ಕಲಿತಿರುವುದು ಬ್ರಿಟಿಷರಿಂದ. ನಮ್ಮದೊಂದು ಸಮ್ಮಿಶ್ರ ಸಮಾಜ. ಒಗ್ಗಟ್ಟಿನಲ್ಲೇ ನಮ್ಮ ಬಲವಿದೆ. ಹಬ್ಬಗಳು ನಮ್ಮನ್ನು ಒಂದುಗೂಡಿಸಬೇಕು. ಛಿದ್ರಗೊಳಿಸಬಾರದು. ನಾವು ಆಚರಿಸುವ ಹಬ್ಬಗಳಿಂದ ದುಂದುವೆಚ್ಚ ಆಗಬಾರದು. ಹಸಿದವರಿಗೆ ಅನ್ನ ನೀಡಲು ಸಾಧ್ಯವಾಗಬೇಕು. ಕೊರೋನಾ ವೈರಸ್ ಹರಡುವುದನ್ನು ತಡೆಯಬೇಕು. ಹಾಗೇ ಕೋಮು ದ್ವೇಷದ ವೈರಸ್ ಹಬ್ಬುವುದನ್ನೂ ತಡೆಯಬೇಕು.

ಗಂಗೂರು ದಲಿತರ ಹೋರಾಟ: ಪ್ರತಿಭಟನೆಕಾರರ ಮೇಲೆ ದೌರ್ಜನ್ಯ ನಡೆಸಲು ಪೂರ್ವ ತಯಾರಿ ಮಾಡಿಕೊಂಡಿದೆಯಾ ಜಿಲ್ಲಾಡಳಿತ?




ಗಂಗೂರಿನ ದಲಿತರು ಉಳಮೆ ಮಾಡುತ್ತಿದ್ದ ಜಾಗದಿಂದ ಅವರನ್ನು ತೆರವುಗೊಳಿಸುವ ಕ್ರಮವನ್ನು ವಿರೋಧಿಸಿ ನಿರಂತರವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ಸರಕಾರ ಮತ್ತು ಜಿಲ್ಲಾಡಳಿತ ದಲಿತರ ಬೇಡಿಕೆಗಳನ್ನು ಈಡೇರಿಸವ ಬದಲು ಆ ಜಾಗದಿಂದ ಇವರನ್ನು ತೆರವುಗೊಳಿಸವ ಕಾರ್ಯವನ್ನು ಹಲವು ತಿಂಗಳಿಂದ ನಡೆಸುತ್ತಾ ಬಂದಿದೆ. ಇದರ ವಿರುದ್ದ ಪ್ರಭಲ ಹೋರಾಟ ನಡೆಸಿದ್ದ ಜೀತ ವಿಮುಕ್ತರು ಇಂದು ಉಳಿಮೆ ಮಾಡಲು ನಿರ್ಧರಿಸಿ ಹೋರಾಟಕ್ಕೆ ಮುಂದಾಗಿದ್ದರು. ಈಗಲಾದರೂ ಅವರ ಬೇಡಿಕೆಗಳನ್ನು ಈಡೇರಿಸಬೇಕಿದ್ದ ಜಿಲ್ಲಾಡಳಿತ ಆ ಜಾಗದ ಸುತ್ತ ಆಂಬುಲೆನ್ಸ್ ಮತ್ತು ವೈದ್ಯರ ತಂಡವನ್ನು ನೇಮಿಸಿದೆ. ಇದು ಪ್ರತಿಭಟನೆ ಹತ್ತಿಕ್ಕಲು ಜಿಲ್ಲಾಡಳಿತ ಪ್ರತಿಭಟನೆಕಾರರ ಮೇಲೆ ದೌರ್ಜನ್ಯ ನಡೆಸಲು ಸಿದ್ದತೆ ಮಾಡಿಕೊಂಡಿರುವ ಪೂರ್ವ ತಯಾರಿ ಎಂದು ಪ್ರತಿಭಟನೆಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಗಂಗೂರಿನ ದಲಿತರನ್ನು 1976 ರ ಜೀತ ಪದ್ಧತಿ ನಿರ್ಮೂಲನಾ ಕಾಯ್ದೆಯ ಆಧಾರದ ಮೇಲೆ 1994 ರಲ್ಲಿ 91 ಕುಟುಂಬವನ್ನು ಜೀತದಿಂದ ವಿಮುಕ್ತಿಗೊಳಿಸಿತು. ಈ ಕಾಯ್ದೆಯ ಪ್ರಕಾರ ಜೀತದಿಂದ ವಿಮುಕ್ತಗೊಳಿಸಿದವರಿಗೆ ಸರ್ಕಾರ ಕೃಷಿಯೋಗ್ಯ ಭೂಮಿ ಮತ್ತು ಜೀವನ ನಿರ್ವಹಣೆಗೆ ಅಗತ್ಯವಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಓದಗಿಸರ್ಬೇಕು. ಆದರೆ ಕಳೆದ 27 ವರ್ಷಗಳಿಂದ ಗಂಗೂರಿನ ಜೀತ ವಿಮುಕ್ತರಿಗೆ ಹಾಸನ ಜಿಲ್ಲಾಡಳಿತ ಭೂಮಿಯನ್ನೂ ನೀಡದೆ ಯಾವ ಸೌಕರ್ಯಗಳನ್ನು ನೀಡದೆ. ಜೀತ ನಿರ್ಮೂಲನಾ ಕಾಯ್ದೆಯನ್ನು ಅನುಷ್ಠಾನಗೊಳಿಸಲು ಸಂಪೂರ್ಣ ವಿಫಲವಾಗಿದೆ.

ಇದರಿಂದ ಬೇಸತ್ತು ಜೀವನ ರೂಪಿಸಿಕೊಳ್ಳಲು ಊರಿನ ಪಕ್ಕದಲ್ಲಿ ಖಾಲಿಯಿದ್ದ ಅರಣ್ಯ ಭೂಮಿಯನ್ನು ಉಳುಮರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಈಗ ಆ ಭೂಮಿಯಿಂದಲೂ ದಲಿತರನ್ನು ಒಕ್ಕಲೆಬ್ಬಿಸಲು ಸರ್ಕಾರ ಮುಂದಾಗಿದೆ. ಭೂಹೀನ ದಲಿತರಿಗೆ ಕೃಷಿ ಭೂಮಿ ನೀಡಲು ಕೂಡಲೆ ಕ್ರಮಕೈಗೊಳ್ಳಬೇಕೆಂದು ಈಗಾಗಲೇ ಸರ್ಕಾರ ಹಾಗೂ ಹಾಸನ ಜಿಲ್ಲಾಡಳಿತ, ಅರಕಲಗೂಡು ತಾಲ್ಲೂಕು ಆಡಳಿತಕ್ಕೆ ಆಗ್ರಹಿಸಿ ಹಲವು ಭಾರಿ ಒತ್ತಾಯಿಸಿದ್ದರೂ ಯಾವುದೇ ಕ್ರಮವಹಿಸದ ಅಧಿಕಾರಿಗಳು ಜೀತದಿಂದ ವಿಮುಕ್ತರಾದವರಿಗೆ ಅನ್ಯಾಯ ಎಸಗಿದ್ದಾರೆ.

ಜೀತದಿಂದ ಹೊರಬಂದ ದಲಿತ ಕುಟುಂಬಗಳು ಜೀವನ ಸಾಗಿಸಲು 1970 ರಿಂದಲೂ ಸಾಗುವಳಿ ಮಾಡುತ್ತಿದ್ದ ಗಂಗೂರಿನ ಗೊಬ್ಬಳ್ಳಿ ಅರಣ್ಯ ಪ್ರದೇಶದಲ್ಲಿಯೇ ಕೃಷಿ ಮಾಡಿಕೊಂಡಿರುತ್ತಾರೆ. 1974ರಲ್ಲಿಯೇ ಆ ಜಾಗದ ಹಕ್ಕು ಪತ್ರ ನೀಡುವಂತೆ ಸರ್ಕಾರಕ್ಕೆ ಹಣ ಪಾವತಿಯಾಗಿದೆ. ಅಲ್ಲದೆ, ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದಾರೆ. ಇಷ್ಟಿದ್ದರೂ ಸರ್ಕಾರ ಜಮೀನಾಗಲೀ ಅಥವಾ ಸಾಗುವಳಿ ಮಾಡುತ್ತಿರುವ ಭೂಮಿಯ ಹಕ್ಕುಪತ್ರವಾಗಲೀ ನೀಡಲ್ಲ. ಹಾಗಾಗಿ ಭೂಮಿ ಮಂಜೂರು ಮಾಡುವವರೆಗೆ ಅವರು ಉಳುಮೆ ಮಾಡಿಕೊಂಡು ಬದುಕುತ್ತಿದ್ದ ಗೊಬ್ಬಳಿ ಅರಣ್ಯ ಪ್ರದೇಶದಲ್ಲಿ ಜೀವನೋಪಾಯಕ್ಕಾಗಿ ಕೃಷಿ ಚಟುವಟಿಕೆ ನಡೆಸಲು ಅವಕಾಶ ನೀಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.



ಹಲವಾರು ಬಾರಿ ಪ್ರತಿಭಟನೆ ನಡೆಸಿದರೂ ಇವರ ಬೇಡಿಕೆಗಳಿಗೆ ಜಿಲ್ಲಾಡಳಿತವಾಗಲಿ, ಸರಕಾರವಾಗಲಿ ಸ್ಪಂದಿಸಿದ ಕಾರಣ ಇಂದು ಊರಿನ ಪಕ್ಕದಲ್ಲಿರುವ ಅರಣ್ಯ ಭೂಮಿಯನ್ನೇ ಉಳುಮೆ ಮಾಡಲು ಪ್ರತಿಭಟನಾಕಾರರು ನಿರ್ಧರಿಸಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಆದರೆ ಬೇಡಿಕೆಗಳನ್ನು ಈಡೇರಿಸುವ ಬದಲಿಗೆ ರಾಜ್ಯ ಸರಕಾರ ಜಿಲ್ಲಾಡಳಿತದ ಮೂಲಕ ಹೋರಾಟ ಹತ್ತಿಕ್ಕಲು ಪ್ರಯತ್ನಿಸಿದೆ. ಹೋರಾಟದ ಜಾಗಕ್ಕೆ ಆಂಬುಲೆನ್ಸ್ ಮತ್ತು ವೈದ್ಯರ ತಂಡವನ್ನು ನಿಯೋಜಿಸಿದೆ. ಅಂದರೆ ಹೋರಾಟಗಾರರ ಮೇಲೆ ಲಾಠೀ ಬೀಸಲು ಇಲ್ಲವೆ ಅವರ ಮೇಲೆ ಅಶ್ರುವಾಯು ಸಿಡಿಸಲು ಸಿದ್ದತೆ ಮಾಡಿಕೊಂಡಿದೆ ಎಂದು ಸುತ್ತೋಲೆಗಳನ್ನು ನೋಡಿದರೆ ಅರ್ಥವಾಗುತ್ತದೆ.

ಜಿಲ್ಲಾಡಳಿತವು ಆರೋಗ್ಯ ಇಲಾಖೆಗೆ ಆದೇಶ ನೀಡಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ಅಹಿತಕರ ಘಟನೆ ನಡೆಯುವ ಸಾಧ್ಯತೆ ಇದ್ದು ಆಂಬುಲೆನ್ಸ್ ಮತ್ತು ವೈದ್ಯರ ತಂಡವನ್ನು ನಿಯೋಜಿಸಬೇಕೆಂದು ಆದೇಶಿಸಲಾಗಿದೆ. ಇದನ್ನು ಗಮನಿಸಿದರೆ ಜಿಲ್ಲಾಡಳಿತವು ಗಂಗೂರು ದಲಿತರ ಮೇಲೆ ದೌರ್ಜನ್ಯ ನಡೆಸಲು ಪೂರ್ವ ತಯಾರಿ ಮಾಡಿಕೊಂಡು ನಂತರ ಚಿಕಿತ್ಸೆ ನೀಡಲು ತಯಾರಿ ಮಾಡಿದಂತಿದೆ. ಹಾಸನದ ಜಿಲ್ಲಾಡಳಿತದ ಈ ಕ್ರಮ ಅತ್ಯಂತ ಖಂಡನಾರ್ಹವಾದದ್ದು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಎಚ್.ಆರ್. ನವೀನ್ ಕುಮಾರ್ ಆರೋಪಿಸಿದ್ದಾರೆ.

ಜೆಎಂಎಸ್‌ನಿಂದ ಅಡುಗೆ ಅನಿಲ ದರ ಏರಿಕೆ ವಿರುದ್ಧ ಪ್ರತಿಭಟನೆ

ವರದಿ: **ವಾ.ಉ.**



ಅಡುಗೆ ಅನಿಲ ದರವನ್ನು ವಿಪರೀತವಾಗಿ ಏರಿಸಿರುವ ಕೇಂದ್ರ ಸರಕಾರದ ನೀತಿಯನ್ನು ಪ್ರತಿಭಟಿಸಿ ದಿ: 6-9-2021 ರಂದು ಮಂಗಳೂರು ಮಿನಿ ವಿಧಾನಸೌಧದ ಮುಂದುಗಡೆ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಅಧ್ಯಕ್ಷೆ ಜಯಂತಿ ಶೆಟ್ಟಿಯವರು ಮಾತನಾಡುತ್ತಾ, ಸನ್ಮಾನ್ಯ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರಕಾರವು ಚುನಾವಣಾ ಭರವಸೆಯನ್ನು ಮರೆಮಾಚಿ ವಿಪರೀತವಾಗಿ ಅಡುಗೆ ಅನಿಲ ದರವನ್ನು ಏರಿಕೆ ಮಾಡಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಇಳಿಕೆಯಾಗಿದ್ದರೂ ಕೂಡಾ ಕೇಂದ್ರ ಸರಕಾರ ತೆರಿಗೆಯನ್ನು ಹಾಕುತ್ತಾ ದರ ಇಳಿಯದಂತೆ ದೇಶದ ತೈಲ ಉದ್ಯಮಿಗಳಿಗೆ ಲಾಭ ಮಾಡುವುದರ ಮುಖಾಂತರ ದೇಶದ ಜನತೆಯನ್ನು ಲೂಟಿ ಮಾಡುತ್ತಿದೆ. ಪೆಟ್ರೋಲ್, ಡಿಸೇಲ್, ಅಗತ್ಯ ವಸ್ತುಗಳು, ವಿದ್ಯುತ್ ದರವನ್ನು ಏರಿಕೆ ಮಾಡುವುದರ ಮುಖಾಂತರ ಸಾಮಾನ್ಯ ಜನರು ಬದುಕು ಸಾಗಿಸುವುದು ಕಷ್ಟಕರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏರುತ್ತಿರುವ ಅಡುಗೆ ಅನಿಲ ದರವನ್ನು ಇಳಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಯಾವುದೇ ಪ್ರಯತ್ನವನ್ನು ಮಾಡುತ್ತಿಲ್ಲ. ಬದಲಾಗಿ ಜನಸಾಮಾನ್ಯರನ್ನು ಹಿಂದುತ್ವದ ಹೆಸರಿನಲ್ಲಿ ತಮ್ಮ ಬಾಲಂಗೋಚಿಯಾಗಿ ಇರುವಂತಹ ರೀತಿಯ ಸ್ಥಿತಿಯನ್ನು ನಿರ್ಮಾಣ ಮಾಡಿದೆ ಎಂದು ಅವರು ಆರೋಪಿಸಿದರು.

ಜೆಎಂಎಸ್‌ನ ಮುಂದಾಳು ಪದ್ಮಾವತಿ ಶೆಟ್ಟಿಯವರು ಮಾತನಾಡುತ್ತಾ ವಿಪರೀತವಾಗಿ ಎಲ್ಲಾ ವಸ್ತುಗಳ ದರ ಏರಿಕೆಯಾಗುತ್ತಿದೆ. ಆದರೆ ದುಡಿದು ಬದುಕುತ್ತಿರುವಂತಹ ಕಾರ್ಮಿಕರಿಗೆ ಅದರಲ್ಲೂ ಮಹಿಳಾ ಕಾರ್ಮಿಕರಿಗೆ ವೇತನ ಏರಿಕೆಯಾಗುತ್ತಿಲ್ಲ, ಹಾಗೂ ಕೆಲಸದ ಭದ್ರತೆ ಇಲ್ಲ. ಮಾತ್ರವಲ್ಲದೆ, ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ಬಂಡವಾಳಗಾರರ ಹಿತಾಸಕ್ತಿಯನ್ನು ಕಾಪಾಡುತ್ತಿದೆ.

ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿ ಮಹಿಳಾ ಮುಂದಾಳು ಅಸುಂತಾ ಡಿಸೋಜಾರವರು ಮಾತನಾಡಿದರು. ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾರತಿ ಬೋಳಾರ್, ನಳಿನಾಕ್ಷಿ, ಭವ್ಯಾ, ಸರೋಜಿನಿ, ರೇಖಲತಾ, ಸುಧಾ ಕೆ.ರಾವ್, ಶಾಲಿನಿ, ಜಯಶ್ರೀ, ಪ್ರಮೀಳಾ ಶಕ್ತಿನಗರ ಮೊದಲಾದವರು ಭಾಗವಹಿಸಿದ್ದರು.

ತ್ರಿಪುರಾ ಬಿಜೆಪಿ ಹಾಗೂ ಮತಾಂಧರ ಗುಂಡಾಗಿರಿ: ಸಿಪಿಐ(ಎಂ) ಖಂಡನೆ

ತ್ರಿಪುರಾ ರಾಜ್ಯದ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಛೇರಿ ಮತ್ತಿತರೆಡೆ ಧಾಳಿ ನಡೆಸಿ ಗುಂಡಾಗಿರಿ ನಡೆಸಿರುವ ಅಲ್ಲಿನ ಬಿಜೆಪಿ ಹಾಗೂ ಹಿಂದೂ ಮತಾಂಧರ ದುಷ್ಕೃತ್ಯವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ಪಕ್ಷದ ತ್ರಿಪುರಾ ರಾಜ್ಯ ಸಮಿತಿಯ ಎರಡು ಪ್ರಮುಖ ಕಛೇರಿಗಳಿಗೆ ಬೆಂಕಿ ಹಚ್ಚಲಾಗಿದ್ದು ಅಪಾರ ಪ್ರಮಾಣದ ಆಸ್ತಿಗೆ ಹಾನಿಯಾಗಿದೆ ಮತ್ತು ದಾಖಲಾತಿಗಳು ಸುಟ್ಟು ಹೋಗಿವೆ.

ಮರಳಿ ಸಿಪಿಐ(ಎಂ) ತ್ರಿಪುರದಲ್ಲಿ ಜನಪ್ರಿಯತೆ ಪಡೆಯುವುದನ್ನು ಸಹಿಸದೆ ಹತಾಶತನದಿಂದ ಇಂತಹ ದುಷ್ಕೃತ್ಯದಲ್ಲಿ ಬಿಜೆಪಿ ತೊಡಗಿದೆ ಎಂದು ಕರ್ನಾಟಕ ರಾಜ್ಯ ಸಮಿತಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಅವರು ತಿಳಿಸಿದ್ದು, ಈ ಗುಂಡಾಗಿರಿಯಲ್ಲಿ ತೊಡಗಿದ ದುಷ್ಕರ್ಮಿಗಳನ್ನು ಈ ಕೂಡಲೇ ಬಂಧಿಸಬೇಕು. ಅದೇ ರೀತಿ ಧಾಳಿಯನ್ನು ತಡೆಯುವಲ್ಲಿ ವಿಫಲವಾದ ಮತ್ತು ಕುಮ್ಮಕ್ಕು ನೀಡುವಂತೆ ಮೂಕ ಪ್ರೇಕ್ಷಕರಾಗಿದ್ದ ಪೋಲೀಸರನ್ನು ಉದ್ಯೋಗದಿಂದ ವಜಾ ಮಾಡಬೇಕೆಂದು ತ್ರಿಪುರಾ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಅಲ್ಲದೆ, ಇಂತಹ ಹತಾಶ ಧಾಳಿಗಳು ಸಿಪಿಐ(ಎಂ) ಅನ್ನು ಬೆದರಿಸಲಾರವೆಂದು ಎಚ್ಚರಿಕೆ ನೀಡಿದ್ದಾರೆ.

ಸುಪ್ರೀಂ ನೇಮಿಸಿದ ಸಮಿತಿ ಕಾಯ್ದೆ ರದ್ದತಿ ಬಗ್ಗೆ ಪ್ರಸ್ತಾಪಿಸಿಲ್ಲ-ರೈತ ಹೋರಾಟ ಮುಂದುವರೆದಿದೆ: ಕೋಡಿಹಳ್ಳಿ ಚಂದ್ರಶೇಖರ್

ಸೆ.27ರ ಕರ್ನಾಟಕ ಬಂದ್ ಯಶಸ್ಸಿಗೆ ರೈತ-ಕಾರ್ಮಿಕ ದಲಿತ ಮತ್ತು ಎಲ್ಲ ಜನಪರ ಸಂಘಟನೆ ಕರೆ

ಕೃಷಿ ಕಾಯ್ದೆಗಳ ರದ್ದತಿಗಾಗಿನ ಹೋರಾಟ ಕೇವಲ ಉತ್ತರ ಭಾರತದ ಪಂಜಾಬ್, ಹರಿಯಾಣಕ್ಕೆ ಸೀಮಿತವಾಗಿಲ್ಲ. ದೇಶದ ಎಲ್ಲೆಡೆ ಹೋರಾಟಗಳು ನಡೆಯುತ್ತಿದೆ. ಕರ್ನಾಟಕದಲ್ಲಿ ಕೋವಿಡ್ ಪರಿಸ್ಥಿತಿ ಹೆಚ್ಚಿನ ಗಂಭೀರತೆ ತೀವ್ರವಾಗದೆ ಇದ್ದಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚಿನ ಸೇರಬಹುದಾದ ಮಹಾಪಂಚಾಯತ್‌ಗಳನ್ನು 8 ರಿಂದ 10ಕ್ಕೂ ಹೆಚ್ಚು ಕಡೆಗಳಲ್ಲಿ ಹಮ್ಮಿಕೊಳ್ಳಲಾಗುತ್ತಿತ್ತು. ಮುಂಬರುವ ದಿನಗಳಲ್ಲಿ ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೋರಾಟ ಮುಂದುವರೆಸಲು ಸಂಯುಕ್ತ ಹೋರಾಟ-ಕರ್ನಾಟಕ ನಿರ್ಧರಿಸಿದೆ.

ಬೆಂಗಳೂರು: ರೈತರ ಹೋರಾಟ ತೀವ್ರತೆಯಿಂದಾಗಿ ದೇಶದ ಸರ್ವೋಚ್ಚ ನ್ಯಾಯಾಲಯ ಮಧ್ಯಪ್ರವೇಶಿಸಿ ಸಮಿತಿಯೊಂದನ್ನು ರಚಿಸಿದ್ದು ಆ ಸಮಿತಿಯ ಕೆಲವು ಸೂಚನೆಗಳು ಶೇ.100ರಷ್ಟು ರೈತಪರವಾಗಿ ಇದ್ದೇವೆ ಎಂದು ಹೇಳಿದರೂ ಸಹ ಕೃಷಿ ಕಾಯ್ದೆಗಳ ರದ್ದತಿ ಬಗ್ಗೆ ಪ್ರಸ್ತಾಪಿಸಿಲ್ಲ, ಬದಲಿಗೆ ಬದಲಾವಣೆಗಳನ್ನು ಸೂಚಿಸಿದೆ. ಸಮಿತಿ ರಚನೆ ಮಾಡಿದಾಗಲೇ ದೇಶದ ಎಲ್ಲಾ ರೈತ ಸಂಘಟನೆಗಳ ಜಂಟಿ ವೇದಿಕೆ ವಿರೋಧಿಸಿತ್ತು. ಹಾಗಾಗಿಯೇ ರೈತ ಹೋರಾಟ ಮುಂದುವರೆದಿದೆ ಹೋರಾಟ ಮತ್ತಷ್ಟು ತೀವ್ರಗೊಳ್ಳುತ್ತಿದೆ ಎಂದು ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಸೆಪ್ಟಂಬರ್ 27ರಂದು ಹಮ್ಮಿಕೊಂಡಿರುವ ಭಾರತ್ ಬಂದ್ ಕರೆಯ ಬಗ್ಗೆ ತಿಳಿಸಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷರು ಹಾಗೂ ಸಂಯುಕ್ತ ಹೋರಾಟ-ಕರ್ನಾಟಕ ದ ಸಂಯೋಜಕರಾದ ಕೋಡಿಹಳ್ಳಿ ಚಂದ್ರಶೇಖರ್ ಅವರು ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು ಎಂಎಸ್‌ಪಿ ಬಗೆಗಿನ ಗೊಂದಲಗಳ ಬಗ್ಗೆ ಭಾರೀ ಪ್ರಚಾರ ಮಾಡಿ ಅತ್ಯಧಿಕ ಬೆಲೆ ನಿಗದಿ ಮಾಡಲಾಗುತ್ತಿದೆ ಎಂದು ಹೇಳುತ್ತಿರುವುದ ಸಹ ಬೋಗಸ್ ಆಗಿದೆ. ಅದು ಇಡೀ ದೇಶದ ರೈತರನ್ನು ಅಪಮಾನ ಮಾಡುವುದಾಗಿದೆ. ರೈತರಿಗೆ ಬೇಕಿರುವುದು ಸಾಮಾನ್ಯ ಕನಿಷ್ಠ ಬೆಂಬಲ ಬೆಲೆ ಅಲ್ಲ, ರೈತನ ರಕ್ಷಣೆಗಾಗಿ ಬೆಲೆ ಬೇಕಾಗಿದೆ. ಇವೆಲ್ಲವುಗಳಲ್ಲಿ ಪ್ರಸಕ್ತ ಎಂ.ಎಸ್.ಸ್ವಾಮಿನಾಥನ್ ಅವರ ವರದಿಯ ರೈತರಿಗೆ ಅನುಕೂಲವಾಗಲಿದ್ದು ಅದನ್ನು ಜಾರಿ ಮಾಡಲು ಮುಂದಾಗುತ್ತಿಲ್ಲ. ಕಳೆದ ಏಳು ವರ್ಷಗಳಿಂದ ಸ್ವಾಮಿನಾಥನ್ ವರದಿ ಜಾರಿ ಮಾಡುತ್ತೇವೆ ಎಂದು ಪ್ರಚಾರ ಮಾಡುವ ಬಿಜೆಪಿ ಸರಕಾರಗಳು ಅದನ್ನು ಜಾರಿಗೆ ತರದೇ ದೇಶ ವಿರೋಧಿ, ಜನವಿರೋಧಿ ಕಾಯ್ದೆಗಳನ್ನು ತರುವ ಮೂಲಕ ಕಾರ್ಪೋರೇಟ್ ಕಂಪನಿ ನೀತಿಗೆ ಮುಂದಾಗುತ್ತಿದೆ ಎಂದು ಹೇಳಿದರು.

ಕೇಂದ್ರದ ಬಿಜೆಪಿ ಸರಕಾರ ಅನುಸರಿಸುತ್ತಿರುವ ನೀತಿಗಳನ್ನೇ ರಾಜ್ಯದಲ್ಲಿಯೂ ಜಾರಿಗೆ ತರುತ್ತಿರುವ ರಾಜ್ಯ ಸರಕಾರವು ಕಾಯ್ದೆ ಜಾರಿಯಲ್ಲಿನ ಲೋಪದೋಷಗಳನ್ನು ಸಹ ಪರಿಶೀಲಿಸುವ ಅಗತ್ಯವಿದೆ. ಉಳುವವನೇ ಭೂ ಒಡೆಯ ಎಂಬ ಕಾನೂನಿನ ಪ್ರಸಕ್ತ ಪರಿಸ್ಥಿತಿಯನ್ನು ಸಮಗ್ರವಾದ ಅಧ್ಯಯನ ನಡೆಸಿ ವಾಸ್ತವತೆಯನ್ನು ಅರಿತುಕೊಂಡು ಸರಕಾರ ಮುನ್ನಡೆಯಬೇಕು ಅಲ್ಲಿಯವರೆಗೂ ಜನಪರ ಎಂದು ಹೇಳಿಕೊಂಡು ಜಾರಿಗೊಳಿಸಲಾಗುತ್ತಿರುವ ಯಾವುದೇ ಕಾಯ್ದೆಗಳು ನಿಜವಾಗಿಯೂ ಜನಪರವಲ್ಲ, ಜನವಿರೋಧಿಯಾಗಿದೆ ಹಾಗಾಗಿ ಜನ ವಿರೋಧಿ, ದೇಶ ವಿರೋಧಿ ನೀತಿಗಳ ವಿರುದ್ಧ ಸೆಪ್ಟೆಂಬರ್ 27ರಂದು ಭಾರತ್ ಬಂದ್ ನಡೆಯುತ್ತಿದೆ ಎಂದರು.



ಎಲ್ಲಾ ಕಾರ್ಮಿಕ ಸಂಘಟನೆಗಳ ಪರವಾಗಿ ಮಾತನಾಡಿದ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ 'ಕಾರ್ಮಿಕರ ಕಾನೂನುಗಳನ್ನು ದಮನ ಮಾಡುವ ಮೂಲಕ ಹಕ್ಕುಗಳನ್ನು ಕಸಿಯಲಾಗುತ್ತಿದೆ. ಅಲ್ಲದೆ, ಕೇಂದ್ರ ಸರಕಾರ ನಗದೀಕರಣದ ಹೆಸರಿನಲ್ಲಿ ದೇಶದ ಸಾರ್ವಜನಿಕ ಆಸ್ತಿಗಳನ್ನು ಖಾಸಗಿ ಸಂಸ್ಥೆಗಳಿಗೆ ವಹಿಸುವ ಮೂಲಕ ಅತ್ಯಂತ ದೇಶವನ್ನು ಕಾರ್ಪೋರೇಟೀಕರಣಕ್ಕೆ ಒಳಪಡಿಸಲು ದಾಪುಗಾಲು ಇಡುತ್ತಿವೆ. ಕಾರ್ಮಿಕರ ಬಗೆಗಿನ ಹಲವು ಸುಗ್ರೀವಾಜ್ಞೆಗಳ ಮೂಲಕ, ಎಸ್ಮಾ ಜಾರಿಯ ಮೂಲಕ ಜನಪರವಾದ ಇಲ್ಲದಂತೆ ಮಾಡಲಾಗುತ್ತಿದೆ. ಎಲ್ಲದರಲ್ಲೂ ತಾ ಮುಂದು ಎಂದು ರಾಜ್ಯ ಸರಕಾರ ಮುಂದಾಗುತ್ತಿದ್ದು ಎಲ್ಲವನ್ನು ಯಥಾವತ್ತಾಗಿ ಜಾರಿಗೊಳಿಸುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದ ರಾಜ್ಯ ಸರಕಾರದ ಮೂಲಕವೇ ಎಲ್ಲೆಡೆ ಅನ್ವಯಗೊಳಿಸಲಿಕ್ಕಾಗಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸಿ, ನೀತಿಯ ವಿರೋಧಗಳ ಬಗ್ಗೆ ಗಮನಹರಿಸದೆ, ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುತ್ತಿದೆ ಇವೆಲ್ಲವುಗಳನ್ನು ಒಳಗೊಂಡು ದೇಶವ್ಯಾಪಿ ರೈತ ಕಾರ್ಮಿಕರ ಬೃಹತ್ ಭಾರತ್ ಬಂದ್ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ 'ಕೇಂದ್ರದ ಮೂರು ಕೃಷಿ ಕಾಯ್ದೆಗಳು, ವಿದ್ಯುತ್ ಮಸೂದೆ, ಕನಿಷ್ಠ ಬೆಂಬಲ ಬೆಲೆ ಕಾನೂನು ಬೇಡಿಕೆಗಳ ಜೊತೆಗೆ ರಾಜ್ಯದ ಕೃಷಿ ಭೂಮಿಯನ್ನು ಶ್ರೀಮಂತರು, ಕಾರ್ಪೋರೇಟ್ ಕಂಪನಿಗಳಿಗೆ ವಹಿಸಲು ಜಾರಿಗೆ ತಂದ 'ಭೂ ಸುಧಾರಣಾ ಕಾಯ್ದೆ ತಿದ್ದುಪಡಿ', ಕೃಷಿ ಉತ್ಪಾದನೆಯ ಜೊತೆಗೆ ಕೃಷಿ ಮಾರುಕಟ್ಟೆಯನ್ನು ಕಾರ್ಪೊರೇಟ್ ಕಂಪನಿಗಳಿಗೆ ದಾರೆ ಎರೆಯಲು ಜಾರಿಗೆ ತಂದಿರುವ ಎಪಿಎಂಸಿ ಕಾಯ್ದೆ ತಿದ್ದುಪಡಿ, ಹೈನುಗಾರಿಕೆಯಲ್ಲಿ ತೊಡಗಿರುವ ಅಸಂಖ್ಯಾತ ರೈತರು, ಕೃಷಿಕೂಲಿಕಾರರು ಹಾಗೂ ದಲಿತರು, ಅಲ್ಪಸಂಖ್ಯಾತರು ನದುಕು, ಆಹಾರದ ಹಕ್ಕಿನ ಮೇಲಿನ ದಾಳಿ ನಡೆಸುತ್ತಿರುವ 'ಗೋ ಹತ್ಯೆ ನಿಷೇಧ ಕಾಯ್ದೆ'ಗೆ ತಂದಿರುವ ತಿದ್ದುಪಡಿಗಳನ್ನು ರಾಜ್ಯ ಸರಕಾರ ಕೈಬಿಡಬೇಕು. ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಪೊರೇಟ್ ಪರವಾದ ನಾಲ್ಕು ಕಾರ್ಮಿಕ ಕಾಯ್ದೆ ತಿದ್ದುಪಡಿಗಳನ್ನು ಕೈಬಿಡಬೇಕೆಂದು ಕಂಪನಿಗಳಿಗಾಗಿ ಲಾಭ ತರಲು ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಇತ್ಯಾದಿ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನೀತಿಗಳ ವಿರುದ್ಧ ಸೆಪ್ಟೆಂಬರ್ 27ರಂದು ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿದೆ. ಬಂದ್ ಅನ್ನು ಯಶಸ್ವಿಗೊಳಿಸಬೇಕೆಂದು ಎಲ್ಲಾ ಜನತೆಗೆ ಹಾಗೂ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು, ಕನ್ನಡ ಪರ ಸಂಘಟನೆಗಳು ಹಾಗೂ ವರ್ತಕರನ್ನು ಸಂಯುಕ್ತ ಹೋರಾಟ-ಕರ್ನಾಟಕ ಮೂಲಕ ವಿನಂತಿಸಿಕೊಳ್ಳುತ್ತೇವೆ ಎಂದರು.


ರೈತ ಸಂಘದ ಮುಖಂಡ ಬಡಗಲಪುರ ನಾಗೇಂದ್ರ ಮಾತನಾಡಿ 'ಜನತೆಯ ಸಾರ್ವಭೌಮತೆಯೆ ಧಕ್ಕೆ ಎದುರಾದಾಗ ಹೋರಾಟ ಅನಿವಾರ್ಯ. ಜನತೆಯ ವಿರುದ್ಧವಾದ ನೀತಿಗಳನ್ನು ರೂಪಿಸಲು ನಾವೇ ಚುನಾಯಿಸಿದ ಸರಕಾರದ ಪ್ರತಿನಿಧಿ ಪ್ರಧಾನಿ ನರೇಂದ್ರಮೋದಿ ದಳ್ಳಾಳಿಯಂತೆ ವರ್ತಿಸುತ್ತಿದ್ದು, ದೇಶವನ್ನು ಮಾರಾಟ ಮಾಡಲು ಮುಂದಾಗುತ್ತಿದ್ದಾರೆ. ನಮ್ಮ ಹೋರಾಟ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆಯಾಗಿದೆ. ನಿಜವಾದ ದೇಶಪ್ರೇಮ ಹೋರಾಟ ಇದಾಗಿದೆ. ಇತ್ತೀಚಿಗೆ ಮುಜಾಫರ್ ನಗರದಲ್ಲಿ ಸಂಘಟಿಸಿದ ಮಹಾಪಂಚಾಯತ್ ಸಭೆಯಲ್ಲಿ 11 ಲಕ್ಷಕ್ಕೂ ಹೆಚ್ಚಿನ ಜನಸ್ತೋಮ ಸೇರಿದ್ದು, ➚



ಸರಸ್ವತಿ ಗಜಾನನ ರಿಸಬೂಡ್ ಅವರಿಗೆ ಭಾವಪೂರ್ಣ ನಮನ

ಕನ್ನಡದ ಹಿರಿಯ ಅನುವಾದಕಿಯರಲ್ಲಿ ಒಬ್ಬರಾದ ಶ್ರೀಮತಿ ಸರಸ್ವತಿ ಗಜಾನನ ರಿಸಬೂಡ್ ಈಚೆಗೆ ಅಂದರೆ, 2021ರ ಆಗಸ್ಟ್ 25 ರಂದು ನಿಧನರಾದರು. ಬೆಂಗಳೂರಿನ ಜೆ.ಪಿ. ನಗರದಲ್ಲಿ ಮಗ ಡಾ.ಜಯಂತ ರಿಸಬೂಡ ಅವರೊಂದಿಗೆ ವಾಸವಾಗಿದ್ದ ಸರಸ್ವತಿ ರಿಸಬೂಡ ಅವರು ತಮ್ಮ ಬದುಕಿನ ಕೊನೆಯ ದಿನಗಳನ್ನು ಕಳೆದರು.

ಮಹಾರಾಷ್ಟ್ರದ ಸಾಂಗ್ಲಿಯಿಂದ ಕರ್ನಾಟಕಕ್ಕೆ ಸರಸ್ವತಿ ರಿಸಬೂಡ್ ಅವರು ಕನ್ನಡ ಕಲಿತು, ಮರಾಠಿಯ ಪ್ರಮುಖ ಲೇಖಕಿಯರಾದ ಇರಾವತಿ ಕರ್ವೆ, ದುರ್ಗಾ ಭಾಗವತ್, ಗೋದಾವರಿ ಪರುಲೇಕರ್, ಛಾಯಾ ದಾತಾರ್ ಮುಂತಾದವರ ಕೃತಿಗಳನ್ನು ಸಮರ್ಥವಾಗಿ ಕನ್ನಡಕ್ಕೆ ತಂದರು.



ಸರಸ್ವತಿ ರಿಸಬೂಡ್ ಅವರು ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸ ಮಾಡಿದ್ದರು. ಅವರ ಪತಿ ಗಜಾನನ ವೆಂಕಟೇಶ ರಿಸಬೂಡ ಅವರು.

ಮಾನವ ಎಚ್ಚೆತ್ತಾಗ:


ಹೋರಾಟಗಳ ಪರಂಪರೆ ಬಗೆಗಿನ ಹಲವಾರು ಕೃತಿಗಳಲ್ಲಿ ಅತ್ಯಂತ ವಿಶಿಷ್ಟವಾದ ಕೃತಿಯೆಂದರೆ ಮಾನವ ಎಚ್ಚೆತ್ತಾಗ ಕೃತಿಯಾಗಿದೆ. ಮೂಲತಃ ಇದು ಏಳು ದಶಕಗಳ ಹಿಂದೆ ಜೀತ ಪದ್ಧತಿಯನ್ನು ನಿರ್ಮೂಲನೆ ಗೊಳಿಸುವಲ್ಲಿ ಯಶಸ್ವಿಯಾದ ವಾರಲೀ ಆದಿವಾಸಿ ಜನಗಳ ಹೋರಾಟದ ಕಥೆ.

ಮಾನವ ಎಚ್ಚೆತ್ತಾಗ ತನಗೆ ಹಾಕಿದ ಕೊಳವನ್ನು ಕಿತ್ತೆಸೆಯಬಲ್ಲ, ಶೋಷಣೆಯ ನೊಗವನ್ನು ಮುರಿದೊಗೆಯಬಲ್ಲ, ಜೀವ ಹಿಂಡುವ ವ್ಯವಸ್ಥೆಯನ್ನು ಬದಲಿಸಬಲ್ಲ ಎಂಬುವುದನ್ನು ಚರಿತ್ರೆಯುದ್ದಕ್ಕೂ ನೋಡುತ್ತೇವೆ. ಹೀಗೆ ನೂರಾರು ವರ್ಷಗಳಿಂದ ಜಮೀನ್ದಾರಿ, ಭೂಮಾಲೀಕರ ಕ್ರೌರ್ಯವನ್ನು ಬಾಯ್ಮುಚ್ಚಿ ಒಪ್ಪಿಕೊಂಡ ಆಗಿನ ಮುಂಬೈ ಪ್ರಾಂತದ ಠಾಣೆ ಜಿಲ್ಲೆಯ ಈ ವಾರಲೀ ಆದಿವಾಸಿ ಸಮುದಾಯ ಎಚ್ಚರಗೊಳ್ಳುವವರೆಗಿನ ಹೋರಾಟದ ಕಥೆಯನ್ನು ಈ ಪುಸ್ತಕದಲ್ಲಿ ಸಶಕ್ತವಾಗಿ ಹಿಡಿದಿಟ್ಟಿದ್ದಾರೆ.

ಅನುವಾದಿತ ಪ್ರಮುಖ ಕೃತಿಗಳು

ಡಾ. ಇರಾವತಿ ಕರ್ವೆ ಅವರ ಯುಗಾಂತ, ಛಾಯಾ ದಾತಾರ್ ಅವರ ಸ್ತ್ರೀ–ಪುರುಷ, ದುರ್ಗಾ ಭಾಗವತ್ ಅವರ ದಿಗಂತದಾಚೆ, ಗೋದಾವರೀ ಪರುಳೇಕರ್ ಅವರ ಮಾನವ ಎಚ್ಚೆತ್ತಾಗ, ಪು.ಲ.ದೇಶಪಾಂಡೆ ಅವರ ಸುಂದರ ನಾನಾರುವೆ, ಗ.ಪ. ಪ್ರಧಾನ್ ಅವರ ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ, ಶ್ರೀಪಾದ ರಘುನಾಥ ಭಿಡೆ ಅವರ ವಾಲ್ಮೀಕಿ ರಾಮಾಯಣ–ಶಾಪ ಮತ್ತು ವರ ಪುಸ್ತಕಗಳನ್ನು ಅನುವಾದಿಸಿದ್ದಾರೆ.

ಅಲ್ಲದೆ, ಕನ್ನಡ ಶಿಕಾ ಎಂಬ ಕನ್ನಡ ಸ್ವಯಂಬೋಧಿನಿ ಪುಸ್ತಕವನ್ನು ರಚಿಸಿರುವ ಸರಸ್ವತೀ ರಿಸಬೂಡ ಅವರಿಗೆ ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುವಾದಕ್ಕಾಗಿ ಕುವೆಂಪು ಭಾಷಾಭಾರತಿ ಗೌರವ ಪ್ರಶಸ್ತಿ ಲಭಿಸಿದೆ.



ನಮಗೆ ನೆರಳು ನೀಡುವ ಕಟ್ಟಡ ಕಾರ್ಮಿಕರು ಬೀದಿಯಲ್ಲಿದ್ದಾರೆ – ವೆಂಕಟೇಶ್ ಗೌಡ

ಕಟ್ಟಡ ನಿರ್ಮಾಣಗಳ ಮೂಲಕ ನಗರ, ಗ್ರಾಮಗಳನ್ನು ಸುಂದರವಾಗಿ ಕಾಣುವಂತೆ ಮಾಡಿ, ನಮ್ಮನ್ನೆಲ್ಲ ನೆರಳಿನಲ್ಲಿ ಬದುಕುವಂತೆ ಮಾಡುವ ಕಟ್ಟಡ ಕಾರ್ಮಿಕನ ಬದುಕು ಬೀದಿಯಲ್ಲಿದೆ. ಮಳೆ, ಚಳಿಗೆ ಕಾರ್ಮಿಕನ ದೇಹ ನರಳುತ್ತಿದೆ ಎಂದು ಹಿರಿಯ ವಕೀಲ ಕೆ.ಆರ್. ವೆಂಕಟೇಶ್ ಗೌಡ ಕಳವಳ ವ್ಯಕ್ತಪಡಿಸಿದ್ದಾರೆ.

ವಿಮಾನೌಕರರ ಭವನದಲ್ಲಿ ನಡೆದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (CWFI) ನ ಎರಡು ದಿನಗಳ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ, ಸಂಸತ್ತು, ವಿಧಾನಸೌಧ, ಆಡಳಿತದ ಕಚೇರಿಗಳು, ಸುಪ್ರೀಂ ಕೋರ್ಟ್, ಹೈಕೋರ್ಟ್ ಸೇರಿದಂತೆ ಎಲ್ಲಾ ಕಟ್ಟಡಗಳನ್ನು ನಿರ್ಮಾಣ ಮಾಡಿದ ಕೊಡುಗೆ ಕಟ್ಟಡ ಕಾರ್ಮಿಕರದ್ದಾಗಿದೆ. ದಿನಂಪ್ರತಿ ಈ ಕಾರ್ಮಿಕರನ್ನು ನೆನಪಿಸಿಕೊಂಡು, ನಮಿಸಿ ಸಂಸತ್ತು, ವಿಧಾನಸೌಧ, ಕೋರ್ಟ್ ಕಚೇರಿಗಳ ಒಳಗೆ ಪ್ರವೇಶಿಸಬೇಕು ಇದು ನಾವು ಅವರಿಗೆ ಸಲ್ಲಿಸಬೇಕಾದ ಗೌರವ ಎಂದರು.

ಈ ಕೋವಿಡ್ ಸಮಯದಲ್ಲಿ ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು ನೂರಾರು ಸಂಕಷ್ಟಗಳನ್ನು ಎದುರಿಸಿದರು. ಅವರ ಕಟ್ಟಿದ ಕಟ್ಟಡಗಳಲ್ಲಿ ಕುಳಿತ ಆಡಳಿತ ನಡೆಸಿದ ಸರಕಾರಗಳಿಗೆ ಕಟ್ಟಡ ಕಾರ್ಮಿಕರ ನೋವುಗಳು ಅರ್ಥವಾಗಲೇ ಇಲ್ಲ. ಕಾರ್ಮಿಕರನ್ನು ಬೀದಿಗೆ ತರುವ ಕಾನೂನುಗಳು ಬರುತ್ತಿವೆ ಇದರ ವಿರುದ್ದ ನೀವು ಹೋರಾಡಬೇಕು. ಬಸವಣ್ಣ, ಕಾರ್ಲ್ ಮಾರ್ಕ್ಸ್, ಮಹಾತ್ಮ ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ಬುದ್ಧ, ಜ್ಯೋತಿ ಬಸು ರವರನ್ನು ನೀವು ಆದರ್ಶವಾಗಿಟ್ಟುಕೊಂಡು ಹೋರಾಟಕ್ಕೆ ಮುಂದಾಗಿ ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಎಸ್ ಮೀನಾಕ್ಷಿಸುಂದರಂ ಮಾತನಾಡಿ, ಕಟ್ಟಡ ಕಾರ್ಮಿಕರು ಸಂಘಟಿತರಾಗಬೇಕು. ಒಂದೆಡೆ ಸರಕಾರ ತರುತ್ತಿರುವ ನೀತಿಗಳು, ಇನ್ನೊಂದೆಡೆ ದುಡಿಸಿಕೊಳ್ಳುವ ಮಾಲಿಕರ ನೀತಿಗಳು ಇವುಗಳ ನಡುವೆ ಸಿಲುಕು ಕಟ್ಟಡ ಕಾರ್ಮಿಕರ ಬದುಕು ಸಂಕಷ್ಟದಲ್ಲಿದೆ. ಗ್ರಾಮೀಣ ಪ್ರದೇಶದ ಕಟ್ಟಡ ಕಾರ್ಮಿಕರಿಗೆ ಸರಿಯಾದ ಸೌಲಭ್ಯಗಳು ಸಿಗುತ್ತಿಲ್ಲ ಹಾಗಾಗಿ ನಮ್ಮ ಹಕ್ಕು ಮತ್ತು ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಬೇಕು ಎಂದು ಕರೆ ನೀಡಿದರು.

CWFI ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಎರಡು ದಿನಗಳ ಕಾಲ ನಡೆಯುವ ಕಾರ್ಯಾಗಾರದಲ್ಲಿ ಕಟ್ಟಡ ಕಾರ್ಮಿಕರ ಹಕ್ಕುಗಳ ಬಗ್ಗೆ, ಅವರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ಸಂಘಟನೆ ಬಲಪಡಿಸುವ ಮತ್ತು ರಾಜಕೀಯ ಪ್ರಜ್ಞೆ ನೀಡುವ ಚರ್ಚೆ ಸಂವಾದಗಳು ನಡೆಯಲಿವೆ ಎಂದರು.

ವೇದಿಕೆಯ ಮೇಲೆ CWFI ರಾಜ್ಯ ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ರಾಜ್ಯ ಖಜಾಂಚಿ ಸುರೇಶ್ ಕಲ್ಲಾಗರ ಇದ್ದರು. CWFI ಹಿರಿಯ ಉಪಾಧ್ಯಕ್ಷ ಬಿ. ಉಮೇಶ್ ಅಧ್ಯಕ್ಷತೆ ವಹಿಸಿದ್ದರು. ಲಿಂಗರಾಜ ಮಳವಳ್ಳಿ ಕಾ೦ು೯ಕ್ರ೨ವ೦ು ನಿರ್ವಹಿಸಿದರು. ವಿವಿಧ ಜಿಲ್ಲೆಗಳಿಂದ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.



➘ ಸಮಸ್ಯೆಯ ಅಗಾಧತೆಯನ್ನು ತಿಳಿಯಬಹುದಾಗಿದೆ. ಹೋರಾಟದ ಮುಂದುವರೆದ ಭಾಗವಾಗಿ ಎಲ್ಲರೂ ಒಗ್ಗಟ್ಟಾಗಿ ಚಳುವಳಿಯಲ್ಲಿ ತೊಡಗಿಕೊಂಡಿದ್ದಾರೆ' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಮಾತನಾಡಿ 'ರೈತ ಕಾರ್ಮಿಕ ವಿರೋಧಿ ನೀತಿಗಳಿಂದಾಗಿ ಸಂಕಷ್ಟಗಳು ಎದುರಾಗಲಿದೆ. ಎಲ್ಲ ಜನಪರ ಪರವಾದ ಹಕ್ಕುಗಳಿಗಾಗಿ, ದೇಶದ ಜನತೆಯ ವಿರುದ್ಧವಾಗಿ ಹಲವು ಕಾಯ್ದೆಗಳನ್ನು ಜಾರಿಗೆ ತರಲು ಮುಂದಾಗಿ ದೇಶ ವಿರೋಧಿಯಾಗಿ ಕಾರ್ಪೋರೇಟ್ ಕಂಪನಿ ನೀತಿಗೆ ಜಾರಿಗೆ ಮುಂದಾಗುತ್ತಿವೆ. ಸರಕಾರಿ ಒಡೆತನದ ಎಲ್ಲವನ್ನು ಮಾರಾಟಕ್ಕೆ ಮುಂದಾಗಿರುವುದೇ ದೇಶ ವಿರೋಧಿಯಾಗಿದೆ. ಎಲ್ಲಾ ಜನತೆ ಕರ್ನಾಟಕ ಬಂದ್‌ನಲ್ಲಿ ಭಾಗವಹಿಸಬೇಕೆಂದು' ಕರೆ ನೀಡಿದರು.

ಕರ್ನಾಟಕ ಜನಶಕ್ತಿ ಪರವಾಗಿ ಕುಮಾರ್ ಸಮತಳ ಮತ್ತು ಕಾರ್ಮಿಕ ಮುಖಂಡ ಎಸ್.ಎನ್. ಸ್ವಾಮಿ ಅವರು ಮಾತನಾಡಿದರು.

ವರದಿ: ವಿನೋದ ಶ್ರೀರಾಮಪುರ

ಕಟ್ಟಡ ಕಾರ್ಮಿಕರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಕೊಡುವ ಕಾರ್ಯಾದೇಶ ರದ್ದು: ಸಿಡಬ್ಲ್ಯೂಎಫ್ಐ ಸ್ವಾಗತ

ಬೆಂಗಳೂರು ಕಾರ್ಮಿಕ ಉಪ ವಿಭಾಗಗಳ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ನೀಡಿರುವ ಕಾರ್ಯಾದೇಶವನ್ನು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ರದ್ದುಗೊಳಿಸಿರುವುದನ್ನು ಸ್ವಾಗತ ಮಾಡಿರುವ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಇದು ತಮ್ಮ ಹೋರಾಟಕ್ಕೆ ಸಂದ ಜಯ ಎಂದು ಪ್ರಶಂಸಿದೆ.

ರಾಜ್ಯದಲ್ಲಿ ಇರುವ 30 ಲಕ್ಷ ಕಟ್ಟಡ ಹಾಗೂ 10 ಲಕ್ಷ ವಲಸೆ ಕಾರ್ಮಿಕರಿಗೆ ಕೋವಿಡ್ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಟ್ಟಡ ಕಾರ್ಮಿಕ ಮಂಡಳಿ ಪ್ರತಿ ಡೋಸ್ ಗೆ ರೂ 780 ದರ ನಿಗದಿಯಂತೆ ಇತ್ತೀಚಿಗೆ ಆದೇಶವನ್ನು ಹೊರಡಿಸಿತ್ತು. ಇದನ್ನು ವಿರೋಧಿಸಿ ಕಟ್ಟಡ ಕಾರ್ಮಿಕ ಸಂಘಟನೆಗಳು ತೀವ್ರತರವಾದ ಹೋರಾಟವನ್ನು ನಡೆಸಿ, ಕಾರ್ಮಿಕ ಕಲ್ಯಾಣಕ್ಕಾಗಿ ಮೀಸಲಿಟ್ಟ ಸೆಸ್ ಹಣವನ್ನು ರಾಜ್ಯದ 400 ಖಾಸಗಿ ಆಸ್ಪತ್ರೆಗಳಿಗೆ ನೀಡುವ ತೀರ್ಮಾನ ಕೂಡಲೇ ರದ್ದುಗೊಳಿಸಬೇಕೆಂದು ಆಗ್ರಹಿಸಿದ್ದೇವು ಸಿಡಬ್ಲ್ಯೂಎಫ್ಐ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಹೇಳಿದ್ದಾರೆ.

ಕಾರ್ಮಿಕರ ಹೋರಾಟದಿಂದ ಕಲ್ಯಾಣ ಮಂಡಳಿ ತನ್ನ ತೀರ್ಮಾನದಿಂದ ಹಿಂದೆ ಸರಿದಿದ್ದು ಎಲ್ಲ ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೂ ಸರ್ಕಾರದ ವತಿಯಿಂದಲೇ ಉಚಿತ ಲಸಿಕೆ ನೀಡುವುದಾಗಿ ಪ್ರಕಟಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ ಎಂದು ಕೆ. ಮಹಾಂತೇಶ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಆದರೆ ಇದೇ ಸಂದರ್ಭದಲ್ಲಿ ಅದಾಗಲೇ ಬೆಂಗಳೂರಿನ ಆರು ಕಾರ್ಮಿಕ ಉಪವಿಭಾಗ ವ್ಯಾಪ್ತಿಯಲ್ಲಿ 2 ಲಕ್ಷ ಲಸಿಕೆಗಳನ್ನು ನೀಡಲು ಮಂಡಳಿಯಿಂದ ರೂ 15.60 ಕೋಟಿಯ ಕಾರ್ಯಾದೇಶ ನೀಡಲಾಗಿದೆ. ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕೆಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಫೆಡರೇಶನ್ ಒತ್ತಾಯಿಸಿದೆ.

ಕಾರ್ಮಿಕ ಕಲ್ಯಾಣ ಮಂಡಳಿಯು ಖಾಸಗಿ ಆಸ್ಪತ್ರೆಗಳ ಒಕ್ಕೂಟವಾದ ಫನಾಗೆ ಕಳಿಸಲಾದ ಆದೇಶದಲ್ಲಿ ರಾಜ್ಯ ಸರ್ಕಾರ ಎಲ್ಲ ಕಾರ್ಮಿಕರಿಗೆ ಸರ್ಕಾರಿ ಆಸ್ಪತ್ರೆಗಳ ಮೂಲಕ ಉಚಿತವಾಗಿ ಲಸಿಕೆ ಹಾಕುವ ಕಾರ್ಯಕ್ರಮ ಜಾರಿಗೊಳಿಸುತ್ತಿರುವುದರಿಂದ ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕೆ ಹಾಕುವ ಕಾರ್ಯಕ್ರಮ ರದ್ದುಗೊಳಿಸಬೇಕೆಂದು ತಿಳಿಸಿದೆ.

ಈ ಕ್ರಮಕ್ಕಾಗಿ ಮಂಡಳಿ ಕಾರ್ಯದರ್ಶಿಗಳು ಮತ್ತು ಸರ್ಕಾರಕ್ಕೆ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಅಭಿನಂದನೆ ಸಲ್ಲಿಸಿದೆ.

ನಿಫಾ ಖಾಯಿಲೆಯ ಬಗ್ಗೆ ಕೆಲವು ಮಾಹಿತಿ

ಡಾ. ಸುಶೀಲಾ ಕೆ.



ಫ್ರುಟ್ ಬ್ಯಾಟ್ (Fruit Bat) ಎನ್ನುವ ಜಾತಿಯ ಬಾವಲಿಯನ್ನು ತನ್ನ ಶಾಶ್ವತ ನೆಲೆಯಾಗಿಸಿಕೊಂಡ ನಿಫಾ ವೈರಸ್ ಮಾನವರಲ್ಲಿ ಮೊದಲು ಕಾಣಿಸಿಕೊಂಡದ್ದು 1999 ರಲ್ಲಿ ಮಲೇಷ್ಯಾ ಹಾಗೂ ಸಿಂಗಪುರಗಳಲ್ಲಿ. ಮುಂದಿನ ದಿನಗಳಲ್ಲಿ ಮತ್ತೆ ಅಲ್ಲಿ ಇದು ಮನಃ ಕಾಣಿಸಿಕೊಳ್ಳದಿದ್ದರೂ 2001 ರಲ್ಲಿ ಬಾಂಗ್ಲಾದೇಶದ ಜನರಲ್ಲಿ ಕಾಣಿಸಿಕೊಂಡು ಮುಂದೆ ಸಾಧಾರಣ ವರ್ಷಕ್ಕೊಮ್ಮೆ ಅಲ್ಲಿನ ಜನರಲ್ಲಿ ಸೋಂಕುಂಟು ಮಾಡುತ್ತಿತ್ತು. 2001 ಹಾಗೂ 2007 ರಲ್ಲಿ ಪಶ್ಚಿಮ ಬಂಗಾಳದಲ್ಲಿ ನಿಫಾ ಖಾಯಿಲೆ ತಲೆದೋರಿದರೂ ಇದನ್ನು ಬಹಳ ಸಮರ್ಪಕವಾಗಿ ನಿವಾರಿಸಲಾಯಿತು. ಮುಂದೆ 2018 ರಲ್ಲಿ ನಮ್ಮ ನೆರೆ ರಾಜ್ಯ ಕೇರಳದಲ್ಲಿ ಕಾಣಿಸಿಕೊಂಡು 17 ಜನರ ಸಾವಿಗೆ ಕಾರಣವಾದರೂ, ಅಲ್ಲಿನ ಉತ್ತಮ ಮಟ್ಟದ ಆರೋಗ್ಯ ಸೇವೆಯ ಸಮರ್ಥ ಕಾರ್ಯ ನಿರ್ವಹಣೆಯಿಂದಾಗಿ ಶೀಘ್ರದಲ್ಲೇ ನಿಯಂತ್ರಣಕ್ಕೊಳಗಾಯಿತು. ಆದರೆ ಇತ್ತೀಚೆಗೆ ಅದಾಗಲೇ ಕೋವಿಡ್–19ರ ಖಾಯಿಲೆಯಿಂದ ಗುಣಮುಖನಾದ 12 ವರ್ಷದ ಬಾಲಕ ನಿಫಾ ಖಾಯಿಲೆಗೆ ತುತ್ತಾದ ಹಾಗೂ ಆತನ ಶುಶ್ರೂಷೆ ಮಾಡಿದ ಇಬ್ಬರು ಆರೋಗ್ಯ ಕಾರ್ಯಕರ್ತರಲ್ಲಿ ಈ ಕಾಯಿಲೆಯ ಗುಣ ಲಕ್ಷಣ ಕಾಣಿಸಿಕೊಂಡಿದೆ ಎಂದು ಬಂದ ವರದಿ ಮತ್ತೊಮ್ಮೆ ಆತಂಕಕ್ಕೆ ಕಾರಣವಾಗಿದೆ.

ನಿಫಾ ಖಾಯಿಲೆ ಹರಡುವ ವಿಧಾನ

ಎ) **ಸೋಂಕಿರುವ ಪ್ರಾಣಿಗಳಿಂದ ಇತರ ಪ್ರಾಣಿಗಳಿಗೆ:** 'ಫ್ರುಟ್ ಬ್ಯಾಟ್'ಗಳಿಂದ ಇತರ ಪ್ರಾಣಿಗಳಾದ ಹಂದಿ, ಕುರಿ, ಆಡು, ಕುದುರೆ, ನಾಯಿ ಮೊದಲಾದವುಗಳು. ಇವುಗಳಲ್ಲಿ ಹಂದಿಗಳಲ್ಲಿ ಈ ಕಾಯಿಲೆ ಗುಣ ಲಕ್ಷಣ ಹೆಚ್ಚಾಗಿ ಕಾಣಿಸಿಕೊಂಡು, ಮರಿಗಳಲ್ಲಿ ಮರಣವೂ ಉಂಟಾಗುವ ಸಾಧ್ಯತೆ ಇದೆ. ಹಾಗೂ ಸೋಂಕಿಗೆ ತುತ್ತಾದ ಈ ಪ್ರಾಣಿಗಳು ಇದನ್ನು ಇತರೆ ಪ್ರಾಣಿಗಳಿಗೆ ಹರಡಬಲ್ಲವು.

ಬಿ) 'ಫ್ರುಟ್ ಬ್ಯಾಟ್'ಗಳಿಂದ ಹಾಗೂ ಸೋಂಕಿರುವ ಪ್ರಾಣಿಗಳಿಂದ ಮಾನವರಿಗೆ ತಾಳೆ ಮರದಿಂದ ನೀರಾ ತೆಗೆಯುತ್ತಿರುವಾಗ, ಈ ಬಾವಲಿಗಳು ಆ ನೀರಾವನ್ನು ನೆಕುವುದರಿಂದ ಅವುಗಳ ಜೊಲ್ಲಿನಿಂದ ನೀರಾ ಕಲುಷಿತವಾಗುತ್ತದೆ. ಇಂತಹ ನೀರಾ ಕುಡಿಯುವುದರಿಂದ ಅಥವಾ ಇವುಗಳ ಜೊಲ್ಲು, ಮೂತ್ರದಿಂದ ಕಲುಷಿತವಾದ ಹಣ್ಣು, ಇತರ ಆಹಾರ ಸಾಮಗ್ರಿಗಳನ್ನು ತಿಂದಾಗ ಈ ನಿಫಾ ವೈರಸ್ ಮನುಷ್ಯರ ದೇಹ ಪ್ರವೇಶಿಸಬಹುದು. ಬಾವಲಿ ಕಚ್ಚಿದ ಹಣ್ಣನ್ನು ತಿನ್ನುವುದರಿಂದ 2018 ರಲ್ಲಿ ಕೇರಳದಲ್ಲಿ ಈ ಖಾಯಿಲೆಯ ಮೊದಲ ಪ್ರಕರಣ ಉಂಟಾಗಿತ್ತು.



ಸಿ) **ಸೋಂಕಿರುವ ಪ್ರಾಣಿಗಳಿಂದ ಮನುಷ್ಯರಿಗೆ:** ಮಲೇಷ್ಯಾದಲ್ಲಿ ಕಾಣಿಸಿಕೊಂಡ ನಿಫಾ ಕಾಯಿಲೆ ಆ ಸೋಂಕಿನಿಂದ ಬಳಲುತ್ತಿದ್ದ ಹಂದಿಗಳ ಸಂಪರ್ಕದಿಂದಾಗಿ ಮನುಷ್ಯರಲ್ಲಿ ತಲೆದೋರಿತ್ತು.

ಡಿ) **ಸೋಂಕಿತ ಮನುಷ್ಯರಿಂದ ಆರೋಗ್ಯವಂತ ಮನುಷ್ಯರಿಗೆ** ಈ ಕಾಯಿಲೆಯಿಂದ ಬಳಲುವ ರೋಗಿಗಳ ದೇಹದ ದ್ರವ–ಜೊಲ್ಲು, ಮೂಗಿನ ಸ್ರಾವ, ರಕ್ತ, ಮೂತ್ರ ಮೊದಲಾದವುಗಳ ಸಂಪರ್ಕಕ್ಕೆ ಆರೋಗ್ಯವಂತರು ಬಂದಾಗ ಅವರಿಗೆ ಈ ಸೋಂಕು ತಗಲುತ್ತದೆ.

ಈ ವೈರಸ್ ಮಾನವರ ಬಾಯಿ, ಮೂಗಿನ ಮೂಲಕ ಗಂಟಲನ್ನು ಪ್ರವೇಶಿಸುವುದು. ಮುಂದೆ ದೇಹದ ಇತರ ಭಾಗಗಳಾದ ಶ್ವಾಸಕೋಶ, ಮೂತ್ರಪಿಂಡ, ಮಿದುಳು ಮೊದಲಾದವುಗಳಿಗೆ ಹರಡುವುದು. ರೋಗಾಣು ದೇಹ ಪ್ರವೇಶಿಸಿದ ನಂತರ ಸಾಧಾರಣ 4 ರಿಂದ 14 ದಿನಗಳಲ್ಲಿ ರೋಗ ಲಕ್ಷಣ ಕಾಣಿಸಿಕೊಳ್ಳುವುದು. ಈ ಅವಧಿ 45 ದಿನದ ತನಕವೂ ವಿಸ್ತರಿಸಿದ ವರದಿಯೂ ಇದೆ.

ರೋಗದ ಗುಣ ಲಕ್ಷಣ:

ಇದು ರೋಗಲಕ್ಷಣ ರಹಿತ ಸೋಂಕಾಗಿರಬಹುದು. ಬಹಳ ಕನಿಷ್ಠ ಮಧ್ಯಮ ಮಟ್ಟದ ಸೋಂಕಾಗಿರಬಹುದು.

ಪ್ರಾರಂಭಿಕ ಹಂತದಲ್ಲಿ, ಉಳಿದ ಇತರ ವೈರಲ್ ಸೋಂಕಿನ ಗುಣಲಕ್ಷಣಗಳಾದ – ಕೆಮ್ಮು, ಗಂಟಲು ನೋವು, ಜ್ವರ, ಮೈಕೈನೋವು ವಾಂತಿ ಉಸಿರಾಟದಲ್ಲಿ ತೊಂದರೆ ಕಾಣಿಸಿಕೊಳ್ಳುವುದು ಸಾಮಾನ್ಯ ಹಾಗೂ ಮುಂದೆ ನ್ಯೂಮೋನಿಯಾ ಬರಬಹುದು.

ಇನ್ನು ತೀಕ್ಷ್ಣ ಮಟ್ಟದ ಕಾಯಿಲೆಯಲ್ಲಿ ಮಿದುಳಿನ ಊರಿಊತದಿಂದಾಗಿ ತೀವ್ರ ತಲೆನೋವು, ಮಂಪರು, ಸುತ್ತ ಮುತ್ತಲಿನ ಪರಿಸರ ಮತ್ತು ಸಮಯದ ಬಗ್ಗೆ ಗೊಂದಲ ಉಂಟಾಗಬಹುದು. ಫಿಟ್ಸ್ ಕಾಣಿಸಿಕೊಳ್ಳಬಹುದು. ಹಾಗೂ ರೋಗಿ ಅರೆಪ್ರಜ್ಞಾವಸ್ಥೆಯ ಸ್ಥಿತಿ ತಲುಪಿ ಸಂಪೂರ್ಣ ಮೂರ್ಛೆಗೊಳಗಾಗಬಹುದು. ಇದು ಸಾವಿಗೆ ಕಾರಣವಾಗಬಹುದು. ಈ ತೀಕ್ಷ್ಣ ಕಾಯಿಲೆಯಿಂದ ಬದುಕುಳಿದವರಲ್ಲಿ ಸಾಧಾರಣ ಪ್ರತಿಶತ 20 ರೋಗಿಗಳಲ್ಲಿ ಮುಂದೆ ನಡವಳಿಕೆಯಲ್ಲಿ ಬದಲಾವಣೆಯಾಗಬಹುದು, ಫಿಟ್ಸ್ ಆಗಾಗ ಬರಬಹುದು.

ನಿಫಾ ಖಾಯಿಲೆಯಿಂದ ಮರಣದ ಪ್ರಮಾಣ ಪ್ರತಿಶತ 40 ರಿಂದ 75 ರ ತನಕ ಇರುವುದರಿಂದ ಈ ಖಾಯಿಲೆ ಅಪಾಯಕಾರಿ.

ಖಾಯಿಲೆಯ ಪತ್ತೆ ಹಚ್ಚುವಿಕೆ:

1. ಮೂಗು ಮತ್ತು ಗಂಟಲಿನ ಮಾದರಿ ತೆಗೆದು ಅದನ್ನು ಆರ್.ಟಿ.ಪಿ.ಸಿ.ಆರ್. ಪರೀಕ್ಷೆಗೆ ಒಳಪಡಿಸುವುದರಿಂದ ನಿಫಾ ಸೋಂಕಿತರಲ್ಲಿ ಈ ವೈರಸ್ಸನ್ನು ಪತ್ತೆ ಹಚ್ಚಬಹುದು.
2. ಖಾಯಿಲೆ ಪ್ರಾರಂಭವಾಗಿ ಕೆಲ ದಿನಗಳ ನಂತರ ಈ ವೈರಸ್ ವಿರುದ್ಧದ ಆ್ಯಂಟಿಬೋಡಿ (ಪ್ರತಿಕಾಯ) ರೋಗಿಯ ದೇಹದಲ್ಲಿ ಕಾಣಿಸಿಕೊಳ್ಳುವುದು. ಎಲಿಝಾ (Eliza) ರಕ್ತ ಪರೀಕ್ಷೆಯಿಂದ ಇದನ್ನು ಪತ್ತೆ ಹಚ್ಚಬಹುದು.
3. ರೋಗಿಯ ದೇಹದ ದ್ರವ ಕಲ್ಚರ್ ಮೂಲಕವೂ ಈ ವೈರಸ್ ಪತ್ತೆ ಹಚ್ಚಬಹುದು.

ಚಿಕಿತ್ಸೆ:

ಇತರೆ ವೈರಸ್‌ಗಳಂತೆ, ನಿಫಾ ವೈರಸ್ ನಾಶ ಪಡಿಸಲು ಕೂಡಾ ಇಲ್ಲಿಯ ತನಕ ಯಾವುದೇ ಔಷಧ ದೊರೆತಿಲ್ಲ. ಹಾಗಾಗಿ ಖಾಯಿಲೆಯ ಗುಣ ಲಕ್ಷಣಗಳ ಶಮನಕ್ಕೆ ಬೇಕಾದ ಚಿಕಿತ್ಸೆ ನೀಡುವುದು ಸೂಕ್ತ. ಹಾಗೂ ರೋಗಿಗೆ ವಿಶ್ರಾಂತಿ ನೀಡುವುದರೊಂದಿಗೆ ದೇಹದಲ್ಲಿ ದ್ರವಾಂಶವು ಕಡಿಮೆಯಾಗದಂತೆ ಜಾಗ್ರತೆ ವಹಿಸುವುದು ಅವಶ್ಯ.

ರೋಗ ಬರದಂತೆ ತಡೆಗಟ್ಟುವಿಕೆ:

ಈ ನಿಫಾ ವೈರಸ್ ಸೋಂಕು ಬರದಂತೆ ತಡೆಯುವ ಲಸಿಕೆಯ ಆವಿಷ್ಕಾರ ಆಗಿಲ್ಲ. ಚಿಕಿತ್ಸೆ, ಲಸಿಕೆ ಇಲ್ಲದಾಗ ಜನರು ರೋಗ ತಡೆಗಟ್ಟುವ ಇತರ ವಿಧಾನಗಳನ್ನು ಅನುಸರಿಸುವುದು ಅಗತ್ಯ.

1. ಬಾವಲಿಗಳು ಹೆಚ್ಚಾಗಿರುವ ಪ್ರದೇಶ ಹಾಗೂ ಅವುಗಳು ಹೆಚ್ಚಾಗಿ ಭೇಟಿ ನೀಡುವ ತಾಳೆ ಮರಗಳಿರುವ ಪ್ರದೇಶದಲ್ಲಿ ಅವುಗಳ ಮೂತ್ರ ಎಂಜಲಿನಿಂದ ಕಲುಷಿತವಾಗುವ ಸಂದರ್ಭವಿರುವುದರಿಂದ ಅಲ್ಲಿಗೆ ಭೇಟಿ ನೀಡದಿರುವುದು.
2. ತಾಳೆ ಮರದ ತಾಜಾ ನೀರಾವನ್ನು ಕುದಿಸಿ ಉಪಯೋಗಿಸುವುದು.
3. ಬಾವಲಿ ಕಚ್ಚಿದ ಹಣ್ಣುಗಳನ್ನು ತಿನ್ನದಿರುವುದು. ಯಾವುದೇ ಹಣ್ಣನ್ನು ತಿನ್ನುವ ಮೊದಲು ಅದನ್ನು ಚೆನ್ನಾಗಿ ತೊಳೆದು, ಅದರ ಸಿಪ್ಪೆ ತೆಗೆದು ತಿನ್ನುವುದು ಸೂಕ್ತ.
4. ನಮ್ಮದಲ್ಲದ ಪ್ರಾಣಿಗಳನ್ನು ಮುದ್ದು ಮಾಡದೆ ಅವುಗಳಿಂದ ದೂರವಿರುವುದು.
5. ಹಂದಿ ಸಾಕಣೆಯ ಜಾಗವನ್ನು ಸೂಕ್ತ ರೋಗಾಣು ನಾಶಕಗಳನ್ನು ಉಪಯೋಗಿಸಿ ಸ್ವಚ್ಛವಾಗಿಡುವುದು. ಖಾಯಿಲೆಯಿಂದ ಬಳಲುವ ಪ್ರಾಣಿಗಳನ್ನು ಜನರಿಂದ ಇತರ ಪ್ರಾಣಿಗಳಿಂದ ಪ್ರತ್ಯೇಕಿಸುವುದು.
6. ಪ್ರಾಣಿಗಳ ಆರೈಕೆ ಮಾಡುವವರು, ಕಸಾಯಿಖಾನೆಯಲ್ಲಿ ಕಾರ್ಯನಿರ್ವಹಿಸುವವರು ಕೈಗಳಿಗೆ ಗ್ಲೌಸ್, ಮಾಸ್ಕ್‌ಗಳನ್ನು ಧರಿಸುವುದು.
7. ನಿಫಾ ಖಾಯಿಲೆಯ ರೋಗಿಗಳನ್ನು ಹಾಗೂ ಅವರ ಸಂಪರ್ಕಕ್ಕೆ ಬಂದವರನ್ನು ಇತರರಿಂದ ಪ್ರತ್ಯೇಕವಾಗಿಡುವುದು; ರೋಗಿಗಳ ಶುಶ್ರೂಷೆ ಮಾಡುವವರು ಈ ವೈರಸಿನ ಸೋಂಕಿನಿಂದ ತಮ್ಮ ರಕ್ಷಣೆಗೆ ಬೇಕಾದ ಸಂಪೂರ್ಣ ವಿಧಾನಗಳನ್ನು ಉಪಯೋಗಿಸತಕ್ಕದ್ದು.
8. ಯಾರ ಕೈ ಹೇಗೆ, ಯಾವಾಗ ಈ ವೈರಸ್‌ನಿಂದ ಕಲುಷಿತವಾಗುತ್ತದೆ ಎಂದು ಹೇಳಲು ಅಸಾಧ್ಯ, ಹಾಗಾಗಿ ಆಗಾಗ ಕೈಗಳನ್ನು ಸಾಬೂನಿನಿಂದ ತೊಳೆದು ಶುಚಿಯಾಗಿಡುವುದು ಅಗತ್ಯ.

ಸಾಫಿಯಾ ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಪ್ರತಿಭಟನೆ

ಕೇಂದ್ರ ಸರಕಾರವು 'ಬೇಟಿ ಪಡಾವೊ ಬೇಟಿ ಬಚಾವೊ' ಎಂಬ ಘೋಷಣೆಯೇನೋ ಕೊಟ್ಟಿದೆ. ಆದರೆ ಕಷ್ಟ ಪಟ್ಟು ಓದಿದ ಮಗಳನ್ನು ಬದುಕುಲು ಬಿಡಲಾರದಂಥ ಹೀನಾಯ ಪರಿಸ್ಥಿತಿ ಭಾರತದಲ್ಲಿದೆ. ದೆಹೆಲಿಯಲ್ಲಿ ಓದಿ ನೌಕರಿಯಲ್ಲಿರುವ ಮಗಳನ್ನು ಕಳೆದುಕೊಂಡ ಹೆತ್ತವರ ಸಂಕಟಕ್ಕೆ ಕೇಳುವವರು ಗತಿಯಿಲ್ಲವಾಗಿದೆ. ಇದೆ ಆಗಸ್ಟ್ 26 ರಂದು ದೆಹಲಿಯ ಸಾಫಿಯಾ (ಹೆಸರು ಬದಲಾಯಿಸಲಾಗಿದೆ) ಎಂಬ 21 ವರ್ಷ ವಯಸ್ಸಿನ ಯುವತಿಯು ಡಿಫೆನ್ಸ್ ನಲ್ಲಿ ಕಾನ್ಸ್ಟೆಬಲ್ ಆಗಿದ್ದವಳನ್ನು ಅತ್ಯಂತ ಬಾರ್ಬರಿಕವಾಗಿ ಹಲ್ಲೆ ಮಾಡಿ ಅತ್ಯಾಚಾರಗೈದು ಕೊಲೆ ಮಾಡಲಾಗಿದೆ. ಅವಳ ಶರೀರದ ಎಲ್ಲಾ ಭಾಗಗಳಲ್ಲಿಯೂ ಇರಿಯಲಾಗಿದೆ. ಆಗಸ್ಟ್ 26 ರಂದೇ ಈ ದಾರುಣ ಘಟನೆ ನಡೆದರೂ ಬಹುತೇಕ್ ಮಾಧ್ಯಮಗಳಲ್ಲಿ ವರದಿಯಾಗಿಲ್ಲ. ಇದೊಂದು ಪಕ್ಷಪಾತದ ನಡೆಯೆನ್ನದೆ ವಿಧಿಯಿಲ್ಲವಾಗಿದೆ. ಸಾಮಾಜಿಕ ಜಾಲತಾಣಗಳ ಮೂಲಕ ದೇಶದಲ್ಲಿ ಸುದ್ದಿಯಾಗಿದೆ. ದೇಶದ ರಾಜಧಾನಿ ದೆಹೆಲಿಯಲ್ಲಿಯೇ ಇಂತಹ ಬಾರ್ಬರಿಕ ಘಟನೆ ನಡೆದರೂ ಈವರೆಗೆ ತಪ್ಪಿತಸ್ಥರನ್ನು ಬಂಧಿಸಲಿಲ್ಲ. ಇಡೀ ಪ್ರಕರಣದ ಬಗ್ಗೆ ಸರಕಾರಕ್ಕೆ ಯಾವುದೇ ಕಾಳಜಿಯಿಲ್ಲವೆಂಬುದು ತೋರುತದೆ. ಮಾತ್ರವಲ್ಲ ಅತ್ಯಂತ ಚಿಂತಾಜನಕ ಸ್ಥಿತಿ ಏನೆಂದರೆ ಈ ಪ್ರಕರಣವನ್ನು ಮುಚ್ಚಿ ಹಾಕಲು ಪ್ರಯತ್ನ ಮಾಡಲಾಗಿದೆಯೆ ವಿನಃ ಸತ್ತು ಹೋದ ಈ ದೇಶದ ಮಗಳಿಗೆ ನ್ಯಾಯ ಕೊಡಿಸುವತ್ತ ಗಂಭೀರ ಕ್ರಮಗಳು ನಡೆದಿಲ್ಲ. ಇದು ಅತ್ಯಂತ ಖಂಡನೀಯವಾದದ್ದು. ಸಾಫಿಯಾ ಈ ದೇಶದ ಮಗಳು. ದೇಶದಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ದೌರ್ಜನ್ಯ ಮತ್ತು ಕೊಲೆಗಳಿಗೆ ಮಹಿಳೆಯರು ಬಲಿಯಾಗುತ್ತಿದ್ದಾರೆ. ಆದರೆ ಮೇಲ್ನೋಟದಲ್ಲಿ ಮಾತ್ರ 'ಬೇಟಿ ಪಢಾವೋ ಬೇಟಿ ಬಚಾವೊ' ಎಂಬ ಘೋಷಣೆ ಕೊಡಲಾಗಿದೆ. ವಾಸ್ತವದಲ್ಲಿ ಬೇಟಿಯನ್ನು ಉಳಿಸಲು ಸರಕಾರಕ್ಕೆ ಬಲವಾದ ಇಚ್ಛೆಯಿಲ್ಲ ಎನ್ನುವುದು ಈ ಪ್ರಕರಣದಿಂದ ಸಾಬೀತಾದಂತೆ. ಹಾಗೆ ನೋಡಿದರೆ ದೇಶದ ತುಂಬ ಅದರಲ್ಲಿಯೂ ಬಿಜೆಪಿಯ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಸುರಕ್ಷಿತವಾಗಿಲ್ಲ. ಕೂಡಲೇ ಈ ಕುರಿತು ಗಂಭೀರ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರಕ್ಕೆ ನಿರ್ದೇಶನ ಮಾಡಲು ಸಾಧ್ಯವಾಗಬೇಕು ಎಂದು, ಸಾಫಿಯಾ ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದೆ.



ಸಾಫಿಯಾ ಕುಟುಂಬಕ್ಕೆ ರಕ್ಷಣೆ ಒದಗಿಸಲು ಸಾಧ್ಯವಾಗಬೇಕು.

ತಪ್ಪಿತಸ್ಥರನ್ನು ಕೂಡಲೇ ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸಬೇಕು

ತ್ವರಿತಗತಿಯ ನ್ಯಾಯಾಲಯದಲ್ಲಿ ಪ್ರಕರಣವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಬೇಕು

ವರ್ಮಾ ಆಯೋಗದ ಶಿಫಾರಸ್ಸುಗಳನ್ನು ಕೂಡಲೇ ಜಾರಿಗೊಳಿಸಬೇಕು.

ಪ್ರಗತಿಪರ ಸಂಘಟನೆಗಳ ಒಕ್ಕೂಟವು ಮೇಲಿನ ಹಕ್ಕೊತ್ತಾಯಗಳಿಗಾಗಿ ಸೆಪ್ಟೆಂಬರ್ 9, 2021 ರಂದು ಕಲಬುರಗಿ ನಗರದ ಜಗತ್ ವೃತ್ತದಲ್ಲಿ ಕ್ಯಾಂಡಲ್ ಲೈಟ್ ಪ್ರೊಟೆಸ್ಟ್ ನಡೆಸಿ ಅಧಿಕಾರಿ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದೆ.





ಮುಝಫ್ಫರ್‌ನಗರದ ಐತಿಹಾಸಿಕ ರೈತ ರ್‍ಯಾಲಿ

ವಿಭಜನಕಾರೀ, ದ್ವೇಷಭರಿತ ರಾಜಕೀಯಕ್ಕೆ ಸವಾಲು

ಆಗಸ್ಟ್ 26-27 ರಂದು ದಿಲ್ಲಿಯ ಸಿಂಘು ಗಡಿಯಲ್ಲಿ ನಡೆದ ರಾಷ್ಟ್ರೀಯ ಸಮಾವೇಶದ ಕರೆಯ ಮೇರೆಗೆ ನಡೆದ ಮುಝಫ್ಫರ್‌ನಗರ ರ್‍ಯಾಲಿ ರೈತರ ಐಕ್ಯತೆಯ ಮತ್ತು ಕೋಮು ಸಾಮರಸ್ಯದ ಪ್ರದರ್ಶನ ನೀಡಿದೆ, ಜನಗಳು ಕೋಮುವಾದಿ ವಿಭಜನೆಗೆ ಬಲಿಯಾಗುವುದಿಲ್ಲ ಎಂದು ಸಾರಿದೆ. ಎರಡು ದಿನಗಳ ನಂತರ ಹರ್‍ಯಾಣದಲ್ಲಿ ನಡೆದಿರುವ ಘಟನೆಗಳಿಂದ ರೈತ ಆಂದೋಲನ ಈಗಲೂ ತನ್ನ ಚೈತನ್ಯವನ್ನು ಕಾಪಾಡಿಕೊಂಡಿದೆ, ತನ್ನ ಹಿತಾಸಕ್ತಿಗಳನ್ನು ಸಮರಶೀಲವಾಗಿ ರಕ್ಷಿಸಿಕೊಳ್ಳುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕೆಂಬ ರೈತರ ಆಗ್ರಹ ಈಗ ಮೋದಿ ಸರಕಾರದ ವಿರುದ್ಧ ವಿಶಾಲ ವೇದಿಕೆಯ ಭಾಗವಾಗಿ ಬಿಟ್ಟಿದೆ. ಸಪ್ಟಂಬರ್ 27ರ ಭಾರತ್ ಬಂದ್ ಕರೆಯುನ್ನು ಯಶಸ್ವಿಗೊಳಿಸಲು ವ್ಯಾಪಕವಾದ ಅಣಿನೆರಿಕೆಗೆ ರಂಗ ಸಿದ್ಧಗೊಂಡಿದೆ.



ಪ್ರಕಾಶ ಕಾರಟ್

ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ಸಂಘಟಿಸಿದ ಸಪ್ಟಂಬರ್ 5ರ ಮುಝಫ್ಫರ್‌ನಗರ ಮಹಾಪಂಚಾಯತ್ ದೇಶದ ರೈತ ಆಂದೋಲನದ ಇತಿಹಾಸದ ಪುಟಗಳಲ್ಲಿ ಒಂದು ಮೈಲಿಗಲ್ಲಾಗಿ ದಾಖಲಾಗಲಿದೆ. ಉತ್ತರಪ್ರದೇಶ, ಹರ್‍ಯಾಣ, ಪಂಜಾಬಿನಿಂದ ಲಕ್ಷಾಂತರ ರೈತರು, ಜತೆಗೆ ಬೇರೆ ಹಲವು ರಾಜ್ಯಗಳ ರೈತರ ತಂಡಗಳು ಇದರಲ್ಲಿ ಭಾಗವಹಿಸಿದರು.

ಈ ಮಹಾಪಂಚಾಯತ್‌ಗೆ ಆಗಸ್ಟ್ 26-27ರಂದು ದಿಲ್ಲಿಯ ಸಿಂಘು ಗಡಿಯಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಕರೆ ನೀಡಲಾಯಿತು. ಅದು ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಸರಕಾರಗಳನ್ನು ಕೆಳಗಿಳಿಸುವ ಅಭಿಯಾನದ ಆರಂಭ ಎಂದು ಹೇಳಲಾಯಿತು. ಆ ಸಮಾವೇಶ ಸಪ್ಟಂಬರ್ 25 ರಂದು 'ಭಾರತ ಬಂದ್'ಗೆ ಕರೆಯುನ್ನೂ ಕೊಟ್ಟಿತು (ನಂತರ ಇದನ್ನು ಸಪ್ಟಂಬರ್ 27ಕ್ಕೆ ಬದಲಾಯಿಸಲಾಗಿದೆ).

ರಾಷ್ಟ್ರೀಯ ಸಮಾವೇಶದಲ್ಲಿ ಅಂಗೀಕರಿಸಲಾದ ಠರಾವುಗಳು ಈ ಒಂಭತ್ತು ತಿಂಗಳು ನಡೆದಿರುವ ರೈತ ಆಂದೋಲನದ ದಿಗಂತ ವ್ಯಾಪಕಗೊಂಡಿರುವುದನ್ನು ತೋರಿಸುತ್ತವೆ. ಮೂರು ಕೃಷಿ ಕಾಯ್ದೆಗಳ ರದ್ದತಿ, ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆಯ ವಾಪಸಾತಿ ಮತ್ತು ಸಿ2+50% ಸೂತ್ರದಂತೆ ಕನಿಷ್ಟ ಬೆಂಬಲ ಬೆಲೆಯ ಖಾತ್ರಿ ಈಗಲೂ ಕೇಂದ್ರ ಆಗ್ರಹಗಳಾಗಿದ್ದರೂ, ರೈತ ಆಂದೋಲನ ಹೆಚ್ಚು ಸಮಗ್ರವಾದ ಒಂದು ಕಣ್ಣೋಟವನ್ನು ಅಂಗೀಕರಿಸಿದೆ–ಅದು ದುಡಿಯುವ ಜನಗಳ ಇತರ ವಿಭಾಗಗಳನ್ನು–ಕಾರ್ಮಿಕ ವರ್ಗ, ಕೃಷಿ ಕೂಲಿಕಾರರು, ಗ್ರಾಮೀಣ ಕಾರ್ಮಿಕರು ಮತ್ತು ಆದಿವಾಸಿಗಳನ್ನು ಒಳಗೊಂಡಿದೆ. ಇದು ನಾಲ್ಕು ಕಾರ್ಮಿಕ ಸಂಹಿತೆಗಳ ರದ್ಧತಿ, ಮನರೇಗದ ಅಡಿಯಲ್ಲಿ ಕೂಲಿಗಳ ವಿಸ್ತರಣೆ, ಅರಣ್ಯ ಹಕ್ಕುಗಳ ಕಾಯ್ದೆಯ ಅನುಷ್ಠಾನ, ಮಹಿಳೆಯರ ಮೇಲೆ ಅತ್ಯಾಚಾರಗಳ ವಿರುದ್ಧ ಮತ್ತು ಪೆಟ್ರೋಲ್, ಡೀಸೆಲ್ ಮತ್ತು ಅಗತ್ಯ ಸರಕುಗಳ ಬೆಲೆಯೇರಿಕೆಗಳಿಗೆ ತಡೆ ಮುಂತಾದ ಠರಾವುಗಳಲ್ಲಿ ಬಿಂಬಿತವಾಗಿದೆ.

ಮುಝಫ್ಫರ್‌ನಗರ ರ್‍ಯಾಲಿ ಅದರಲ್ಲಿ ಜನ ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದರು ಎಂಬ ಕಾರಣಕ್ಕಷ್ಟೇ ಗಮನಾರ್ಹವಾಗಿಲ್ಲ. ಅದರಲ್ಲಿ ಇನ್ನೊಂದು ರಾಜಕೀಯ ಮಹತ್ವವೂ ಇತ್ತು. ಎಂಟು ವರ್ಷಗಳ ಹಿಂದೆ, 2013ರಲ್ಲಿ, ಮುಝಫ್ಫರ್‌ನಗರ ಜಿಲ್ಲೆಯನ್ನು ಕೋಮುವಾದಿ ಹಿಂಸಾಚಾರ ಆವರಿಸಿತ್ತು. ಅದರಲ್ಲಿ 80ಕ್ಕೂ ಹೆಚ್ಚು ಮಂದಿ ಪ್ರಾಣ ಕಳಕೊಂಡರು, ಹಲವಾರು ಮಹಿಳೆಯರ ಮಾನಭಂಗವಾಯಿತು ಮತ್ತು ನೂರಾರು ಮನೆಗಳು ಧ್ವಂಸಗೊಂಡವು. ಇದು ಉಂಟು ಮಾಡಿದ ಕೋಮು ವಿಭಜನೆ, ಮುಖ್ಯವಾಗಿ ಪ್ರಬಲ ರೈತ ಸಮುದಾಯವಾದ ಜಾಟರು ಮತ್ತು ಮುಸ್ಲಿಮರ ನಡುವಿನ ವಿಭಜನೆಯನ್ನು 2014ರ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಸಂಪೂರ್ಣವಾಗಿ ಬಳಸಿಕೊಂಡಿತು. ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಬಿಜೆಪಿ ಭಾರೀ ಚುನಾವಣಾ ಗೆಲುವನ್ನು ಪಡೆಯಿತು ಮತ್ತು ಕೋಮು ಧ್ರುವೀಕರಣದ ಪರಿಣಾಮ ಹರ್‍ಯಾಣ ಮತ್ತು ರಾಜಸ್ತಾನದ ಕೆಲವು ಭಾಗಗಳ ಮೇಲೂ ಆಯಿತು.

ಆ ಸಮಯದಲ್ಲೂ, ಸಪ್ಟಂಬರ್ 7, 2013ರಂದು ಮುಝಫ್ಫರ್‌ನಗರದ ಸಮೀಪದ ಸಿಖಾರಾ ಗ್ರಾಮದಲ್ಲಿ ಒಂದು 'ಮಹಾಪಂಚಾಯತ್' ನಡೆಯಿತು. ಅದರಲ್ಲಿ ನರೇಶ್ ಟಿಕಾಯ್ತ್ ಮತ್ತು ರಾಕೇಶ್ ಟಿಕಾಯ್ತ್ ರಂತಹ ಖಾಪ್ ಮುಖಂಡರು ಭಾಗವಹಿಸಿದ್ದರು. ಬಿಜೆಪಿ ಶಾಸಕರಾದ ಸಂಗೀತ್ ಸೋಮ್ ಮತ್ತು ಸುರೇಶ ರಾಣಾ ಹಾಗೂ ಸದಾ ದೊಂಬಿಯೆಬ್ಬಿಸುವ ಸಾಧ್ವಿ ಪ್ರಾಚಿ ಮುಸ್ಲಿಮರ ವಿರುದ್ಧ ದ್ವೇಷದ ಬೆಂಕಿ ಹಚ್ಚುವ ಭಾಷಣಗಳನ್ನು ಮಾಡಿದರು, ಇದು ಒಂದು ವ್ಯಾಪಕ ದಳ್ಳುರಿಯನ್ನೇ ಹಬ್ಬಿಸಿತ್ತು.

ಸಪ್ಟಂಬರ್ 5, 2021ರ ರೈತ ಮಹಾಪಂಚಾಯತ್ ಈಗ ನಡೆದಿರುವಂತಕ್ಕಿಂತಲೂ ಹೆಚ್ಚು ಭಿನ್ನವಾಗಿರಲು ಸಾಧ್ಯವಿರಲಿಲ್ಲ. ಎಸ್‌ಕೆಎಂ ನಲ್ಲಿ ಒಬ್ಬ ಪ್ರಮುಖ ನೇತಾರರಾಗಿರುವ ರಾಕೇಶ್ ಟಿಕಾಯ್ತ್ ಜನಗಳು ಕೋಮುವಾದಿ ವಿಭಜನೆಗೆ ಬಲಿಯಾಗುವುದಿಲ್ಲ ಎಂದು ಸಾರಿದರು, "ಅಲ್ಲಾಹು ಅಕ್ಬರ್" ಮತ್ತು "ಹರಹರ ಮಹಾದೇವ್" ಎಂಬ ಘೋಷಣೆಗಳೊಂದಿಗೆ ನೇತೃತ್ವ ನೀಡಿದರು.


ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಮರೂ ಇದ್ದ ಈ ರ್‍ಯಾಲಿಯಲ್ಲಿ ಮಾತನಾಡಿದ ಪ್ರತಿಯೊಬ್ಬ ಭಾಷಣಕಾರರೂ ಧರ್ಮದ ಬೇಧಭಾವವಿಲ್ಲದೆ ಐಕ್ಯತೆಯಿಂದಿರಬೇಕು ಮತ್ತು ಉತ್ತರಪ್ರದೇಶದಲ್ಲಿ ಬಿಜೆಪಿಯ ವಿರುದ್ಧ ಐಕ್ಯ ಹೋರಾಟ ನಡೆಸಬೇಕು ಎಂದು ಒತ್ತಿ ಹೇಳಿದರು.

ರೈತರ ಐಕ್ಯತೆಯ ಮತ್ತು ಕೋಮು ಸಾಮರಸ್ಯದ ಈ ಪ್ರದರ್ಶನ ಆದಿತ್ಯನಾಥ ಸರಕಾರ ಮತ್ತು ಬಿಜೆಪಿ-ಆರೆಸ್ಸೆಸ್ ಕೂಟದ ಉನ್ಮತ್ತ ಕೋಮುವಾದಿ ಅಜೆಂಡಾಕ್ಕೆ, ಅದು ಮುಸ್ಲಿಮರ ವಿರುದ್ಧ ದ್ವೇಷ ಪ್ರಚಾರದಲ್ಲಿ ಮುಳುಗಿರುವುದಕ್ಕೆ, 'ಲವ್ ಜಿಹಾದ್'ನಂತಹ ಕಾಯ್ದೆಗಳನ್ನು ರೂಪಿಸಿರುವದಕ್ಕೆ ಮತ್ತು ದೈಹಿಕ ಹಲ್ಲೆಗಳಿಗೆ ಮುಸ್ಲಿಮರನ್ನು ಗುರಿಮಾಡಿರುವುದಕ್ಕೆ ಕಣ್ಣಿಗೆ ರಾಚುವಷ್ಟು ತದ್ವಿರುದ್ಧವಾಗಿದೆ. ಮುಝಫ್ಫರ್‌ನಗರದ ರ್‍ಯಾಲಿ ಈ ವಿಭಜನಕಾರೀ ಮತ್ತು ದ್ವೇಷಭರಿತ ರಾಜಕೀಯಕ್ಕೆ ಸವಾಲೊಡ್ಡಿದೆ.

ರೈತ ಆಂದೋಲನ ಈಗಲೂ ತನ್ನ ಚೈತನ್ಯವನ್ನು ಕಾಪಾಡಿಕೊಂಡಿದೆ, ತನ್ನ ಹಿತಾಸಕ್ತಿಗಳನ್ನು ಸಮರಶೀಲವಾಗಿ ರಕ್ಷಿಸಿಕೊಳ್ಳುತ್ತದೆ ಎಂಬುದು ಹರ್‍ಯಾಣದಲ್ಲಿ ನಡೆದಿರುವ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಈ ಒಂಭತ್ತು ತಿಂಗಳ ಅವಧಿಯಾದ್ಯಂತ ಬಿಜೆಪಿ ರಾಜ್ಯ ಸರಕಾರ ಒಂದು ವೈಷಮ್ಯಪೂರ್ಣ ಮತ್ತು ದಮನಕಾರೀ ನಿಲುವನ್ನು ತಳೆಯುತ್ತ ಬಂದಿದೆ– ಪ್ರತಿಭಟನಾಕಾರರ ವಿರುದ್ಧ ಪೋಲೀಸ್ ತಡೆಗಟ್ಟೆಗಳು, ಲಾಠೀ ಪ್ರಹಾರಗಳು ಮತ್ತು ಅಶ್ರುವಾಯು ಪ್ರಯೋಗಗಳಲ್ಲದೆ, 40,000ಕ್ಕೂ ಹೆಚ್ಚು ರೈತರ ಮೇಲೆ ಮೊಕದ್ದಮೆಗಳನ್ನು ಹಾಕಿದೆ. ಕಟ್ಟರ್ ಸರಕಾರ ಈ ಆಂದೋಲನವನ್ನು ದಬಾಯಿಸಲು ವಿವಿಧ ಕಾರ್ಯತಂತ್ರಗಳನ್ನು ಪ್ರಯತ್ನಿಸಿತು, ಆದರೆ ಯಶಸ್ವಿಯಾಗಲಿಲ್ಲ. ಪೋಲೀಸ್ ದಮನದ ಪ್ರತಿಯೊಂದೂ ಕೃತ್ಯವನ್ನು ರೈತರು ಹುಮ್ಮಸ್ಸಿನ ಪ್ರತಿಭಟನೆಗಳೊಂದಿಗೆ ಎದುರಿಸಿದರು.

ಆಗಸ್ಟ್ 28ರಂದು ಕರ್ನಾಲ್‌ನಲ್ಲಿ ರೈತರ ಮೇಲೆ ಲಾಠೀ ಪ್ರಹಾರ ಅಮಾನುಷತೆಯ ಹೊಸ ಎತ್ತರಕ್ಕೇ ಏರಿತು. ಒಬ್ಬ ರೈತ, ಸುಶೀಲ್ ಕಾಜಲ್ ಪೋಲೀಸ್ ಹಲ್ಲೆಯಲ್ಲಿ ತೀವ್ರವಾಗಿ ಗಾಯಗೊಂಡು ಹೃದಯಾಘಾತದಿಂದ ಸತ್ತಿದ್ದಾರೆ. ಅಲ್ಲಿನ ಎಸ್‌ಡಿಎಂ ಆಗಿದ್ದ ಐಎಎಸ್ ಅಧಿಕಾರಿ ಆಯುಷ್ ಸಿನ್ಹರವರ ಪೋಲಿಸ್ ಬಂದೋಬಸ್ತನ್ನು ಮುರಿಯುವವರ "ತಲೆ ಒಡೆಯಿರಿ' ಎಂಬ ವೀಡಿಯೋದಲ್ಲಿ ಸೆರೆಯಾದ ಹುರಿದುಂಬಿಕೆ ವ್ಯಾಪಕ ಆಕ್ರೋಶವನ್ನು ಹುಟ್ಟು ಹಾಕಿದೆ. ಮುಝಫ್ಫರ್‌ನಗರದ ರ್‍ಯಾಲಿಯ ಎರಡು ದಿನಗಳ ನಂತರ, ಸಾವಿರಾರು ರೈತರು ಕರ್ನಾಲ್‌ನ ಮಿನಿ ಸಚಿವಾಲಯಕ್ಕೆ ಮುತ್ತಿಗೆ ಹಾಕಿದ್ದಾರೆ, ಆ ಐಎಎಸ್ ಅಧಿಕಾರಿಯನ್ನು ತನಿಖೆ ಮುಗಿಯುವ ವರೆಗೆ ಅಮಾನತ್ತಿನಲ್ಲಿ ಇಡಬೇಕು, ಅಮಾನುಷ ಲಾಠೀ ಪ್ರಹಾರಕ್ಕೆ ಕಾರಣರಾದ ಪೋಲೀಸ್ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕೆಂಬ ರೈತರ ಆಗ್ರಹ ಈಗ ಮೋದಿ ಸರಕಾರದ ವಿರುದ್ಧ ವಿಶಾಲ ವೇದಿಕೆಯ ಭಾಗವಾಗಿ ಬಿಟ್ಟಿದೆ. 19 ಪ್ರತಿಪಕ್ಷಗಳು ಸಪ್ಟಂಬರ್ 20 ರಿಂದ 30ರ ವರೆಗೆ ನಡೆಸಲು ಕೊಟ್ಟಿರುವ ಪ್ರತಿಭಟನಾ ಕಾರ್ಯಾಚರಣೆಯ ಕರೆಯ ಹೇಳಿಕೆಯಲ್ಲಿ ರೈತರ ಈ ಆಗ್ರಹಗಳು ಅಗ್ರಸ್ಥಾನ ಪಡೆದಿವೆ. ಸಪ್ಟಂಬರ್ 27ರ ಭಾರತ್ ಬಂದ್ ಕರೆಯನ್ನು ಯಶಸ್ವಿಗೊಳಿಸಲು ವ್ಯಾಪಕವಾದ ಅಣಿನೆರಿಕೆಗೆ ರಂಗ ಸಿದ್ಧಗೊಂಡಿದೆ.



ಕಾರ್ಪೊರೇಟ್ ಮಾಧ್ಯಮಗಳ ಒಪಿನಿಯನ್ ಪೋಲ್‌ಗಳು ಆಗಲೇ ಉತ್ತರಪ್ರದೇಶದಲ್ಲಿ ಆಯೇಗಾ ತೋ ಮೋದೀ ಹೀ "(ಬರುವುದು ಮೋದಿಯೇ) ಎಂದು ಕಣಿ ಹೇಳಿವೆ. ಆದರೆ ಮುಝಫ್ಫರ್‌ನಗರದ ರ್‍ಯಾಲಿಯಿಂದ ರೈತರು ಅದನ್ನು ಧ್ವಂಸ ಮಾಡಲು ಹೊರಟಿದ್ದಾರೆ.
ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ



ಬೆಂಕಿ ಹಚ್ಚುವ ರಾಜಕೀಯಕ್ಕೆ ಎದುರಾಗಿ........
ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ಸಪ್ಟಂಬರ್ 5 ರ ಕಿಸಾನ್-ಮಜ್ದೂರ್ ಮಹಾ ಪಂಚಾಯತ್

ಇಡೀ ಮುಝಫ್ಫರ್ ನಗರವನ್ನು ವ್ಯಾಪಿಸಿದ ರ್‍ಯಾಲಿ

ಉತ್ತರಪ್ರದೇಶ–ಉತ್ತರಾಖಂಡದಲ್ಲಿ ಆರೆಸ್ಸೆಸ್–ಬಿಜೆಪಿ ಸೋಲಿಸುವ ಮಿಷನ್ ಆರಂಭ



ಅಶೋಕ ಧವಳೆ

ಸಪ್ಟಂಬರ್ 5 ರಂದು ಉತ್ತರಪ್ರದೇಶದ ಮುಝುಫ್ಫರ್‌ನಗರದಲ್ಲಿ ನಡೆದ ಬೃಹತ್ ಕಿಸಾನ್–ಮಜ್ದೂರ್ ಮಹಾಪಂಚಾಯತ್ ಒಂದು ಬೃಹತ್ ಜನಪ್ರವಾಹವಾಗಿತ್ತು. ಭಾರತದ ಇತಿಹಾಸದಲ್ಲೇ, ಮತ್ತು ಜಗತ್ತಿನ ಇತಿಹಾಸದಲ್ಲೇ ಅತ್ಯಂತ ದೊಡ್ಡ ರೈತರ ರ್‍ಯಾಲಿ ಎನ್ನಬಹುದಾದ ಇಲ್ಲಿಂದ 10 ಲಕ್ಷ ರೈತರು ಮೋದಿ, ಯೋಗಿ, ಷಾಗಳ ನೇತೃತ್ವದ ಸರಕಾರಗಳಿಗೆ ಮತ್ತು ಅಂಬಾನಿಗಳು, ಅದಾನಿಗಳಂತಹ ಅವರ ಬಂಟ ಕಾರ್ಪೊರೇಟ್‌ಗಳಿಗೆ ಒಂದು ಸ್ಪಷ್ಟ ಸಂದೇಶವನ್ನು ತಲುಪಿಸಿದರು ಎನ್ನುತ್ತಾರೆ ಈ ಐತಿಹಾಸಿಕ ರ್‍ಯಾಲಿಯ ಮಹತ್ವವನ್ನು ವಿಶ್ಲೇಷಿಸುತ್ತ ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರು.

"ಕೃಷಿಯಲ್ಲಿ ಏನಾದರೂ ತಪ್ಪಾದರೆ, ಬೇರೆ ಯಾವುದೂ ಸರಿಯಾಗುವ ಅವಕಾಶವಿಲ್ಲ" ಎಂದು ಪ್ರಖ್ಯಾತ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ಒಂದೊಮ್ಮೆ ಹೇಳಿದ್ದರು. ಸಪ್ಟಂಬರ್ 5ರಂದು ಉತ್ತರಪ್ರದೇಶದ ಮುಝುಫ್ಫರ್‌ನಗರದಲ್ಲಿ 10 ಲಕ್ಷ ಜನ ಭಾಗವಹಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದ 'ಕಿಸಾನ್–ಮಜ್ದೂರ್ ಮಹಾಪಂಚಾಯತ್' ಟೈಂಸ್ ಆಫ್ ಇಂಡಿಯಾದಂತಹ ಆಳುವವರ ಪರವಾದ ಪತ್ರಿಕೆ ಕೂಡ ಇದನ್ನು ನೆನಪಿಸಿಕೊಳ್ಳುವಂತೆ ಮಾಡಿದೆ. ಸಪ್ಟಂಬರ್ 7 ರಂದು ಟೈಂಸ್ ಆಫ್ ಇಂಡಿಯಾ ತನ್ನ ಸಂಪಾದಕೀಯ ಪುಟದ 'ಇಂದಿನ ವಿಚಾರ'ದಲ್ಲಿ ಇದನ್ನು ನೆನಪಿಸಿಕೊಂಡಿತು. ಸಪ್ಟಂಬರ್ 5 ಮತ್ತು 6 ರಂದು ಇಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮಗಳು ರೈತರ ಈ ಅಭೂತಪೂರ್ವ ಸಮಾವೇಶವನ್ನು ಒಬ್ಬರ ಮೇಲೆ ಒಬ್ಬರು ಬಿದ್ದು ವರದಿ ಮಾಡಿದರು, ಸಂಪಾದಕೀಯಗಳನ್ನು ಬರೆದರು.

ನಿಜವಾಗಿಯೂ ಇದೊಂದು ಬೃಹತ್ ಜನಪ್ರವಾಹವಾಗಿತ್ತು. ಬಹುಶಃ ಇದು ಭಾರತದ ಇತಿಹಾಸದಲ್ಲೇ, ಮತ್ತು ಜಗತ್ತಿನ ಇತಿಹಾಸದಲ್ಲೇ ಅತ್ಯಂತ ದೊಡ್ಡ ರೈತರ ರ್‍ಯಾಲಿ.

ಇಡೀ ಮುಝುಫ್ಫರ್‌ನಗರವೇ ರ್‍ಯಾಲಿಯ ಮೈದಾನವಾಗಿ ಬಿಟ್ಟಿತ್ತು. ಜಿಐಸಿ ಮೈದಾನ ಒಂದು ಲಕ್ಷ ಜನ ಸೇರುವಷ್ಟು ದೊಡ್ಡದು. ಆದರೆ ಸಪ್ಟಂಬರ್ 5 ರಂದು ಈ ಮೈದಾನ ತುಂಬಿಸಿಕೊಳ್ಳಲು ಸಾಧ್ಯವಾದದ್ದು ಬೆಳಿಗ್ಯೆಯಿಂದಲೇ ಬಂದು ಸೇರಲಾರಂಭಿಸಿದ ಜನಸಾಗರದ ಹತ್ತನೇ ಒಂದು ಭಾಗವನ್ನಷ್ಟೇ. ನಂತರ ಬಂದವರೆಲ್ಲರೂ ನಗರದ ಮುಖ್ಯ ರಸ್ತೆಗಳಲ್ಲಿ ತುಂಬಿಕೊಂಡರು. ಹಲವು ಕಿಲೋಮೀಟರುಗಳ ಉದ್ದಕ್ಕೂ ಹಾಕಿದ್ದ ಲೌಡ್ ಸ್ಪೀಕರುಗಳಲ್ಲಿ ಅವರು ಭಾಷಣಗಳಿಗೆ ಕಿವಿಗೊಟ್ಟರು. ಇಡೀ ನಗರವೇ ರ್‍ಯಾಲಿಯ ಮೈದಾನವಾಗಿ ಬಿಟ್ಟಿತು. ಭಾಗವಹಿಸಲು ಬಂದ ರೈತರಿಗೆ ನೆರವಾಗಲು ನೂರಾರು ಲಂಗರ್(ಆಹಾರ ಪೂರೈಕೆ ವ್ಯವಸ್ಥೆ)ಗಳು ವೈದ್ಯಕೀಯ ಕ್ಯಾಂಪುಗಳನ್ನು ಕೂಡ ಏರ್ಪಡಿಸಲಾಗಿತ್ತು.

ಸ್ಪಷ್ಟ ಸಂದೇಶ

ಮಧ್ಯಾಹ್ನದ ವರೆಗೂ ಜನಸಾಗರ ಹರಿದು ಬರುತ್ತಲೇ ಇತ್ತು, ಹಲವು ಪ್ರದೇಶಗಳ, ಹಲವು ಭಾಷೆಗಳ, ಧರ್ಮಗಳ, ಜಾತಿಗಳ ಜನರು ಒಟ್ಟುಗೂಡಿದರು, ಮೋದಿ, ಯೋಗಿ, ಷಾಗಳ ನೇತೃತ್ವದ ಸರಕಾರಗಳಿಗೆ ಮತ್ತು ಅಂಬಾನಿಗಳು, ಅದಾನಿಗಳಂತಹ ಅವರ ಬಂಟ ಕಾರ್ಪೊರೇಟ್‌ಗಳಿಗೆ ಒಂದು ಸ್ಪಷ್ಟ ಸಂದೇಶವನ್ನು ತಲುಪಿಸಿದರು.

ಈ ಕಿಸಾನ್–ಮಜ್ದೂರ್ ಮಹಾಪಂಚಾಯತ್ ಕಾರ್ಮಿಕರಿಂದ, ಕೃಷಿಕೂಲಿಕಾರರಿಂದ, ನೌಕರರಿಂದ, ಸಣ್ಣ ವ್ಯಾಪಾರಿಗಳು, ಮಹಿಳೆಯರು, ಯುವಜನರು, ವಿದ್ಯಾರ್ಥಿಗಳಿಂದ ಅಭೂತಪೂರ್ವ ಬೆಂಬಲವನ್ನು ಪಡೆಯಿತು. ರೈತ–ಕಾರ್ಮಿಕ ಐಕ್ಯತೆಯ ಘೋಷಣೆಗಳು, ರೈತ–ವಿರೋಧಿ, ಜನ–ವಿರೋಧಿ, ರಾಷ್ಟ್ರ–ವಿರೋಧಿ ಆರೆಸ್ಸೆಸ್–ಬಿಜೆಪಿ ಸರಕಾರದ ವಿರುದ್ಧ ಘೋಷಣೆಗಳು ರ್‍ಯಾಲಿಯುದ್ದಕ್ಕೂ ಕೇಳಬಂದವು.

ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಹರ್ಯಾಣ, ರಾಜಸ್ತಾನ, ಮಧ್ಯಪ್ರದೇಶ ಮತ್ತಿತರ ಹಲವು ರಾಜ್ಯಗಳಿಂದ ರೈತರು ಬಂದಿದ್ದರು, ಅದರಲ್ಲೂ ಯುವ ಮತ್ತು ಮಹಿಳಾ ರೈತರು ದೊಡ್ಡ ಸಂಖ್ಯೆಯಲ್ಲಿದ್ದರು. ಸಾವಿರಾರು ರಾಷ್ಟ್ರಧ್ವಜಗಳು ಮತ್ತು ಆವರವರ ಸಂಘಟನೆಗಳ ಬಾವುಟಗಳನ್ನು ಹಿಡಿದು ಅವರು ಬಂದಿದ್ದರು. ಅದೊಂದು ವರ್ಣಮಯ ದೃಶ್ಯ. ಹಸಿರು, ಕೆಂಪು, ಹಳದಿ, ಬಿಳಿ, ನೀಲಿ ಬಾವುಟಗಳು– ಕೇಸರಿ ಬಣ್ಣವೊಂದು ಬಿಟ್ಟು ಬೇರೆಲ್ಲ ಬಣ್ಣಗಳೂ ಮೇಳವಿಸಿದಂತಿತ್ತು.



ರಾಜಕೀಯ ಮಹತ್ವ–ಐದು ಮುಖ್ಯ ಕಾರಣಗಳು

ಈ ಮಹಾರ್‍ಯಾಲಿ ಭಾರತದ ರಾಜಕೀಯ ರಂಗದಲ್ಲಿ ಒಂದು ತಿರುಗು ಬಿಂದು ಆಗುವ ಸಾಧ್ಯತೆಗಳನ್ನು ಹೊಂದಿದೆ. ದೇಶಕ್ಕಾಗಿ ನಡೆದಿರುವ ಸಮರ ಪಂಜಾಬ್, ಹರ್ಯಾಣದಿಂದ ಈಗ ನೇರವಾಗಿ ಹಿಂದಿ ಭಾಷಿಕ ಹೃದಯಭಾಗಕ್ಕೆ ಚಲಿಸಿದಂತೆ ಕಾಣುತ್ತಿದೆ ಎಂಬುದನ್ನು ಇದು ತೋರಿಸಿದೆ. ಐದು ಮುಖ್ಯ ಕಾರಣಗಳಿಗಾಗಿ ಇದು ಮಹತ್ವದ್ದಾಗಿದೆ.

ಒಂದು, ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಸಮಾವೇಶ ನೀಡಿದ ಭಾರತ್ ಬಂದ್ ಕರೆಯನ್ನು ಅದು ಪುನರುಚ್ಚರಿಸಿತು. ನಿಜ, ಅನಿವಾರ್ಯ ಕಾರಣಗಳಿಂದಾಗಿ ದಿನಾಂಕ ತುಸು ಬದಲಾಗಿ ಸಪ್ಟಂಬರ್ 27 ಆಗಿದೆ. ಆಡಳಿತದಲ್ಲಿರುವ ಸರಕಾರದ ಬಗ್ಗೆ ಜನಗಳಲ್ಲಿ ಅಸಂತೃಪ್ತಿ ತುಂಬಿರುವುದನ್ನು ಇದು ತೋರಿಸಿದೆ. ಇಲ್ಲಿಂದ ಈ ಕಾರ್ಯಾಚರಣೆಗೆ ದೇಶಾದ್ಯಂತ ಎಲ್ಲ ಪ್ರಗತಿಪರ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಬಿರುಸಿನ ಸಿದ್ಧತೆಗಳನ್ನು ಆರಂಭಿಸುತ್ತವೆ. ರ್‍ಯಾಲಿಯಲ್ಲಿ ಮಾತಾಡಿದ ಎಲ್ಲ ಭಾಷಣಕಾರರೂ ಇದನ್ನು ಯಶಸ್ವಿಗೊಳಿಸುವುದರ ಮಹತ್ವವನ್ನು ಒತ್ತಿ ಹೇಳಿದರು.

ಎರಡು, ಈ ರ್‍ಯಾಲಿ 'ಮಿಷನ್ ಉತ್ತರಪ್ರದೇಶ–ಉತ್ತರಾಖಂಡ' ವನ್ನು ಉದ್ಘಾಟಿಸಿತು. ತನ್ನ ಕೇಂದ್ರ ಬೇಡಿಕೆಗಳನ್ನು ಪುನರುಚ್ಚರಿಸಿದ್ದಲ್ಲದೆ ಈ ರ್‍ಯಾಲಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಭಾರೀ ಸೋಲನ್ನುಣ್ಣಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಲಾಗುವುದು ಎಂದು ನಿರ್ಧರಿಸಿತು. ಲಕ್ನೌ ನಲ್ಲಿ ಸಪ್ಟಂಬರ್ 9–10ರಂದು ಸೇರುವ ಎಸ್‌ಕೆಎಂ ಸಭೆಯಲ್ಲಿ ಇದರ ವಿವರಗಳನ್ನು ರೂಪಿಸಲಾಗುವುದು. ಎರಡೂ ರಾಜ್ಯಗಳ ವಿಭಾಗ ಕೇಂದ್ರಗಳಲ್ಲಿ ಬೃಹತ್ ರ್‍ಯಾಲಿಗಳು ಮತ್ತು ಪ್ರತಿಜಿಲ್ಲೆಯಲ್ಲಿ ರ್‍ಯಾಲಿಗಳು ನಡೆಯಲಿವೆ.

ಮೂರು, ಈ ಐಕ್ಯ ರ್‍ಯಾಲಿ 2013ರಲ್ಲಿ ಆರೆಸ್ಸೆಸ್–ಬಿಜೆಪಿ ಇಲ್ಲಿಯೇ ಸೃಷ್ಟಿಸಿದ್ದ ಭೀಕರ ಕೋಮು ಗಲಭೆಗಳ ವಿಭಜನಕಾರೀ ನೆನಪುಗಳನ್ನು ಶಕ್ತಿಯುತವಾಗಿ ಎದುರಿಸಿತು. ಈ ಗಲಭೆಗಳು ಉಂಟು ಮಾಡಿದ ಕೋಮು ಧ್ರುವೀಕರಣ, 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಇಡೀ ಉತ್ತರ ಭಾರತದಲ್ಲಿ, ಮತ್ತು 2017ರಲ್ಲಿ ಉತ್ತರಪ್ರದೇಶದಲ್ಲಿ ಭಾರೀ ಚುನಾವಣಾ ಜಯ ಗಳಿಸುವಲ್ಲಿ ಒಂದು ಪ್ರಮುಖ ಅಂಶವಾಯಿತು. ಈ ರ್‍ಯಾಲಿಯಲ್ಲಿ ವ್ಯಕ್ತಗೊಂಡ ಐಕ್ಯತೆಯ ಸಂಕೇತವೆಂದರೆ ನರೇಶ್ ಟಿಕಾಯ್ತ್ ಮತ್ತು ಗುಲಾಮ್ ಮಹಮ್ಮದ್ ಜೌಲ ವೇದಿಕೆಯಲ್ಲಿ ಜತೆಗೆ ಕುಳಿತಿದ್ದುದು. ರ್‍ಯಾಲಿಯಲ್ಲಿ ಮಾತನಾಡಿದವರೆಲ್ಲರೂ ಉತ್ತರಪ್ರದೇಶದ ಬಿಜೆಪಿ ಸರಕಾರ ಬ್ರಿಟಿಶರ ಕುಖ್ಯಾತ ಒಡೆದಾಳುವ ಧೋರಣೆಯನ್ನು ಅನುಸರಿಸುತ್ತಿದೆ, ಆದರೆ ರೈತ–ಕಾರ್ಮಿಕ ಐಕ್ಯತೆ ಈ ಕೋಮುವಾದಿ–ಜಾತಿವಾದಿ ರಾಜಕೀಯದ ಮೇಲೆ ವಿಜಯ ಸಾಧಿಸುತ್ತದೆ, ರೈತರು ಇನ್ನೆಂದೂ ಕೋಮುಗಲಭೆ ನಡೆಯಲು ಬಿಡುವುದಿಲ್ಲ ಎಂದು ಸಾರಿದರು.

ಉತ್ತರಪ್ರದೇಶದ ಸಾವಿರಾರು ಮುಸ್ಲಿಮರು ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದಲ್ಲದೆ, ಲಂಗರ್‌ಗಳನ್ನು ರಚಿಸಿ ಆಹಾರ ಪೂರೈಕೆ, ಮತ್ತಿತರ ಸೇವೆಗಳನ್ನೂ ಒದಗಿಸಿದರು, ಮಸೀದಿಗಳಲ್ಲಿ ಹಿಂದೂ ಮತ್ತು ಸಿಖ್ ರೈತರು ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿನ ಮುಸ್ಲಿಮರ ಆತಿಥ್ಯ ಹಲವರ ಮನ ತಟ್ಟಿತು.

ನಾಲ್ಕು, ಸುಮಾರಾಗಿ ಎಲ್ಲ ಪ್ರಮುಖ ಭಾಷಣಕಾರರು ಮೋದಿ ಸರಕಾರ ನಾಚಿಕೆಗೆಟ್ಟ

ಪುಟ 12 ನೋಡಿ

ರ್‍ಯಾಲಿಯಲ್ಲಿ ಮಾತನಾಡಿದವರೆಲ್ಲರೂ ರೈತ–ಕಾರ್ಮಿಕ ಐಕ್ಯತೆ ಕೋಮುವಾದಿ–ಜಾತಿವಾದಿ ರಾಜಕೀಯದ ಮೇಲೆ ವಿಜಯ ಸಾಧಿಸುತ್ತದೆ, ರೈತರು ಇನ್ನೆಂದೂ ಕೋಮುಗಲಭೆ ನಡೆಯಲು ಬಿಡುವುದಿಲ್ಲ ಎಂದು ಸಾರಿದರು.



ಇನ್ನಷ್ಟು ಸುಡುತ್ತಿದೆ ಭಾರತದ ಬಡಜನರ ಒಡಲ ಬೆಂಕಿ



ಅರಣ್ಯವಾಸಿ ಭುವನೇಶ್ವರಿ

ಕಳೆದ ಒಂದು–ಒಂದೂವರೆ ವರ್ಷದಲ್ಲಿ ಭಾರತದಲ್ಲಿ ಬಡಜನರ ಒಡಲ ಬೆಂಕಿ ಇನ್ನೂ ಹೆಚ್ಚಾಗಿ ಸುಡಲಾರಂಭಿಸಿದೆ. ಈ ಬಗ್ಗೆ ಇಂಗ್ಲಿಷ್ ವೆಬ್‌ಪತ್ರಿಕೆ 'ನ್ಯೂಸ್‌ಕ್ಲಿಕ್'ನ ತಂಡ ನಡೆಸಿದ ತನಿಖೆಯ ವರದಿ ಇಲ್ಲಿದೆ.

ಅನುವಾದ: ಎಸ್.ಕೆ. ರಾಮು

ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಂದ ಹಿಡಿದು ಮಹಾನಗರಗಳಲ್ಲಿ ದಿನಕೂಲಿ ನೌಕರರ ವರೆಗೆ, ಕಳೆದ ವರ್ಷದುದ್ದಕ್ಕೂ ಹಸಿವು ಲಕ್ಷಾಂತರ ಭಾರತೀಯರನ್ನು ಬಾಧಿಸಿತು. ಈ ಸಮಯದಲ್ಲಿ ಕೇಂದ್ರ ಸರ್ಕಾರವು ಆಹಾರ ಧಾನ್ಯಗಳ ಬೃಹತ್ ದಾಸ್ತಾನು ಹೊಂದಿತ್ತು.

ಕೋವಿಡ್–19 ಸಾಂಕ್ರಾಮಿಕ ಮತ್ತು ಸರ್ಕಾರದ ತಪ್ಪುಕಲ್ಪನೆ ಮತ್ತು ಹೃದಯಹೀನ ಪ್ರತಿಕ್ರಿಯೆ ಭಾರತದ ಜನರನ್ನು ಕಂಗೆಡಿಸಿದೆ. ಪದೇ ಪದೇ ಲಾಕ್‌ಡೌನ್‌ಗಳಿಂದಾಗಿ ಅಭೂತಪೂರ್ವ ಉದ್ಯೋಗ ನಷ್ಟ ಮತ್ತು ದುಡಿಮೆಯ ನಷ್ಟ ದೊಡ್ಡ ಪ್ರಮಾಣದ ಜನರನ್ನು ಹಸಿವಿನ ಅಂಚಿಗೆ ತಳ್ಳಿತು. ಏತನ್ಮಧ್ಯೆ, ತತ್ತರಿಸಿದ ಆಡಳಿತವು ಪರಿಹಾರದ ವಿಷಯದಲ್ಲಿ ಆಹಾರ ಧಾನ್ಯಗಳು ಮತ್ತು ಹಣಕಾಸು ಸಹಾಯದ ಪರಿಹಾರವನ್ನು ಅಸಮರ್ಪವಾಗಿ ಕೇವಲ ಕೆಲವು ತಿಂಗಳುಗಳ ವರೆಗೆ ಕೆಲವೇ ಭಾಗದ ಜನರಿಗೆ ಮಾತ್ರ ಒದಗಿಸಿತು. ಜನರು ಹುಲ್ಲು ಮತ್ತು ಕಾಡುಗೆಡ್ಡೆಗಳನ್ನು ತಿನ್ನುವುದು, ನೆರೆಹೊರೆಯವರು ಮತ್ತು ದತ್ತಿಗಳಿಂದ ಆಹಾರಕ್ಕಾಗಿ ಭಿಕ್ಷೆ ಬೇಡುವುದು, ಕೇವಲ ಬದುಕಲು ಅಮಾನುಷ ಬಡ್ಡಿದರದಲ್ಲಿ ಸಾಲ ಪಡೆಯುವುದು ಅಥವಾ ಊಟವನ್ನು ತ್ಯಜಿಸುವುದು ಮುಂತಾದ ದಾರುಣ ಕಥೆಗಳು ವ್ಯಾಪಕವಾಗಿ ದೇಶದಾದ್ಯಂತ ಹೊರಹೊಮ್ಮಿದವು. ಅತ್ಯಂತ ಹೆಚ್ಚು ಬಾಧೆ ಅನುಭವಿಸಿದವರೆಂದರೆ ಅರಣ್ಯದಲ್ಲಿ ವಾಸಿಸುವ ಆದಿವಾಸಿಗಳು, ಭೂರಹಿತ ಕೃಷಿ ಕಾರ್ಮಿಕರು, ಮುಚ್ಚಿದ ಕಾರ್ಖಾನೆಗಳ ಕೈಗಾರಿಕಾ ಕಾರ್ಮಿಕರು ಮತ್ತು ಅನೌಪಚಾರಿಕ ಸೇವೆಗಳು ಅಥವಾ ನಿರ್ಮಾಣ ಮತ್ತು ಸೇವಾವಲಯದಂತಹ ಕ್ಷೇತ್ರಗಳಲ್ಲಿ ದಿನಕೂಲಿ ಕೆಲಸದ ಮೇಲೆ ಅವಲಂಬಿತವಾಗಿರುವ ಜನಸಂಖ್ಯೆಯ ಬಹುಪಾಲು ಸಮುದಾಯಗಳು.

ಅರಣ್ಯದಲ್ಲಿ ವಾಸಿಸುವ ಪುಲಯಾರ್ ಸಮುದಾಯಕ್ಕೆ ಸೇರಿದ ಭುವನೇಶ್ವರಿ, ತನ್ನ ಕುಟುಂಬದೊಂದಿಗೆ ದಕ್ಷಿಣ ಭಾರತದ ತಮಿಳುನಾಡಿನ ಅಣ್ಣಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಅರಣ್ಯ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ ಅಥವಾ ಕುಟುಂಬ ಪಡಿತರ ಚೀಟಿ ಇಲ್ಲದೆ ಸರ್ಕಾರದ ಪರಿಹಾರವನ್ನು ಪಡೆಯಲು ಸಾಧ್ಯವಾಗಲಿಲ್ಲ, ಅವರು ಏಪ್ರಿಲ್ ಮತ್ತು ಮೇ 2021 ರಲ್ಲಿ ಲಾಕ್‌ಡೌನ್ ಸಮಯದಲ್ಲಿ ಕಾಡು ಗೆಡ್ಡೆಗಳಿಂದ ಮಾಡಿದ ಗಂಜಿ ಆಧಾರದ ಮೇಲೆ ಬದುಕುಳಿದರು.

"ನಾನು ಪ್ರತಿದಿನ ಬೆಳಿಗ್ಗೆ 10 ಕಿಮೀ ಕಾಡಿಗೆ ನಡೆದು ಉತ್ಪನ್ನಗಳನ್ನು ಸಂಗ್ರಹಿಸುತ್ತೇನೆ. ನಮ್ಮ ಸ್ಥಳವನ್ನು ತಲುಪಲು ನನಗೆ ಸುಮಾರು ಎರಡು ಗಂಟೆಗಳು ಬೇಕು. ನಾವು ಬೆಳಿಗ್ಗೆ 8 ಗಂಟೆಗೆ ಪ್ರಾರಂಭಿಸಿ ಸಂಜೆ 5 ಗಂಟೆಗೆ ಹಿಂತಿರುಗುತ್ತೇವೆ. ಲಾಕ್‌ಡೌನ್ ಸಮಯದಲ್ಲಿ, ನಾವು ನೆಲಗಡಲೆ ಕೊಯ್ಲು ಮಾಡಿದ್ದೇವೆ. ನಾವು ಅದನ್ನು ನಂತರ ಮಂಡಿ (ಮಾರುಕಟ್ಟೆ)ಯಲ್ಲಿ ಮಾರಾಟ ಮಾಡಬಹುದೆಂಬ ಭರವಸೆಯಲ್ಲಿ ಅದನ್ನು ಸಂಗ್ರಹಿಸಿದ್ದೇವೆ ಎಂದು ಭುವನೇಶ್ವರಿ ನ್ಯೂಸ್‌ಕ್ಲಿಕ್‌ಗೆ ತಿಳಿಸಿದರು. "ನಾವು ಈ ಗೆಡ್ಡೆಗಳ ಮೇಲೆ ಎಷ್ಟು ದಿನ ಬದುಕಬಹುದು?" ಎಂದು ಆಕೆ ಹತಾಶೆಯಿಂದ ಕೇಳಿದರು.

ಭಾರತದ ಇತರ ಅನೇಕ ಬುಡಕಟ್ಟು ಸಮುದಾಯಗಳಂತೆ, ಅವರ ಏಕೈಕ ಆದಾಯದ ಮೂಲವೆಂದರೆ ಸಣ್ಣ ಅರಣ್ಯ ಉತ್ಪನ್ನಗಳು. ಲಾಕ್‌ಡೌನ್ ಸಮಯದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸ್ಥಗಿತಗೊಳಿಸಿದ್ದು ಅವರ ಜೀವನೋಪಾಯದ ಮೂಲವನ್ನು ಕಡಿತಗೊಳಿಸಿತು ಮತ್ತು ಅವರನ್ನು ಸಮಾಜದ ಉಳಿದ ಭಾಗಗಳಿಂದ ಕಡಿತಗೊಳಿಸಿತು. ತಮಿಳುನಾಡಿನಲ್ಲಿ ಇಂತಹ 40,000 ಕ್ಕೂ ಹೆಚ್ಚು ಬುಡಕಟ್ಟು ಕುಟುಂಬಗಳು ಸಬ್ಸಿಡಿ ಆಹಾರ ಧಾನ್ಯಕ್ಕೆ ಅರ್ಹವಾಗಿರುವ ಪಡಿತರ ಚೀಟಿಯನ್ನು ಹೊಂದಿಲ್ಲ.

ದಾಖಲೆಯ ಫಸಲು, ಆದರೂ ಕೃಷಿ ಕಾರ್ಮಿಕರು ಹಸಿದಿದ್ದಾರೆ

ಭೂರಹಿತ ಕಾರ್ಮಿಕರು ಮತ್ತು ಸಣ್ಣ ರೈತರು ಕೂಡ ಬಿಕ್ಕಟ್ಟಿನ ಭಾರವನ್ನು ಎದುರಿಸಿದ್ದಾರೆ. ವರ್ಷವಿಡೀ ಕೃಷಿಯು ಮುಂದುವರಿದಿದ್ದರೂ ಮತ್ತು ಭಾರತವು ಆಹಾರ ಧಾನ್ಯಗಳ ದಾಖಲೆಯ ಸುಗ್ಗಿಯನ್ನು ಉತ್ಪಾದಿಸಿದ್ದು (ಸುಮಾರು 395 ಮಿಲಿಯನ್ ಟನ್‌ಗಳು) ಕೃಷಿ ಕಾರ್ಮಿಕರ ಕೂಲಿಗಳು ಮತ್ತು ಅಂಚಿನಲ್ಲಿರುವ ರೈತರ ಆದಾಯವು ಕಡಿಮೆಯಾಯಿತು ಮತ್ತು ಋಣಭಾರ ಹೆಚ್ಚಾಯಿತು. ಭಾರತದಲ್ಲಿ 14 ಕೋಟಿಗೂ ಹೆಚ್ಚು ಭೂರಹಿತ ಕಾರ್ಮಿಕರು ಇದ್ದಾರೆ.

ಮೊಹಮ್ಮದ್ ಖಾನ್, ಪಶ್ಚಿಮ ಬಂಗಾಳ ರಾಜ್ಯದ ದಕ್ಷಿಣ 24 ಪರಗಣ ಜಿಲ್ಲೆಯ ಸಣ್ಣ ರೈತ, 2.5 ಬಿಘಾ ಜಮೀನು ಹೊಂದಿದ್ದಾರೆ (ಸುಮಾರು 0.4 ಎಕರೆ). ಅವರು 1.5 ಬಿಘಾಗಳನ್ನು ಗುತ್ತಿಗೆಗೆ ನೀಡಿ ಮತ್ತು ಉಳಿದವುಗಳಲ್ಲಿ ತರಕಾರಿಗಳನ್ನು ಬೆಳೆಯುತ್ತಾರೆ. ಲಾಕ್‌ಡೌನ್ ಮತ್ತು ನಿರ್ಬಂಧಗಳು ಅವರು ಆಹಾರಕ್ಕಾಗಿ ಕಷ್ಟಪಡುವಂತೆ ಮಾಡಿದವು. ಏಕೆಂದರೆ ಅವರ ಅಲ್ಪ ತರಕಾರಿ ಬೆಳೆಗೆ ಸಾರಿಗೆ ಸೌಲಭ್ಯ ಲಭ್ಯವಿರಲಿಲ್ಲ.

"ನನ್ನ ಗುಡಿಸಲಿನಲ್ಲಿ ಹಸಿವು ಸದಾ ಇರುವಂತದ್ದು. ಊಟ ಮಾಡದಿರುವುದು ನಿಯಮಿತ ಅಭ್ಯಾಸ "ಎಂದು ಅವರು ಹೇಳಿದರು. ಮೇ ತಿಂಗಳಲ್ಲಿ ಕರಾವಳಿ ಪ್ರದೇಶವನ್ನು ಅಪ್ಪಳಿಸಿದ ಯಾಸ್ ಚಂಡಮಾರುತವು ಅವನ ಗುಡಿಸಲನ್ನು ಹಾನಿಗೊಳಿಸಿತು. ಆತನ ಜಮೀನು ಜಲಾವೃತಗೊಂಡಿತು, ಹಸಿವಿನ ಹಿಡಿತದಿಂದ ತಪ್ಪಿಸಿಕೊಳ್ಳುವ ಯಾವುದೇ ಅವಕಾಶವೇ ಇಲ್ಲದಂತಾಯಿತು.

ಎಸ್ ಸೋಮಾಸ್, ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ಕೃಷಿ ಕಾರ್ಮಿಕ, ಭತ್ತದ ಗದ್ದೆಗಳು ಅಥವಾ ಬಾಳೆ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವುದರಿಂದ ಪಡೆಯುವ ದಿನಕೂಲಿ ವೇತನವನ್ನಷ್ಟೇ ಅವಲಂಬಿಸಿರಬೇಕಾದ ವ್ಯಕ್ತಿ. ಆದರೆ ಕಡಿಮೆ ಕೆಲಸದ ದಿನಗಳು ಮತ್ತು ಸರ್ಕಾರದ ಅಸಮರ್ಪಕ ಬೆಂಬಲದಿಂದಾಗಿ ಅವರು ಮತ್ತು ಅವರ ಕುಟುಂಬವು ಮಾರ್ಚ್ 2020 ಮತ್ತು ಏಪ್ರಿಲ್ 2021ರ ಎರಡು ಲಾಕ್ ಡೌನ್‌ಗಳಲ್ಲಿ ಅಪಾರವಾಗಿ ತೊಂದರೆ ಅನುಭವಿಸಿತು.

"ಮಾರ್ಚ್ 2020 ರಿಂದ, ನಾವು ಕೆಲಸ ಮಾಡಿದ ದಿನಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೂಡ ಕಳೆದ ವರ್ಷದ ಬಹಳಷ್ಟು ಕಾಲದ ವರೆಗೆ ನಿಲ್ಲಿಸಲಾಯಿತು" ಎಂದು ಸೋಮಸ್ ಹೇಳಿದರು.

"ಬೆಲೆ ಕುಸಿತದಿಂದಾಗಿ ರೈತರು ನಷ್ಟ ಅನುಭವಿಸಿದರು. ನಾವು ಅವರ ಕೆಲಸದ ಮೇಲೆ ಅವಲಂಬಿಸಿದ್ದೇವೆ, ಹೀಗಾಗಿ ನಮ್ಮ ಆದಾಯಕ್ಕೂ ಹೊಡೆತ ಬಿದ್ದಿದೆ" ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯದಿಂದ ಬಂದಿರುವ ರಘು ಮತ್ತು ಅವರ ಕುಟುಂಬ ತಮಿಳುನಾಡು ರಾಜ್ಯದಲ್ಲಿ ವಲಸೆ ಕಾರ್ಮಿಕರಾಗಿದ್ದಾರೆ. ಅವರು ಸರ್ಕಾರದಿಂದ ಯಾವುದೇ ಬೆಂಬಲವನ್ನು ಪಡೆದಿಲ್ಲ ಮತ್ತು ಅವರು ನೋಂದಾಯಿತ ಮತದಾರರಲ್ಲದ ಕಾರಣ ಯಾವುದೇ ರಾಜಕೀಯ ಪಕ್ಷವು ಅವರ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂದು ಅವರು ಹೇಳುತ್ತಾರೆ.

ಈ ಸಾಂಕ್ರಾಮಿಕ ಅಪ್ಪಳಿಸುವ ಮುನ್ನವೇ ಭಾರತವು ಬೆಂಬಿಡದ ಮತ್ತು ವ್ಯಾಪಕವಾದ ಹಸಿವಿನಿಂದ ಬಳಲುತ್ತಿತ್ತು. ಆಹಾರ ಮತ್ತು ಕೃಷಿ ಸಂಸ್ಥೆಯ (ಎಫ್.ಎ.ಒ.) 2020 ರ ಅಂದಾಜಿನ ಪ್ರಕಾರ, ಕನಿಷ್ಠ 18.9 ಕೋಟಿ ಭಾರತೀಯರು ತೀವ್ರ ಹಸಿವಿನಿಂದ ಬಳಲುತ್ತಿದ್ದಾರೆ. ಜಾಗತಿಕ ಹಸಿವು ಸೂಚ್ಯಂಕ 2020, ಸಾಮೂಹಿಕ ಹಸಿವಿನಿಂದ ಬಳಲುತ್ತಿರುವ 107 ದೇಶಗಳಲ್ಲಿ ಭಾರತವನ್ನು 94 ನೇ ಸ್ಥಾನದಲ್ಲಿರಿಸಿದೆ. 2015–16ರ ನ್ಯಾಷನಲ್ ಫ್ಯಾಮಿಲಿ & ಹೆಲ್ತ್ ಸರ್ವೆ(ಎನ್.ಎಫ್.ಹೆಚ್.ಎಸ್.)ಯಲ್ಲಿ ಐದು ವರ್ಷದವರೆಗಿನ ಶೇ. 59% ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ, 53% ನಷ್ಟು ಮಹಿಳೆಯರು ಕೂಡ ರಕ್ತಹೀನತೆಯಿಂದ ಬಾಧಿತರಾಗಿದ್ದಾರೆ. 38% ಕ್ಕಿಂತ ಹೆಚ್ಚು ಮಕ್ಕಳು ಬೆಳವಣಿಗೆ ಕುಂಠಿತಗೊಂಡವರು, ಮತ್ತು ಸುಮಾರು 20% ಕೃಶರಾದವರು – ಇವೆರಡೂ ದೀರ್ಘಕಾಲದ ಅಪೌಷ್ಟಿಕತೆಯ ಸೂಚಕಗಳು. ಸಾಂಕ್ರಾಮಿಕ ರೋಗವು ಈ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು, ಮತ್ತು ಇದಕ್ಕೆ ಸರ್ಕಾರದ ಬಳಿ ಉತ್ತರವಿರಲಿಲ್ಲ.

ನಗರ ಭಾರತವೂ ಸಂಕಷ್ಟಕ್ಕೀಡಾಯಿತು..

ಸಂಕಷ್ಟಕ್ಕೀಡಾದವರು ಸುಮಾರು ಮೂರನೇ ಎರಡರಷ್ಟಿರುವ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಭಾರತೀಯರು ಮಾತ್ರವೇ ಅಲ್ಲ, ನಗರ ಪ್ರದೇಶಗಳಲ್ಲಿಯೂ, ಪೊಲೀಸರು ಕ್ರೂರವಾಗಿ ಜಾರಿಗೊಳಿಸಿದ ಕಠಿಣ ಲಾಕ್‌ಡೌನ್ ನಿರ್ಬಂಧಗಳು ಮತ್ತು ಯಾವುದೇ ಹಣಕಾಸಿನ ಪರಿಹಾರವಿಲ್ಲದೆ ಕೆಲಸಗಾರರನ್ನು ವಜಾಗೊಳಿಸಲು ಉದ್ಯೋಗದಾತರಿಗೆ ನೀಡಿದ ಮುಕ್ತ ಅಧಿಕಾರ ಲಕ್ಷಾಂತರ ಜನರನ್ನು ಸಂಪೂರ್ಣ ನಿರ್ಗತಿಕತೆಗೆ ಮತ್ತು ಸಾವಿನ ಕೂಪಕ್ಕೂ ನೂಕಿದೆ. ನಗರ ಪ್ರದೇಶಗಳಲ್ಲಿ ಕೈಗಾರಿಕಾ ಕಾರ್ಮಿಕರ ಜೊತೆಗೆ ವೈಯಕ್ತಿಕ ಸೇವಾ ಪೂರೈಕೆದಾರರು ಮತ್ತು ಸಣ್ಣ ಅಂಗಡಿಯವರು, ಮಾರಾಟಗಾರರು ಮತ್ತು ನಿರ್ವಹಣಾ ಸಿಬ್ಬಂದಿ ಸೇರಿದಂತೆ ಲಕ್ಷಾಂತರ ಅನೌಪಚಾರಿಕ ಕೆಲಸಗಾರರಿದ್ದಾರೆ.

ಗುಜರಾತ್‌ನ ಸೂರತ್‌ನಲ್ಲಿ 30 ವರ್ಷದ ವಜ್ರ ಪಾಲಿಶಿಂಗ್ ಮಾಡುವ ಕೆಲಸಗಾರ ಮಿತೇಶ್ ಪ್ರಜಾಪತಿ, ಅವರ ನಾಲ್ವರ ಕುಟುಂಬದ ಏಕೈಕ ದುಡಿಯುವ ಸದಸ್ಯರಾಗಿದ್ದರು. ಕಳೆದ ವರ್ಷ ಲಾಕ್‌ಡೌನ್ ನಂತರ, ಈ ವಲಯದ ಇತರರಂತೆ ಅವನಿಗೆ ಯಾವುದೇ ಕೆಲಸ ಸಿಗಲಿಲ್ಲ. ಕುಟುಂಬವು ನೆರೆಹೊರೆಯವರಿಂದ ಆಹಾರವನ್ನು ಎರವಲು ಪಡೆಯುವುದರ ಮೂಲಕ ಅಥವಾ ಸಾಲಗಳನ್ನು ತೆಗೆದುಕೊಳ್ಳುವ ಮೂಲಕ ಏಳು ತಿಂಗಳ ಕಾಲ ಬದುಕಲು ಸಾಧ್ಯವಾಯಿತು. ಆದರೆ ಪ್ರಜಾಪತಿ ತನ್ನ ಅನಾರೋಗ್ಯದಿಂದ ಬಳಲುತ್ತಿರುವ ತಾಯಿಗೆ ಚಿಕಿತ್ಸೆ ನೀಡಲು ಕಷ್ಟಪಡುತ್ತಿದ್ದರು. ಕಳೆದ ವರ್ಷ ಜುಲೈ ಆರಂಭದಲ್ಲಿ, ಅವರು ಅನಾರೋಗ್ಯಕ್ಕೆ ಒಳಗಾದಾಗ

ಪುಟ 10 ನೋಡಿ

ಕರ್ನಾಟಕದಿಂದ ತಮಿಳುನಾಡಿಗೆ ಹೋಗಿರುವ ರಘು ಮತ್ತು ಕುಟುಂಬ



ಇನ್ನಷ್ಟು ಸುಡುತ್ತಿದೆ ಭಾರತದ ಬಡಜನರ ಒಡಲ ಬೆಂಕಿ

ಪುಟ 9 ರಿಂದ

ಕೋವಿಡ್ –19 ಪರೀಕ್ಷೆಗೆ ಒಳಗಾಗಲು ಸಲಹೆ ನೀಡಲಾಯಿತು. ಪ್ರಜಾಪತಿಯು ತನ್ನ ಚಿಕಿತ್ಸೆಯ ಹೆಚ್ಚುವರಿ ವೆಚ್ಚವನ್ನು ತಾಳಲಾರದೆ, 4 ಜುಲೈ 2020 ರಂದು ನದಿಗೆ ಹಾರಿ, ಬದುಕುವ ನೋವಿಗಿಂತ ಸಾವೇ ಲೇಸು ಎಂದು ಅದನ್ನು ಅಪ್ಪಿಕೊಂಡರು.

"ಅವ ಅಪಾರ ಮಾನಸಿಕ ಒತ್ತಡದಲ್ಲಿದ್ದ. ಸಾಮಾನ್ಯ ಖರ್ಚುಗಳಲ್ಲದೆ, ನಮ್ಮ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಮತ್ತು ಪ್ರತಿ ತಿಂಗಳು ಔಷಧಿಗಳ ಅಗತ್ಯವಿದೆ. ವೈದ್ಯರು ಕೋವಿಡ್ –19 ಇರಬಹುದು ಪರೀಕ್ಷೆ ಮಾಡಿಸಿಕೋ ಎಂದು ಸೂಚಿಸಿದಾಗ, ಅದನ್ನು ಇನ್ನೊಂದು ವೆಚ್ಚವಾಗಿ ನೋಡಿದ, ಆ ಬಗ್ಗೆ ಯೋಚಿಸಲೂ ಅವನಿಗೆ ಸಾಧ್ಯವಾಗಲಿಲ್ಲ "ಎಂದು ಅವರ ಸಹೋದರ ಹಿತೇಶ್ ಪ್ರಜಾಪತಿ ನ್ಯೂಸ್‌ಕ್ಲಿಕ್‌ಗೆ ತಿಳಿಸಿದರು.

ಅಲಿಗಢ್, ಉತ್ತರ ಪ್ರದೇಶ ರಾಜ್ಯದ ಉತ್ತರ ಭಾಗದ ನಗರ, ಅಲ್ಲಿ ಎರಡು ತಿಂಗಳಿಂದ ತೀವ್ರ ಹಸಿವಿನೊಂದಿಗೆ ಹೋರಾಡುತ್ತಿದ್ದ 43 ವರ್ಷದ ಗುಡ್ಡಿ, ಐದು ಮಕ್ಕಳ ತಾಯಿ ಜಿಲ್ಲಾ ಆಸ್ಪತ್ರೆಯಲ್ಲಿ ನ್ಯೂಸ್‌ಕ್ಲಿಕ್‌ಗೆ ಕಾಣಸಿಕ್ಕಿದರು. ಆಕೆಯ ಪತಿ, ಕುಟುಂಬದ ಏಕೈಕ ಅನ್ನದಾತ, ಕಳೆದ ವರ್ಷ ಕೋವಿಡ್ –19 ರಿಂದ ಸಾವನ್ನಪ್ಪಿದಾಗ, ಕಾರ್ಖಾನೆಯಲ್ಲಿ ತಿಂಗಳಿಗೆ ರೂ 4,000 ಕೆಲಸಕ್ಕೆ ಸೇರಬೇಕಾಗಿ ಬಂದಿತ್ತು. ಆದರೆ ಕೆಲವು ತಿಂಗಳ ಹಿಂದೆ ಲಾಕ್‌ಡೌನ್‌ನಿಂದಾಗಿ ಕಾರ್ಖಾನೆ ಸ್ಥಗಿತಗೊಂಡಿತು. ಆಕೆಯ ಹಿರಿಯ ಮಗ ಅಜಯ್ (22) ಕಟ್ಟಡ ನಿರ್ಮಾಣ ಸ್ಥಳದಲ್ಲಿ ದಿನಕೂಲಿ ವೇತನಕ್ಕಾಗಿ ಕೆಲಸ ಮಾಡಲು ಪ್ರಾರಂಭಿಸಿದನು, ಆದರೆ ಎರಡನೇ ಅಲೆಯು ಆ ಕೆಲಸವನ್ನು ಕಸಿದುಕೊಂಡಿತು. ಕ್ರಮೇಣ, ಅವರ ಉಳಿತಾಯವು ಖಾಲಿಯಾಯಿತು..

"ಹಸಿವು ಮತ್ತು ರೋಗವು ನಮ್ಮನ್ನು ತುಂಬಾ ಬಾಧಿಸಿದೆ, ನಾವು ಸರಿಯಾಗಿ ನಡೆಯಲು ಅಥವಾ ಮಾತನಾಡಲು ಸಾಧ್ಯವಿರಲಿಲ್ಲ. ನಮ್ಮ ನೆರೆಹೊರೆಯವರು ಏನನ್ನೂ ನೀಡುವುದನ್ನು ನಿಲ್ಲಿಸಿದ ನಂತರ ಪರಿಸ್ಥಿತಿ ಹದಗೆಟ್ಟಿತು. ನಾವು ಅವರನ್ನು ಆಹಾರಕ್ಕಾಗಿ ಬೇಡಿಕೊಳ್ಳುತ್ತಿದ್ದೆವು, ಆದರೆ ಎಲ್ಲರೂ ಕಷ್ಟಪಡುತ್ತಿರುವಾಗ ಅವರು ನಮಗೆ ಎಷ್ಟು ಹೊತ್ತು ಆಹಾರ ನೀಡಬಹುದು," ಎಂದು ಈಗ ಆರೋಗ್ಯ ಸ್ವಲ್ಪ ಸ್ಥಿರಗೊಂಡಿರುವ ಗುಡ್ಡಿ ನೆನಪಿಸಿಕೊಂಡರು. ಅವರು ತನ್ನ ಇಡೀ ಕುಟುಂಬವು ಹೇಗೆ ನೀರು ಮಾತ್ರ ಕುಡಿದು ಬದುಕುಳಿಯಿತು ಎಂಬುದರ ಕುರಿತು ಮಾತನಾಡಿದರು. ಕಡೆಗೆ ಸ್ಥಳೀಯ ಎನ್.ಜಿ.ಒ. ಅವರನ್ನು ರಕ್ಷಿಸಿ ಆಸ್ಪತ್ರೆಗೆ ಸೇರಿಸಿದರು.



ಮೊಹಮ್ಮದ್ ಖಾನ್
ಪಶ್ಚಿಮ ಬಂಗಾಳ

ಅನೌಪಚಾರಿಕ ವಲಯದ ಕಾರ್ಮಿಕರು ಈ ಪ್ರದೇಶಗಳಲ್ಲಿಯೂ ತೊಂದರೆ ಅನುಭವಿಸಿದರು. ಮಧ್ಯಪ್ರದೇಶ ರಾಜ್ಯದ ಭೋಪಾಲ್‌ನಲ್ಲಿ ಮನೆಕೆಲಸಗಾರಳಾದ ವಿಮಲಾದೇವಿ ಮತ್ತು ಆಕೆಯ ಪತಿ, ಕಟ್ಟಡ ಕಾರ್ಮಿಕ, ಇಬ್ಬರೂ ಕೆಲಸ ಕಳೆದುಕೊಂಡರು. ನೋಡಿಕೊಳ್ಳಲು ಇಬ್ಬರು ಅಂಬೆಗಾಲಿಡುವ ಮಕ್ಕಳು ಇದ್ದು, ಅವರು ಸರ್ಕಾರದಿಂದ ಯಾವುದೇ ಸಹಾಯವನ್ನು ಪಡೆಯಲಿಲ್ಲ ಎಂದು ಕಟುವಾಗಿ ದೂರಿದಳು.

"ಲಾಕ್‌ಡೌನ್‌ನ ಎರಡನೇ ಅಲೆಯು ನಮ್ಮನ್ನು ಹಸಿವಿನ ಅಂಚಿಗೆ ತಳ್ಳಿತು. ಎನ್‌ಜಿಒಗಳು ಮತ್ತು ಸಾಮಾಜಿಕ ಗುಂಪುಗಳು ಸಹಾಯ ಮಾಡಲು ಮುಂದೆ ಬರದಿದ್ದರೆ, ನಾವು ಆಗ ಹಸಿವಿನಿಂದ ಸಾಯುತ್ತಿದ್ದೆವು," ಎಂದು ರಾಮ್ ಸುರೇಶ್ ಯಾದವ್, ನ್ಯಾಷನಲ್ ಫೆಡರೇಶನ್ ಆಫ್ ರೈಲ್ವೆ ಪೋರ್ಟರ್ಸ್ ಸಮಘಟನೆಯ ಅಧ್ಯಕ್ಷ, ಉತ್ತರ ಪ್ರದೇಶದ ರಾಜಧಾನಿ ಲಕ್ನೋದಲ್ಲಿ ನ್ಯೂಸ್‌ಕ್ಲಿಕ್‌ಗೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರದ ಸಾಂಬಾ ಮೂಲದ ನೀರೂ ತನ್ನ 63 ವರ್ಷದ ತಂದೆ ದೇಶರಾಜ್ ಕುಮಾರ್ ಬಗ್ಗೆ ಮಾತನಾಡುತ್ತಾ ಹತಾಶೆಯನ್ನು ಹೊರಹಾಕಿದರು, ಅವರು ತರಕಾರಿ ಮಾರುತ್ತಿದ್ದರು ಆದರೆ ಲಾಕ್‌ಡೌನ್‌ಗಳ ಸಮಯದಲ್ಲಿ ಆದಾಯ ಕಳೆದುಕೊಂಡು ಸಾಲದಲ್ಲಿ ಮುಳುಗಿದರು, ಈಗ ಅವರು ಮದುವೆಗಳಲ್ಲಿ ಪಾತ್ರೆಗಳನ್ನು ತೊಳೆಯುತ್ತಾರೆ.

"ಈ ರೀತಿ ಬದುಕುವುದಕ್ಕಿಂತ ತನ್ನ ಜೀವನವನ್ನು ಕೊನೆಗೊಳಿಸುವುದು ಉತ್ತಮ ಎಂದು ಅವನು ಭಾವಿಸಿದ ದಿನಗಳು ಇದ್ದವು. ಆದರೆ ಎಲ್ಲವೂ ಸರಿಯಾಗುತ್ತದೆ ಎಂದು ನನಗೆ ನಾನೇ ಭರವಸೆ ನೀಡುತ್ತಿದ್ದೆ. ಆದರೆ ಅದು ತಪ್ಪಾಗಿತ್ತು. ನಮ್ಮ ಸಾಲವನ್ನು ನಾವು ಹೇಗೆ ತೀರಿಸುತ್ತೇವೆ? ನಮ್ಮಲ್ಲಿ ಯಾವುದೇ ಉಳಿತಾಯವಿಲ್ಲ. ಮತ್ತು ಕೊರೊನವೈರಸ್ ದೂರವಾಗುವಂತೆ ಕಾಣುತ್ತಿಲ್ಲ. ಅವನು ಮತ್ತೆ ಹಸಿವಿನಿಂದ ಇರುವುದು ನನಗೆ ಇಷ್ಟವಿಲ್ಲ," ಎಂದು ಆಕೆ ಹೇಳಿದರು.

ಆಹಾರಧಾನ್ಯಗಳಿಂದ ತುಳುಕುತ್ತಿರುವ ಗೋದಾಮುಗಳು

ಭಾರತವು ಇಷ್ಟೊಂದು ಸಮೃದ್ಧವಾದ ಸುಗ್ಗಿಯನ್ನು ಹೊಂದಿದ್ದರೆ, ಜನರು ಈ ಪ್ರಮಾಣದಲ್ಲಿ ಹಸಿವಿನಿಂದ ಹೇಗೆ ಬಳಲುತ್ತಿದ್ದರು? ದಾಖಲೆಯ ಆಹಾರ ಧಾನ್ಯ ಉತ್ಪಾದನೆಯಿಂದ, ಸರ್ಕಾರಿ ಗೋದಾಮುಗಳು ಸಾಂಕ್ರಾಮಿಕದ ಅವಧಿ ಉದ್ದಕ್ಕೂ ತುಂಬಿ ತುಳುಕುತ್ತಿದ್ದವು. ಸರ್ಕಾರದ ಸ್ವಂತ ಮಾಸಿಕ ಮಾಹಿತಿಯ ಪ್ರಕಾರ, ಏಪ್ರಿಲ್ ಮತ್ತು ಮೇ 2020ರಲ್ಲಿ, ಕಠಿಣ ಲಾಕ್‌ಡೌನ್ ಜಾರಿಯಲ್ಲಿದ್ದಾಗ, ಆಹಾರ ಧಾನ್ಯ ದಾಸ್ತಾನು ಕ್ರಮವಾಗಿ 57 ಮಿಲಿಯನ್ ಟನ್‌ಗಳು ಮತ್ತು 64.4 ಮಿಲಿಯನ್ ಟನ್‌ಗಳು. ಇದು ಕಾರ್ಯತಂತ್ರದ ಮೀಸಲುಗಳೂ ಸೇರಿದಂತೆ ಕಾನೂನಿನ ಪ್ರಕಾರ ಇರಬೇಕಾದ ದಾಸ್ತಾನಿಗಿಂತ 2–3 ಪಟ್ಟು ಹೆಚ್ಚಾಗಿದೆ. ಆದರೂ, ಧಾನ್ಯವನ್ನು ವಿತರಿಸಲು ಸರ್ಕಾರ ನಿರಾಕರಿಸಿತು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ನೀಡಲಾಗುವ ಸಾಮಾನ್ಯ ಧಾನ್ಯದ ಕೋಟಾದ ಜೊತೆಗೆ ಕೇವಲ 5 ಕೆಜಿ ಅಕ್ಕಿ/ಗೋಧಿಯನ್ನು ಮಾತ್ರ ನೀಡಲಾಗುವುದು ಎಂದು ಅದು ಘೋಷಿಸಿತು. ಇದು ಸಾಲುತ್ತಿರಲಿಲ್ಲ, ಆದರೆ ಜನರು ಅಡುಗೆ ಮಾಡಲು ಎಣ್ಣೆ, ಇಂಧನ ಇತ್ಯಾದಿಗಳಿಲ್ಲ ಎಂಬ ಕಟು ವಾಸ್ತವವನ್ನು ಕಡೆಗಣಿಸಿತ್ತು. ಜೂನ್ 2021 ರಲ್ಲಿ, ಆಹಾರ ಧಾನ್ಯದ ದಾಸ್ತಾನು ಸುಮಾರು 91 ಮಿಲಿಯನ್ ಟನ್‌ಗಳ ದಾಖಲೆಯ ಗರಿಷ್ಠ ಮಟ್ಟದಲ್ಲಿದೆ. ಆದರೂ, ಸರ್ಕಾರವು ಅದನ್ನು ಹಿಡಿದಿಟ್ಟುಕೊಳ್ಳುವುದನ್ನು ಮುಂದುವರೆಸಿತು, ಅದನ್ನು ಹಸಿದ ಜನರಿಗೆ ವಿತರಿಸಲು ನಿರಾಕರಿಸಿತು.

ಟ್ರೇಡ್ ಯೂನಿಯನ್‌ಗಳು ಪದೇ ಪದೇ ಅಡುಗೆ ಎಣ್ಣೆಯಂತಹ ಅಗತ್ಯ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದವು. ಆದಾಗ್ಯೂ, ಕುಟುಂಬಗಳಿಗೆ ಸ್ವಲ್ಪ ನಗದು ಸಹಾಯ ಕೊಡಬೇಕು ಎಂಬ ಆಗ್ರಹವನ್ನು ಕಡೆಗಣಿಸಿದಂತೆ ಇದನ್ನೂ ಕಡೆಗಣಿಸಿತು.

ಪರಿಹಾರಕ್ಕಾಗಿ ಹೋರಾಟ – ಮತ್ತು ಬದಲಾವಣೆ

ಮಾರಣಾಂತಿಕ ಸಾಂಕ್ರಾಮಿಕದಿಂದ ದೇಶದ ಜನರು ನರಳುತ್ತಿದ್ದಾಗ ಸರ್ಕಾರಗಳು ಅವರನ್ನು ಅವರ ಹಣೆಬರಹಕ್ಕೆ ಕೈಬಿಟ್ಟಾಗ, ಎಡ ಶಕ್ತಿಗಳು ಜೀವನ ಮತ್ತು ಜೀವನೋಪಾಯಕ್ಕಾಗಿ ಅತ್ಯಂತ ಸ್ಥಿರ ಹೋರಾಟಗಾರರಾಗಿ ಹೊರಹೊಮ್ಮಿದವು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಣಗೊಳಿಸಲು, ಅದರ ಅಡಿಯಲ್ಲಿರುವ ಪದಾರ್ಥಗಳನ್ನು ವಿಸ್ತರಿಸಲು, ಹೆಚ್ಚುವರಿ ಆಹಾರಧಾನ್ಯವನ್ನು ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆಜಿಗೆ ಹೆಚ್ಚಿಸಲು (ನೀಡಲಾಗುತ್ತಿರುವ 5 ಕೆಜಿಯಿಂದ), ಆದಾಯತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ಪ್ರತಿ ತಿಂಗಳು 7500 ರೂ. ನೇರ ನಗದು ವರ್ಗಾವಣೆ ಮಾಡಲು ಮತ್ತು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನವಿರೋಧಿ ಕಾನೂನುಗಳನ್ನು ಹಿಂಪಡೆಯಲು ವ್ಯಾಪಕ ಆಂದೋಲನಗಳು ನಡೆದವು. ಸಾಂಕ್ರಾಮಿಕ ರೋಗದಿಂದಾಗಿ ನಿರ್ಬಂಧಗಳ ಹೊರತಾಗಿಯೂ, ಕಳೆದ ವರ್ಷದುದ್ದಕ್ಕೂ ಕಾರ್ಮಿಕರ ವಸತಿ ಪ್ರದೇಶಗಳು ಮತ್ತು ಕಾರ್ಖಾನೆ ಗೇಟ್‌ಗಳಲ್ಲಿ ಪ್ರತಿಭಟನೆಗಳು ನಡೆದವು. ನವೆಂಬರ್ 26 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಯಾಗಿ ಆಚರಿಸಲಾಯಿತು. ನವೆಂಬರ್ ನಿಂದ, ರೈತರು ಕೂಡ ವಿವಾದಾತ್ಮಕ ಮೂರು ಕಾನೂನುಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ಕಾರ್ಪೊರೇಟೀಕರಣವನ್ನು ಹೇರುವುದರ ವಿರುದ್ಧ ರಸ್ತೆಗಿಳಿದಿದ್ದಾರೆ. ಈ ವಿಭಿನ್ನ ಪ್ರತಿರೋಧಗಳು ಈಗ ಒಗ್ಗೂಡಿವೆ.

ಸಂಕಷ್ಟದಲ್ಲಿರುವ ಕುಟುಂಬಗಳಿಗೆ ಪರಿಹಾರ ಸಾಮಗ್ರಿಗಳನ್ನು ಒದಗಿಸುವಲ್ಲಿ ಎಡ ಸಂಘಟನೆಗಳು ಮುಂಚೂಣಿಯಲ್ಲಿವೆ. ಇದನ್ನು ಕೇರಳದ ಎಡ ನೇತೃತ್ವದ 'ರಾಜ್ಯ ಸರ್ಕಾರವು ಅನುಕರಣೀಯ ರೀತಿಯಲ್ಲಿ ಮಾಡಿದೆ. ಲಾಕ್‌ಡೌನ್‌ನ ಮೊದಲ ಎರಡು ವಾರಗಳಲ್ಲಿ, 1,255 ಸಮುದಾಯ ಅಡಿಗೆ ಮನೆಗಳನ್ನು ಸ್ವಯಂಸೇವಕರು ಸ್ಥಾಪಿಸಿದರು, ಇದು ದಿನಕ್ಕೆ ಸುಮಾರು 280,000 ಊಟವನ್ನು ಒದಗಿಸಿತು. ಆರಂಭಿಕ ಲಾಕ್‌ಡೌನ್ ಅವಧಿಯಲ್ಲಿ, ರಾಜ್ಯ ಸರ್ಕಾರದಿಂದ ಸರಬರಾಜು ಮಾಡಿದ ದಿನಸಿ ಮತ್ತು ಪಡಿತರ ಕಿಟ್‌ಗಳು ಮನೆಗಳಿಗೆ ತಲುಪಲು ಪ್ರಾರಂಭಗೊಳ್ಳುವ ಮೊದಲು, ಕೇರಳವು ಈ ಅಡಿಗೆಮನೆಗಳ ಮೂಲಕ ತನ್ನ ಜನರು ಹಸಿವಿನಿಂದ ಮುಕ್ತವಾಗಿರುವುದನ್ನು ಖಾತ್ರಿಪಡಿಸುವ ಪ್ರಾಥಮಿಕ ಸಾಧನವಾಗಿತ್ತು. ಸಮುದಾಯ ಅಡುಗೆಮನೆಗಳು ಸುಮಾರು 500,000 (ಕೇರಳದಲ್ಲಿ 'ಅತಿಥಿ ಕೆಲಸಗಾರರು' ಎಂದು ಕರೆಯಲ್ಪಡುವ) ವಲಸೆ ಕಾರ್ಮಿಕರಿಗೆ ವರದಾನವಾಯಿತು, ಇದು ಇತರ ರಾಜ್ಯಗಳಲ್ಲಿ ವಲಸಿಗರು ಪಟ್ಟ ಪಾಡಿಗಿಂತ ಭಿನ್ನವಾಗಿತ್ತು. ರಾಜ್ಯ ಸರ್ಕಾರ 1,000 ಕ್ಕೂ ಹೆಚ್ಚು ಜನತಾ ಹೋಟೆಲ್‌ಗಳನ್ನು (ಪೀಪಲ್ಸ್ ಹೋಟೆಲ್‌ಗಳು) ಸ್ಥಾಪಿಸಿದೆ, ಇದು ಸಬ್ಸಿಡಿ ದರದಲ್ಲಿ ಊಟವನ್ನು ಒದಗಿಸಿತು.

ಸರ್ಕಾರದ ಪ್ರಯತ್ನಗಳಲ್ಲದೆ, ಎಡ ಮತ್ತು ಪ್ರಗತಿಪರ ಸಂಸ್ಥೆಗಳು ನಿರ್ಗತಿಕ ಕುಟುಂಬಗಳಿಗೆ ಆಹಾರ ಮತ್ತು ದೈನಂದಿನ ಬಳಕೆಯ ಸೋಪ್‌ನಂತಹ ಪರಿಹಾರ ಸಾಮಗ್ರಿಗಳನ್ನು ವಿತರಿಸಿದವು. ಉದಾಹರಣೆಗೆ, ಯುವಜನ ಸಂಘಟನೆ ಡಿವೈಎಫ್‌ಐ ತನ್ನ "ಹೃದಯಪೂರ್ವಂ" ಯೋಜನೆಯನ್ನು ಸಕ್ರಿಯವಾಗಿ ಮುಂದುವರಿಸಿತು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮತ್ತು ಅವರ ಸಹಾಯಕರಿಗೆ ಊಟವನ್ನು ಒದಗಿಸಿತು. ಸಂಘಟನೆಯ ಕಾರ್ಯಕರ್ತರು ಅಗತ್ಯವಿರುವವರಿಗೆ ಪ್ಯಾಕ್ ಮಾಡಿದ ಊಟ ಮತ್ತು ದಿನಸಿಗಳನ್ನು ಒದಗಿಸಲು ಕ್ರಮಗಳನ್ನು ತೆಗೆದುಕೊಂಡರು. ಸಾಂಕ್ರಾಮಿಕ ಸಮಯದಲ್ಲಿ ಆಹಾರ ಅಭದ್ರತೆಯನ್ನು ನಿಭಾಯಿಸುವಲ್ಲಿ ಕೇರಳದ ಯಶಸ್ಸಿಗೆ ದಕ್ಷ ಆಡಳಿತದಷ್ಟೇ ಸಮುದಾಯದ ಪ್ರಯತ್ನಗಳು ಕಾರಣವಾಗಿದೆ. ಪಶ್ಚಿಮ ಬಂಗಾಳದಲ್ಲಿ, 'ಕೆಂಪು ಸ್ವಯಂಸೇವಕರು' ಬೃಹತ್ ಪ್ರಮಾಣದಲ್ಲಿ ಸಜ್ಜುಗೊಂಡಿದ್ದು, ವೈದ್ಯಕೀಯ ಆರೈಕೆಯನ್ನು ಏರ್ಪಡಿಸುವ ಮೂಲಕ ಮತ್ತು ದೈನಂದಿನ ಆಹಾರ ಪದಾರ್ಥಗಳನ್ನು ಒದಗಿಸುವ ಮೂಲಕ ನರಳುತ್ತಿರುವವರಿಗೆ ಸಹಾಯ ಮಾಡಿದರು.

ಅಂತೆಯೇ, ಸಿಐಟಿಯು ಭಾರತದ ಎಲ್ಲಾ ರಾಜ್ಯಗಳಲ್ಲಿ ಮೂರು ತಿಂಗಳುಗಳಿಗೂ ಹೆಚ್ಚುಕಾಲ ಜನರಿಂದ ದೇಣಿಗೆಗಳ ಸಹಾಯದಿಂದ ಆಹಾರ ಮತ್ತು ಅಗತ್ಯ ವಸ್ತುಗಳ ಕಿಟ್‌ಗಳನ್ನು ಒದಗಿಸಿತು.

ಮೋದಿ ಸರ್ಕಾರವು ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟಿನ ಮುಖ್ಯ ಲಕ್ಷಣಗಳೆಂದರೆ, ಹೆಚ್ಚಿನ ಮಟ್ಟದ ನಿರುದ್ಯೋಗ ಮತ್ತು ಆಹಾರದ ಕೊರತೆ ಮತ್ತು ಆರೋಗ್ಯ ಮತ್ತು ಶಿಕ್ಷಣದಂತಹ ಮೂಲಭೂತ ಹಕ್ಕುಗಳ ಅಭಾವ. ಅದೇ ಸಮಯದಲ್ಲಿ, ಸಮಾಜದ ಉನ್ನತ ಶ್ರೇಣಿಯ ಜನರು, ವಿಶೇಷವಾಗಿ ದೊಡ್ಡ ಕಾರ್ಪೊರೇಟ್‌ಗಳು ಅಪಾರ ಲಾಭಗಳನ್ನು ಪೇರಿಸಿಕೊಂಡಿದ್ದಾರೆ. ಈ ವಿಪರೀತ ಅಸಮಾನತೆಯು ಮುಂಬರುವ ತಿಂಗಳುಗಳಲ್ಲಿ ಆಕ್ರೋಶ ಮತ್ತು ಅಸಂತೃಪ್ತಿಯ ಭಾವವನ್ನು ಉಂಟು ಮಾಡಿದೆ, ಅದು ಕುದಿಯುತ್ತಿದೆ, ಮುಂಬರುವ ತಿಂಗಳುಗಳಲ್ಲಿ ಅದು ಭುಗಿಲೇಳಲಿದೆ.



ಕೇರಳದಲ್ಲೊಂದು ಸಮುದಾಯ ಕಿಚನ್



ತಮ್ಮ ಮೂಗಿನ ನೇರಕ್ಕೆ ಇತಿಹಾಸವನ್ನು ತಿರುಚುವ ಹೇಯ ಕೃತ್ಯದಲ್ಲಿ ಬಿಜೆಪಿ/ಆರ್‌ಎಸ್‌ಎಸ್ ಎತ್ತಿದ ಕೈ. ಹೈದರಾಬಾದ್ ನಿಜಾಮನ ಕ್ರೂರ ಆಡಳಿತವನ್ನು ಕೊನೆಗೊಳಿಸಿದ ಐತಿಹಾಸಿಕ ತೆಲಂಗಾಣ ರೈತರ ಸಶಸ್ತ್ರ ಹೋರಾಟವನ್ನು ನಮ್ಮ ನೆನಪಿನಿಂದ ಮರೆಮಾಚುವ ಕೆಲಸದಲ್ಲಿ ಅವರು ಈಗ ತೊಡಗಿದ್ದಾರೆ. ಪ್ರತಿ ವರ್ಷ ಸೆಪ್ಟೆಂಬರ್ ಬರುವುದೇ ತಡ ಅವರು ನಿದ್ದೆಯಿಂದ ಎಚ್ಚರಗೊಳ್ಳುತ್ತಾರೆ. ಈ ಬಾರಿ ಸ್ವಾತಂತ್ರ್ಯ ಚಳುವಳಿಯ 75 ನೇ ವರ್ಷಾಚರಣೆಯನ್ನು ಬಳಸಿಕೊಂಡು ವಿಷವನ್ನು ಅಮೃತವೆಂದು ಹಂಚುವುದರಲ್ಲಿ ಅವರು ನಿರತರಾಗಿದ್ದಾರೆ.

ಆರ್. ಅರುಣ ಕುಮಾರ್   ಸಂಗ್ರಹಾನುವಾದ : ಟಿ.ಸುರೇಂದ್ರ ರಾವ್

ತೆಲಂಗಾಣ ರೈತರ ವೀರ ಹೋರಾಟದ ಚರಿತ್ರೆಯನ್ನು ತಿರುಚುವ ಬಿಜೆಪಿಯ ಹುನ್ನಾರ

ಬಿಜೆಪಿಯ ಪೂರ್ವಾಶ್ರಮವಾದ ಜನಸಂಘ ಹಾಗೂ ಹಿಂದೂ ಮಹಾಸಭಾವಾಗಲಿ ಅಥವಾ ಆರ್‌ಎಸ್‌ಎಸ್ ಆಗಲೀ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮತ್ತು ಬ್ರಿಟಿಷರ ವಿರುದ್ಧ ಸೆಣಸಿದ ಯಾವುದೇ ದಾಖಲೆಗಳಾಗಲೀ ಪುರಾವೆಗಳಾಗಲೀ ಇಲ್ಲ ಎಂಬ ಸತ್ಯ ಎಲ್ಲರಿಗೂ ತಿಳಿದದ್ದೇ ಆಗಿದೆ.

ಈಗ ತೆಲಂಗಾಣದ ಬಿಜೆಪಿ ಅಧ್ಯಕ್ಷರು ಆಗಸ್ಟ್ 28ರಿಂದ ಶುರುವಾಡಿದ ಪಾದಯಾತ್ರೆಯ ಮೂಲಕ ಸುಳ್ಳುಗಳ ಸರಮಾಲೆಗಳನ್ನೇ ಹೆಣೆಯಲು ಮುಂದಾಗಿದ್ದಾರೆ. ಕೇಂದ್ರದಲ್ಲಿನ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಕಟ್ಟುಕತೆಗಳನ್ನು ಸೃಷ್ಟಿವಾಡಿ ಚರಿತ್ರೆಯನ್ನು ತಿರುಚುವ ಕೆಲಸ ಆರಂಭಿಸಿದ್ದಾರೆ. ಆರ್‌ಎಸ್‌ಎಸ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದೆ ಎಂದು ಸಾಧಿಸಲು ಶ್ರಮಪಡುತ್ತಿದ್ದಾರೆ. ಈ ಪಾದಯಾತ್ರೆಯನ್ನು 2023ರ ಮುಂದಿನ ವಿಧಾನ ಸಭಾ ಚುನಾವಣೆಯ ವರೆಗೂ ಮುಂದುವರಿಸಲಿದ್ದಾರೆ.

ಅವರ ಕಟ್ಟುಕತೆ ಹೀಗೆ ಸಾಗುತ್ತದೆ: 'ಆರ್‌ಎಸ್‌ಎಸ್ ಹಾಗೂ ಹಿಂದೂ ಮಹಾಸಭಾ ಕಾರ್ಯಕರ್ತರ ಹೋರಾಟ ಹಾಗೂ ಆಗಿನ ಗೃಹ ಸಚಿವ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ 'ದೃಢ ಸಂಕಲ್ಪ'ದಿಂದಾಗಿ ಹೈದರಾಬಾದ್ ನಿಜಾಮನ ಆಳ್ವಿಕೆ ಕೊನೆಗೊಂಡಿತು. ಪಟೇಲರ ವ್ಯಕ್ತಿತ್ವದಿಂದಾಗಿ ನಿಜಾಮ ಷರತ್ತುರಹಿತವಾಗಿ ಶರಣಾದ ಮತ್ತು ಹೈದರಾಬಾದ್ ಭಾರತದ ಭಾಗವಾಯಿತು.' ಆದರೆ ಅವರು ಒಂದು ಪ್ರಮುಖ ಸಂಗತಿಯನ್ನು ಮರೆಮಾಚುತ್ತಿದ್ದಾರೆ. ಅದೇನೆಂದರೆ ಭಾರತ ಸರ್ಕಾರದ ಪ್ರಮುಖರಾಗಿದ್ದ ಅದೇ ಪಟೇಲರು ಮತ್ತು ನೆಹರೂರವರು ನಿಜಾಮನಿಗೆ 'ರಾಜ ಪ್ರಮುಖ' ಎಂಬ ಬಿರುದನ್ನು ದಯಪಾಲಿಸಿ ಶಿಕ್ಷೆಯಿಲ್ಲದೇ ಬಚಾಯಿಸಿಕೊಳ್ಳಲು ನೆರವಾಗಿದ್ದರು ಎನ್ನುವುದನ್ನು ಬೇಕೆಂತಲೇ ಅವರು ಮರೆಯುತ್ತಾರೆ. ಅದೂ ಅಲ್ಲದೇ **ನಿಜಾಮನ ಮಿಂಚಿನ ದಾಳಿಯ ಗುಂಪು, ರಜಾಕರರ ಕುಖ್ಯಾತ ಸೇನಾ ಮುಖ್ಯಸ್ಥನಾಗಿದ್ದ ಕಾಸಿಮ್ ರಿಜ್ವಿಯನ್ನು ಸ್ವಲ್ಪ ದಿನಗಳ ಕಾಲ ಮಾತ್ರವೇ ಬಂಧಿಸಿ ಪಾಕಿಸ್ತಾನಕ್ಕೆ ತಪ್ಪಿಸಿಕೊಂಡು ಹೋಗಲು ಬಿಟ್ಟಿದ್ದರು. ತೆಲಂಗಾಣ ಜನರ ಮೇಲೆ ಅತ್ಯಂತ ಕ್ರೂರ ರೀತಿಯ ದಾಳಿ ಮಾಡಿದ್ದ ಅವನನ್ನು ವಿಚಾರಣೆಗೂ ಒಳಪಡಿಸಲಿಲ್ಲ**. ಆದರೆ ಮತ್ತೊಂದೆಡೆ, ಕಮ್ಯುನಿಸ್ಟರನ್ನು ನಕಲಿ ವಿಚಾರಣೆಗೊಳಪಡಿಸಿ ಜೈಲಿಗಟ್ಟಿದ್ದರು. ಹಲವಾರು ಕಮ್ಯುನಿಸ್ಟ್ ಕಾರ್ಯಕರ್ತರನ್ನು ಜೈಲಿನ ಹೊರಗೆ ಕರೆತಂದು ಗುಡ್ಡಗಾಡುಗಳಲ್ಲಿ ಗುಂಡು ಹೊಡೆದು ಸಾಯಿಸಿದ್ದರು. ದೇಶಾದ್ಯಂತ ವ್ಯಾಪಕವಾಗಿ ಬೆಳೆಯುತ್ತಿದ್ದ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ, ಮುಖ್ಯವಾಗಿ ತೆಲಂಗಾಣ ಪ್ರದೇಶದ ಬಗ್ಗೆ ಸರ್ಕಾರಕ್ಕೆ ಭಯವಾಗಿತ್ತು.



ರಜಾಕರರ ಕುಖ್ಯಾತ ಸೇನಾ ಮುಖ್ಯಸ್ಥನಾಗಿದ್ದ ಕಾಸಿಮ್ ರಿಜ್ವಿ

ನಿಜಾಮನ ಮತ್ತು ಅವನ ಪಾಳೇಗಾರಿ ಧಣಿಗಳ ಪರಮ ನೀಚ ಆಡಳಿತದಿಂದ ಹೈದರಾಬಾದಿನ ಜನರು ಬಹಳಷ್ಟು ನೊಂದಿದ್ದರು. ಆಂಧ್ರ ಮಹಾಸಭಾದ ಕೆಲಸಗಳ ಮೂಲಕ ಪಾಳೇಗಾರಿ ಹಿಂಸೆ ಪೀಡನೆಗಳ ವಿರುದ್ಧ ಕಮ್ಯುನಿಸ್ಟರು ಜನರನ್ನು ಒಂದುಗೂಡಿಸಿದರು. ಕೃಷಿ ಕೂಲಿಗಾರರು, ಬಡ ರೈತರು ಹಾಗೂ ಹಲವಾರು ಕುಶಲ ಕರ್ಮಿಗಳ ಸಮುದಾಯದವರು ಕೆಂಪು ಬಾವುಟದ ಅಡಿ ಒಟ್ಟುಗೂಡಿ ಶೋಷಣೆಯ ವೆಟ್ಟಿ ಪದ್ಧತಿಯ ವಿರುದ್ಧ ಮತ್ತು 'ಉಳುವವನೇ ಹೊಲದೊಡೆಯ' ಆಗಬೇಕು ಎಂದು ಒತ್ತಾಯಿಸಿದರು. ದುಬಾರಿ ಗೇಣಿ ವಸೂಲಿ, ಗೇಣಿದಾರರ ಒಕ್ಕಲೆಬ್ಬಿಸುವುದರ ಮೇಲೆ ನಿರ್ಬಂಧ ಹೇರಬೇಕೆಂದು ಮತ್ತು ರೈತರು ಸಾಗುವಳಿ ಮಾಡುತ್ತಿರುವ ಹೊಲಗದ್ದೆಗಳನ್ನು ಅವರ ಹೆಸರಿಗೆ ಹಕ್ಕುಪತ್ರಗಳನ್ನು ನೀಡುವುದರ ಮೂಲಕ ಖಾತ್ರಿಗೊಳಿಸಬೇಕೆಂದು, ಭೂಕಂದಾಯವನ್ನು ಮತ್ತು ಗೇಣಿಯನ್ನು ತೀವ್ರವಾಗಿ ಇಳಿಸಬೇಕೆಂದು, ಜಾಗೀರ್ದಾರಿಯನ್ನು ರದ್ದು ಮಾಡಬೇಕೆಂದು ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಕಮ್ಯುನಿಸ್ಟರು ಒತ್ತಾಯಿಸಿದರು ಹಾಗೂ ಈ ಬೇಡಿಕೆಗಳ ಆಧಾರದಲ್ಲಿ ಅವರನ್ನು ಸಂಘಟಿಸಿದರು. ಜನರು ತಮ್ಮ ಜಾತಿ ಮತಧರ್ಮಗಳನ್ನು ಮರೆತು ಭೂಮಾಲಕರ ವಿರುದ್ಧ ಹೋರಾಡಿದರು. 'ಹಿಂದೂ'ಗಳ ವಿರುದ್ಧ ಮುಸ್ಲಿಂ ಸಮುದಾಯದವರು ತಮಗೆ ಬೆಂಬಲ ನೀಡಬೇಕೆಂದು ನಿಜಾಮ ಹಾಗೂ ಅವನ ಪಾಳೇಗಾರಿ ಅಧಿಕಾರಿಗಳು ಬಹಳ ಪ್ರಯತ್ನ ಮಾಡಿದರು. ಆದರೆ ಕಮ್ಯುನಿಸ್ಟರ ಪ್ರಯತ್ನಗಳಿಂದಾಗಿ ದೊಡ್ಡ ಸಂಖ್ಯೆಯ ಮುಸ್ಲಿಂ ರೈತರು, ಗ್ರಾಮೀಣ ಕುಶಲಕರ್ಮಿಗಳು ಮತ್ತು ಬಡ ರೈತರು ಹೋರಾಡುತ್ತಿದ್ದ ತೆಲಂಗಾಣ ರೈತರ ಪರವಾಗಿ ನಿಶ್ಚಲವಾಗಿ ನಿಂತರು. ತೆಲಂಗಾಣ ಸಶಸ್ತ್ರ ಹೋರಾಟ ಮತ್ತು ಕಮ್ಯುನಿಸ್ಟ್ ಪಕ್ಷದ ಕಾರಣ ಹಳ್ಳಿಗಳಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಯನ್ನು ಸಾಧಿಸಲು ಸಾಧ್ಯವಾಯಿತು.

ಆದರೆ, ಆರ್ಯ ಸಮಾಜವಾಗಲೀ, ಹಿಂದು ಮಹಾಸಭಾವಾಗಲೀ ಅಥವಾ ತಾವು ಅದರ ಪರಂಪರೆಯವರೆಂದು ಕೊಚ್ಚಿಕೊಳ್ಳುವ ಬಿಜೆಪಿ/ಆರ್‌ಎಸ್‌ಎಸ್ ಆಗಲೀ ನಿಜಾಮನ ಆಳ್ವಿಕೆಯ ವಿರುದ್ಧದ ಹೋರಾಟದಲ್ಲಿ ಯಾವುದೇ ಪಾತ್ರ ವಹಿಸಿರಲಿಲ್ಲ. 'ಕೇವಲ ಒಂದೆರಡು ದಶಕಗಳ ಹಿಂದಷ್ಟೇ ಹಲವಾರು ಸಮುದಾಯದವರ ನಡುವಿನ ಸಾಮರಸ್ಯಕ್ಕಾಗಿ ಮಾದರಿಯಾಗಿದ್ದ ಹೈದರಾಬಾದ್ ರಾಜ್ಯದಲ್ಲಿ ಧಾರ್ಮಿಕ ವೈರತ್ವವನ್ನು ಸೃಷ್ಟಿಸುವ ಮೂಲಕ ಜನರ ನಡುವಿನ ಐಕ್ಯತೆಯನ್ನು ಒಡೆಯುವ ಕೆಲಸದಲ್ಲಿ ಅವರು ನಿರತರಾಗಿದ್ದರು. 'ಮುಸ್ಲಿಮರ ಹತ್ಯಾಕಾಂಡ'ದ ತನಿಖೆ ನಡೆಸಲು ಭಾರತ ಸರ್ಕಾರ ರಚಿಸಿದ್ದ ಸುಂದರ್‌ಲಾಲ್ ಸಮಿತಿಯು ಈ ಸಂಗತಿಯನ್ನು ದಾಖಲಿಸಿದೆ.

ಆರಂಭದಲ್ಲಿ ಆರ್ಯ ಸಮಾಜದವರು ನಂತರದಲ್ಲಿ ಹಿಂದು ಮಹಾಸಭಾದವರ ಪ್ರವೇಶವು ಕೋಮು ಸಾಮರಸ್ಯವನ್ನು ನಾಶಮಾಡಿತು. ಅದೇ ವರದಿಯ ಉಲ್ಲೇಖ ಮಾಡುವುದಾದರೆ: "ಆರ್ಯ ಸಮಾಜದವರು ಹೊರಗಿನಿಂದ ರಾಜ್ಯಕ್ಕೆ ಬಂದರು . . . ಇತರ ಧರ್ಮದ, ಮುಖ್ಯವಾಗಿ ಮುಸ್ಲಿಮರ ನಂಬಿಕೆಗಳ ಕಟುವಾದ ಟೀಕೆಗಳು ವರಿಷ್ಠರ ವಲಯದಲ್ಲಿ ಕೋಪವನ್ನು ಕೆರಳಿಸಿತು. ಭಾರತದ ಇತರ ಕಡೆಯ ಮುಸ್ಲಿಂ ಪಂಡಿತರುಗಳು ಆರ್ಯ ಸಮಾಜದವರ ಹಾದಿಯನ್ನೇ ತುಳಿದರು. ಇವರ ಭಾಷಣಗಳು ಮತ್ತು ಇವರ ಭಾಷಣಕ್ಕೆ ಎದುರಾಗಿ ಅವರ ಭಾಷಣಗಳು ಹೀಗೆ ಭಾರತದ ಇತರ ಕಡೆಗಳಲ್ಲಿ ಹಬ್ಬಿದ ಕೋಮು ವೈಷಮ್ಯ ಮತ್ತು ಅಪನಂಬಿಕೆಗಳು ಹೈದರಾಬಾದ್ ನಗರವನ್ನು ತಟ್ಟದೇ ಬಿಡಲಿಲ್ಲ . . . ಈ ರಾಜ್ಯದ ಎರಡು ಸಮುದಾಯದ ನಡುವೆ ನೆಲೆಸಿದ್ದ ಮಧುರ ಬಾಂಧವ್ಯ ಕ್ರಮೇಣವಾಗಿ ಮಾಯವಾಯಿತು ಮತ್ತು ಹೈದರಾಬಾದ್ ಕೋಮು ಉದ್ವಿಗ್ನತೆಯ ತಾಣವಾಗಿ ಮಾರ್ಪಾಟಾಯಿತು."

ಹೈದರಾಬಾದ್ ರಾಜ್ಯದಲ್ಲಿ, ಕಮ್ಯುನಿಸ್ಟ್ ಪಕ್ಷ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ದುರ್ಬಲವಾಗಿದ್ದ ಪ್ರದೇಶಗಳಲ್ಲಿ ಈ ಕೋಮುವಾದಿ ಗುಂಪುಗಳು ಮುಸ್ಲಿಮರ ವಿರುದ್ಧ ವೈರತ್ವವನ್ನು ಹರಡಿ ವ್ಯಾಪಕ ದಾಳಿಗಳನ್ನು ಮಾಡಲು ಸಾಧ್ಯವಾಯಿತು. ಸುಂದರ್‌ಲಾಲ್ ಸಮಿತಿ ಸೂಚಿಸಿದಂತೆ ಹೈದರಾಬಾದ್ ರಾಜ್ಯದ ಒಟ್ಟು 16 ಜಿಲ್ಲೆಗಳಲ್ಲಿ ನಾಲ್ಕು ಜಿಲ್ಲೆಗಳಾದ ಉಸ್ಮಾನಾಬಾದ್, ಬೀದರ್, ಗುಲ್ಬರ್ಗಾ ಮತ್ತು ನಂದೇಡ್‌ನಲ್ಲಿ ಮುಸ್ಲಿಮರು ಕೋಮು ದಾಳಿಗಳ ಬಿರುಸನ್ನು ಎದುರಿಸಬೇಕಾಯಿತು.

ರಾಜ್ಯಾದ್ಯಂತ, ಪ್ರಧಾನವಾಗಿ ಈ ಮೇಲಿನ ಜಿಲ್ಲೆಗಳಲ್ಲಿ ಹಿಂದು ಕೋಮುವಾದಿ ಗುಂಪುಗಳಿಂದ ದೊಡ್ಡ ಸಂಖ್ಯೆಯ ಮುಸ್ಲಿಮರು ಸಾವಿಗೀಡಾದರು, ಮಹಿಳೆಯರು ಅತ್ಯಾಚಾರಕ್ಕೊಳಗಾದರು ಮತ್ತು ಆಸ್ತಿಗಳು ಲೂಟಿಯಾದವು. "ಒಂದು ಅತಿಶಯವಲ್ಲದ ಅಂದಾಜಿನ ಪ್ರಕಾರ ಆ ರಾಜ್ಯದಲ್ಲಿ ಮಡಿದವರ ಸಂಖ್ಯೆ ಏನಿಲ್ಲೆಂದರೂ 30,000 ಮತ್ತು 40,000 ನಡುವೆ ಆಗಿದೆ. 25,000 ಕ್ಕಿಂತ ಕಡಿಮೆಯಂತೂ ಆಗಿರಲಾರದು." ಮುಸ್ಲಿಮರ ಆರ್ಥಿಕ ಬದುಕು ವ್ಯವಸ್ಥಿತವಾಗಿ ನಾಶವಾಯಿತು ಎಂದು ದಾಖಲಿಸಿದ ಆ ಸಮಿತಿಯು ಹೀಗೆ ಟಿಪ್ಪಣಿ ಮಾಡಿದೆ: "ರಾಜ್ಯದಲ್ಲಿ ಲೂಟಿಯಾದ ಅಥವಾ ನಾಶವಾದ ಒಟ್ಟು ಆಸ್ತಿಗಳು ಹತ್ತಾರು ಕೋಟಿಗಳಾಗಿರಬೇಕು." ಈ ಕೋಮುವಾದಿ ಮತಾಂಧರು ಮಹಿಳೆಯರ ಮೇಲೆ ನಡೆಸಿದ ಕ್ರೌರ್ಯಗಳಿಗೆ ಲೆಕ್ಕವೇ ಇಲ್ಲ. "ತಮ್ಮ ಮರ್ಯಾದೆ ಕಾಪಾಡಿಕೊಳ್ಳಲು ಅನೇಕ ಮಹಿಳೆಯರು ಬಾವಿಗೆ ಹಾರಿದರು ಎಂಬ ನಿರಾಕರಿಸಲಾಗದ ಸಾಕ್ಷ್ಯ ನಮಗೆ ದೊರೆತಿದೆ. . .ಹಲವಾರು ಮಹಿಳೆಯರನ್ನು ಬಲಾತ್ಕಾರವಾಗಿ ಮನೆಯಿಂದ ಹೊತ್ತೊಯ್ದು ಅನೇಕ ದಿನಗಳ ಕಾಲ ತಮ್ಮ ಮನೆಯಲ್ಲಿ ಇಟ್ಟುಕೊಂಡು ನಂತರ ಅವರವರ ಮನೆಗಳಿಗೆ ಕಳಿಸಲಾಗಿದೆ."

ಆರ್ಯ ಸಮಾಜದವರು ಮತ್ತು ಅವರ ಇತರ ಕೋಮುವಾದಿ ಸೋದರರು ಬಲವಂತದ ಮತಾಂತರದಲ್ಲೂ ತೊಡಗಿದ್ದರೆಂಬುದನ್ನು ಸಮಿತಿಯು ಟಿಪ್ಪಣಿ ಮಾಡಿದೆ: "ನೂರಾರು ಮುಸ್ಲಿಂ ಮಹಿಳೆಯರನ್ನು ಬಲವಂತವಾಗಿ ಅವರ ಹಣೆಯ ಮೇಲೆ ಹಚ್ಚೆ ಹಾಕಿಸುವ ಮೂಲಕ ಸಾಂಪ್ರದಾಯಿಕ ಹಿಂದು ಶೈಲಿಯಲ್ಲಿ ಮತಾಂತರ ಮಾಡಿರುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಕೆಲವರು ತಮ್ಮ ಕೈಗಳ ಮೇಲೆ ತಮ್ಮ ಹೊಸ ಹಿಂದು ಹೆಸರುಗಳನ್ನು ಹಚ್ಚೆ ಹಾಕಿಸಿಕೊಂಡಿದ್ದರು. ಮಕ್ಕಳು ತಮ್ಮ ಕಿವಿಯನ್ನು ಹಿಂದು ಶೈಲಿಯಲ್ಲಿ ಹೊಸದಾಗಿ ಚುಚ್ಚಿಸಿಕೊಂಡಿದ್ದನ್ನು ನಾವು ನೋಡಿದ್ದೇವೆ."

ಈ ಕೋಮುವಾದಿ ಶಕ್ತಿಗಳು ತಮ್ಮ ಕೋಮುವಾದಿ ಕಾರ್ಯಕ್ರಮವನ್ನು ನಡೆಸುವ ಸಲುವಾಗಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿದ್ದರು. ಪ್ರಮುಖ ಆರ್ಯ ಸಮಾಜದವರೊಬ್ಬರು ಸ್ಥಳೀಯ ಆರ್ಯ ಸಮಾಜ ಮಂದಿರವೊಂದನ್ನು ಉಪ ಜೈಲನ್ನಾಗಿ ಪರಿವರ್ತಿಸಿದ್ದರು ಎನ್ನುವುದನ್ನು ವರದಿ ದಾಖಲಿಸಿದೆ. ತನ್ನ ಹಾಗೂ ಹತ್ತಿರದ ಹಳ್ಳಿಗಳಿಂದ ಮುಸ್ಲಿಮರನ್ನು ಬಂಧಿಸಿ ನಾಲ್ಕೈದು ದಿನಗಳ ಕಾಲ ಉಪ ಜೈಲಿನಲ್ಲಿ ಇಡುತ್ತಿದ್ದರು ಮತ್ತು ಅವರಿಂದ ಹಣ ವಸೂಲಿ ಮಾಡಿದ ನಂತರ ಬಿಡುಗಡೆ ಮಾಡುತ್ತಿದ್ದರು. "ಆ ಉದ್ದೇಶಕ್ಕಾಗಿ ಆರ್ಯ ಸಮಾಜ ಮಂದಿರ ಸಾಲದಿದ್ದಾಗ, ಆಸುಪಾಸಿನ ಮತ್ತೊಂದು ಕಟ್ಟಡವನ್ನು ಕೂಡ ಪಡೆದುಕೊಂಡಿದ್ದರು . . . ನಮಗೆ ಸಿಕ್ಕ ಮಾಹಿತಿಯ ಪ್ರಕಾರ ಕೆಲವು ಸ್ಥಳಗಳಲ್ಲಿ ಸಂತ್ರಸ್ಥರನ್ನು ಹತ್ತಿರದ ದೇವಸ್ಥಾನಗಳಿಗೆ ಕರೆದೊಯ್ದು ಆ ಪವಿತ್ರ ಆವರಣದಲ್ಲಿ ಅವರನ್ನು ಮುಗಿಸಲಾಗುತ್ತಿತ್ತು."

ಕಾಂಗ್ರೆಸ್ ಪಕ್ಷ ಮತ್ತು ಅದರ ನೇತೃತ್ವದ ಸರ್ಕಾರವು ಹರಡುತ್ತಿರುವ ಕೋಮು ವೈರಾಣುವಿನ ವಿರುದ್ಧ ದೇಶವನ್ನು ರಕ್ಷಿಸುವ ಬದಲು ವ್ಯಾಪಕವಾಗುತ್ತಿರುವ ಕಮ್ಯುನಿಸ್ಟ್ ಪ್ರಭಾವವನ್ನು ತಡೆಹಿಡಿಯುವುದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡಿತ್ತು. ತೆಲಂಗಾಣ ಹೋರಾಟವು ಹೆಚ್ಚೆಚ್ಚು ಪ್ರದೇಶಗಳಿಗೆ ಹರಡುತ್ತಿದೆ ಎಂಬುದನ್ನು ಭಾರತ ಸರ್ಕಾರ ಅರಿತಾಗ, ಅದು ಮಧ್ಯಪ್ರವೇಶ ಮಾಡಲು ತೀರ್ಮಾನಿಸಿತು. ರಜಾಕಾರರ ಹಿಂಸೆಯನ್ನು ತಡೆಯುವ ಹಾಗೂ ನಿಜಾಮನನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳುವ ನೆಪದಲ್ಲಿ ಸೇನೆಯನ್ನು ಅಲ್ಲಿಗೆ ಕಳಿಸಿತು. ಆದರೆ, ಅದರ ಪ್ರಕಟಿತ ಉದ್ದೇಶವು ಕಮ್ಯುನಿಸ್ಟರನ್ನು ಕೂಡ



ಪುಟ 14 ನೋಡಿ

ಕೊವಿಡ್‌ನಿಂದಾಗಿ ಶಾಲಾಮಕ್ಕಳಿಗೆ ಕಲಿಕೆ ನಷ್ಟ, ಕಲಿಕೆಯ ಕೌಶಲದಲ್ಲಿ ಇಳಿಕೆ

ಕೊವಿಡ್-19 ಶಾಲಾ ಶಿಕ್ಷಣ ರಂಗದ ಮೇಲೆ ಭಾರೀ ದುಷ್ಪರಿಣಾಮ ಉಂಟು ಮಾಡಿದೆ, ಈ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕೇವಲ 8% ಮತ್ತು ನಗರ ಪ್ರದೇಶಗಳಲ್ಲಿ 25% ವಿದ್ಯಾರ್ಥಿಗಳಿಗೆ ಮಾತ್ರ ನಿಯಮಿತ ಶಿಕ್ಷಣ ಲಭ್ಯವಾಗಿದ್ದು, ಒಟ್ಟಾರೆಯಾಗಿ, ಸುಮಾರು ಒಂದು ವರ್ಷದ 'ಕಲಿಕೆ ನಷ್ಟ' ಮತ್ತು ಇದರಿಂದಾಗಿ ವಿದ್ಯಾರ್ಥಿಗಳ ಅಕ್ಷರ ಮತ್ತು ಅಂಕ ಕಲಿಕೆ ಎರಡೂ ಮಟ್ಟಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಕಂಡು ಬಂದಿದೆ.

ಸುಮಾರು ಒಂದೂವರೆ ವರ್ಷದಿಂದ ಮುಚ್ಚಿದ್ದ ಶಾಲೆಗಳನ್ನು ಹಂತ-ಹಂತವಾಗಿ ತೆರೆಯಲಾಗುತ್ತಿದೆ. ಈ ವೇಳೆಗೆ ಇದರಿಂದಾಗಿರುವ ದುಷ್ಪರಿಣಾಮದ ಕುರಿತ ಎರಡು ಸರ್ವೆ ವರದಿಗಳು ಈಗ ಪ್ರಕಟವಾಗಿವೆ: ಒಂದು, ಪ್ರಥಮ್ ಎಂಬ ಸಂಸ್ಥೆ ನಡೆಸುವ ಶಿಕ್ಷಣದ ವಾರ್ಷಿಕ ಸ್ಥಾನಮಾನ ವರದಿ (ASER- ಏಸರ್) ಇದು ಕರ್ನಾಟಕದಲ್ಲಿ ನಡೆಸಿರುವ ಸರ್ವೆ. ಇನ್ನೊಂದು ಕರ್ನಾಟಕವೂ ಸೇರಿದಂತೆ 15 ರಾಜ್ಯಗಳಲ್ಲಿ ಸಂಶೋಧಕರು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಜೀನ್ ಡ್ರೀಝ್ ಸಹಯೋಗದೊಂದಿಗೆ ನಡೆಸಿರುವ ಅಧ್ಯಯನ-ಶಾಲಾಮಕ್ಕಳ ಆನ್‌ಲೈನ್ ಮತ್ತು ಆಫ್‌ಲೈನ್ ಕಲಿಕೆ (ಇಂಗ್ಲಿಷ್ ನಲ್ಲಿ ಸಂಕ್ಷಿಪ್ತವಾಗಿ SCHOOL- 'ಸ್ಕೂಲ್').

ಕರ್ನಾಟಕದಲ್ಲಿ ಈ ವರ್ಷ ಪ್ರಾಥಮಿಕ ತರಗತಿಗಳಲ್ಲಿ ವಿದ್ಯಾರ್ಥಿಗಳ ಅಕ್ಷರ ಮತ್ತು ಅಂಕ ಕಲಿಕೆ ಮಟ್ಟಗಳಲ್ಲಿ ತೀವ್ರ ಇಳಿಕೆಯಾಗಿದೆ ಎಂದು ಏಸರ್ ವರದಿ ಹೇಳುತ್ತದೆ. ಮೊದಲನೇ ತರಗತಿಯ 42.6% ವಿದ್ಯಾರ್ಥಿಗಳಲ್ಲಿ ಅಂಕೆಗಳನ್ನು ಗುರುತಿಸುವ ಸಾಮರ್ಥ್ಯದ ಕೊರತೆ ಕಂಡು ಬಂದರೆ 56.8% ವಿದ್ಯಾರ್ಥಿಗಳಲ್ಲಿ ಅಕ್ಷರಗಳನ್ನು ಗುರುತಿಸುವ ಸಾಮರ್ಥ್ಯದ ಕೊರತೆ ಕಂಡು ಬಂದಿದೆ. ಇದು 2018ರಲ್ಲಿ ಇದು 40% ಇತ್ತು. ಇನ್ನೂ ಆತಂಕದ ಸಂಗತಿಯೆಂದರೆ ರಾಜ್ಯಾದ್ಯಂತ ವಿದ್ಯಾರ್ಥಿಗಳ ನಡುವೆ ಸುಮಾರು ಒಂದು ವರ್ಷದ 'ಕಲಿಕೆ ನಷ್ಟ' ಕಂಡು ಬರುತ್ತಿದೆ.

ಬುನಾದಿ ಮಟ್ಟದ ಕೌಶಲ್ಯಗಳಲ್ಲಿ ಇಂತಹ ಇಳಿಕೆ ಪ್ರಾಥಮಿಕ ಶಿಕ್ಷಣದ ಎಲ್ಲ ಹಂತಗಳಲ್ಲೂ ಕಂಡು ಬಂದಿದೆ.

ಕೊವಿಡ್-19 ಬಾಧಿಸಿದ ನಂತರ ಈ ವರ್ಷದ ಆರಂಭದಲ್ಲಿ ಪ್ರಥಮ್ ಎಂಬ ಸಂಸ್ಥೆ ನಡೆಸಿದ ಈ ಸರ್ವೆಯಲ್ಲಿ ರಾಜ್ಯದ 24 ಜಿಲ್ಲೆಗಳಲ್ಲಿ 13,365 ಕುಟುಂಬಗಳ 5 ರಿಂದ 16 ವಯೋಗುಂಪಿನ 18,385 ಸರಕಾರಿ ಮತ್ತು ಖಾಸಗಿ ಶಾಲೆಗಳ ವಿದ್ಯಾರ್ಥಿಗಳನ್ನು ಸಂಪರ್ಕಿಸಲಾಗಿತ್ತು.

2018ರಲ್ಲಿ ಎರಡನೇ ತರಗತಿಯ ಪಠ್ಯವನ್ನು ಓದಬಲ್ಲ 8ನೇ ತರಗತಿಯ ವಿದ್ಯಾರ್ಥಿಗಳ ಪ್ರಮಾಣ 70% ಇದ್ದರೆ, ಈಗ 2021ರಲ್ಲಿ ಅದು 66%ಕ್ಕೆ ಇಳಿದಿದೆ. ಕೇವಲ 9.8% 3ನೇ ತರಗತಿ ವಿದ್ಯಾರ್ಥಿಗಳು 2ನೇ ತರಗತಿ ಪಠ್ಯವನ್ನು ಓದಬಲ್ಲವರಾಗಿದ್ದಾರೆ. 2018ರಲ್ಲಿ ಇದು 19.2% ಇತ್ತು. 5ನೇ ತರಗತಿ ಮತ್ತು 8ನೇ ತರಗತಿಯ ಮಟ್ಟಗಳಲ್ಲೂ ಕಲಿಕೆಯ ಕೌಶಲದ ಮಟ್ಟಗಳಲ್ಲಿ ಇಂತಹ ಇಳಿಕೆ ಕಂಡುಬಂದಿದೆ ಎಂದು ಈ ವರದಿ ಹೇಳುತ್ತದೆ.

ಅಂಕಾ ಜ್ಞಾನದಲ್ಲಂತೂ ಕಲಿಕೆಯ ಮಟ್ಟದಲ್ಲಿ ಇಳಿಕೆ ಇನ್ನೂ ಹೆಚ್ಚು. ಒಂದನೇ ತರಗತಿಯಲ್ಲಿ ಅಂಕೆಗಳನ್ನು ಗುರುತಿಸಲಾರದ ವಿದ್ಯಾರ್ಥಿಗಳ ಪ್ರಮಾಣ 2018ರಲ್ಲಿ 29.7%ವಿತ್ತಷ್ಟೇ. ಈಗ ಅದು 42.6%ಕ್ಕೆ ಏರಿದೆ.

ಮೂರನೇ ತರಗತಿಯ 17.3% ವಿದ್ಯಾರ್ಥಿಗಳು ಮಾತ್ರವೇ ಕಳೆಯುವ ಲೆಕ್ಕ ಮಾಡಬಲ್ಲರು. 2018ರಲ್ಲಿ ಇದು 26.3% ಇತ್ತು. 8ನೇ ತರಗತಿ ವಿದ್ಯಾರ್ಥಿಗಳಲ್ಲೂ ಭಾಗಾಕಾರ ಮಾಡಬಲ್ಲವರ ಪ್ರಮಾಣ 38.9% ಮಾತ್ರ.

'ಕಲಿಕೆ ನಷ್ಟ'ದೊಂದಿಗೆ ಕಲಿಕಾ ಸಾಮರ್ಥ್ಯದಲ್ಲಿ ಹಿನ್ನಡೆಯೂ ಉಂಟಾಗುತ್ತದೆ ಎಂಬುದು ಬಹಳಷ್ಟು ಶಾಲಾ ವರದಿಗಳಲ್ಲಿ ಕಂಡು ಬಂದಿದೆ ಎಂದು ಶಿಕ್ಷಣ ತಜ್ಞರು ಹೇಳುತ್ತಾರೆ. ಆದ್ದರಿಂದ ಕೊವಿಡ್ ನಂತರ ಶಾಲೆಗಳು ಪುನರಾರಂಭದ ನಂತರ ಶಿಕ್ಷಕರ ಮೇಲೆ ಎಂದಿನ ಪಠ್ಯಕ್ರಮವನ್ನು ಪೂರ್ಣಗೊಳಿಸಲೇ ಬೇಕೆಂಬ ಒತ್ತಡ ಹಾಕಬಾರದು, ಬದಲಿಗೆ ಮುಂದಿನ ಎರಡು ವರ್ಷಗಳಿಗೆ ಪಠ್ಯಕ್ರಮವನ್ನು ಮರುಯೋಜಿಸುವ ತುರ್ತು ಅಗತ್ಯವಿದೆ ಎಂದು ಅವರು ಹೇಳುತ್ತಾರೆ.

'ಆನ್ ಲೈನ್' ಪ್ರಶ್ನೆಗಳು

'ಸ್ಕೂಲ್' ಅಧ್ಯಯನದ ಪ್ರಕಾರ ನಗರಪ್ರದೇಶಗಳಲ್ಲಿ 25% ಮಕ್ಕಳಿಗೆ ನಿಯಮಿತವಾಗಿ ಆನ್‌ಲೈನ್ ತರಗತಿಗಳು ಲಭ್ಯವಾಗಿದ್ದರೆ, 16% ಕ್ಕೆ ಕೆಲವೊಮ್ಮೆ ಇದು ಲಭ್ಯವಾಗುತ್ತಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಕೇವಲ 8% ಮಕ್ಕಳಿಗೆ ನಿಯಮಿತವಾಗಿ, ಇನ್ನು 8% ಮಕ್ಕಳಿಗೆ ಕೆಲವೊಮ್ಮೆ ಆನ್ ಲೈನ್ ತರಗತಿಗಳು ಲಭ್ಯವಾಗಿದೆ. ನಿಯಮಿತವಾಗಿ ಖಾಸಗಿ ಟ್ಯೂಷನ್ ಪಡೆದವರ ಪ್ರಮಾಣ ನಗರಪ್ರದೇಶಗಳಲ್ಲಿ 24%ವಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ 14%. ಒಟ್ಟಾರೆಯಾಗಿ ನಗರಪ್ರದೇಶಗಳಲ್ಲಿ 47% ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 28% ಮಕ್ಕಳು ಮಾತ್ರ ನಿಯಮಿತ ತರಗತಿಗಳ ಪ್ರಯೋಜನ ಪಡೆಯಲು ಆನ್‌ಲೈನ್ ಮೂಲಕ ಸಾಧ್ಯವಾಗಿದೆ. ನಗರಪ್ರದೇಶಗಳಲ್ಲಿ 19% ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 37% ಈ ಕೊವಿಡ್‌ಕಾಲದಲ್ಲಿ ಯಾವುದೇ ಶಿಕ್ಷಣವನ್ನು ಪಡೆಯಲಿಲ್ಲ. ಆನ್‌ಲೈನ್ ತರಗತಿಗಳಿಗೆ ಹಾಜರಾದವರಲ್ಲಿಯೂ ಬಹುಪಾಲು ಮಕ್ಕಳಿಗೆ ಸಂಪರ್ಕದ ಸಮಸ್ಯೆಗಳು ಎದುರಾದವು, ಅದರಿಂದಾಗಿ ತರಗತಿಗಳಿಂದ ಪ್ರಯೋಜನ ಪಡೆಯುವುದು ಕಷ್ಟಕರವಾಗಿತ್ತು.

ದಲಿತ ಮತ್ತು ಆದಿವಾಸಿ ಕುಟುಂಬಗಳ ಮಕ್ಕಳು ಈ ಕೊವಿಡ್ ಕಾಲದಲ್ಲಿ ಅತಿ ಹೆಚ್ಚು ಬಾಧಿತರಾಗಿದ್ದಾರೆ. ಕೇವಲ 5% ಮಕ್ಕಳಿಗೆ ಆನ್‌ಲೈನ್ ಸೌಕರ್ಯ ಲಭ್ಯವಾಗಿದೆ ಎಂದು ಈ ವರದಿ ಹೇಳುತ್ತದೆ.

ಶಾಲೆಗಳು ಮುಚ್ಚಿದ್ದರಿಂದ ಶಿಕ್ಷಣದ ಮೇಲಷ್ಟೇ ಅಲ್ಲ, ಪೌಷ್ಟಿಕತೆಯ ಮೇಲೂ ದುಷ್ಪರಿಣಾಮ ಉಂಟಾಗಿರುವುದು ಕೂಡ ಕಂಡು ಬಂದಿದೆ. ಏಕೆಂದರೆ ಈ ಸರ್ವೆ ನಡೆಸಿದ ಎಲ್ಲ ರಾಜ್ಯಗಳಲ್ಲೂ ಶಾಲೆ ಮುಚ್ಚುವುದರೊಂದಿಗೆ ಮಧ್ಯಾಹ್ನದ ಊಟವೂ ನಿಂತು ಹೋಗಿದೆ.

ಭಾರತದಲ್ಲಿ ಶಾಲೆಗಳ ಲಾಕ್‌ಡೌನ್ ಅವಧಿ ಇಡೀ ಜಗತ್ತಿನಲ್ಲೇ ಅತಿ ದೀರ್ಘಕಾಲದ್ದಾಗಿದ್ದು, ಇದು ಅಪಾರ ವಿಪತ್ತನ್ನು ತಂದಿದೆ ಎನ್ನುವ ಈ ವರದಿ ಕೂಡ ಈ ಹಾನಿಯನ್ನು ತುಂಬಲು ಹಲವು ವರ್ಷಗಳ ಶ್ರಮದ ಅಗತ್ಯವಿದೆ ಎಂದಿದೆ. ಪುನರಾರಂಭ ಮೊದಲ ಹೆಜ್ಜೆಯಷ್ಟೇ. ಈ ಬಗ್ಗೆಯೂ ಇನ್ನೂ ಚರ್ಚೆ ನಡೆಯುತ್ತಿದೆ. ಹೆಚ್ಚಿನ ರಾಜ್ಯಗಳಲ್ಲಿ ಈ ಮೊದಲನೇ ಹೆಜ್ಜೆಗೂ ಸರಿಯಾದ ಸಿದ್ಧತೆಗಳು, ಅಂದರೆ, ಶಾಲಾ ಕಟ್ಟಡಗಳ ರಿಪೇರಿ, ಸುರಕ್ಷತಾ ಮಾರ್ಗನಿರ್ದೇಶನಗಳು, ಶಿಕ್ಷಕರ ತರಬೇತಿ, ಶಾಲೆಗೆ ಸೇರಿಸುವ ಅಭಿಯಾನ ಇತ್ಯಾದಿಗಳು ಕಾಣಿಸುತ್ತಿಲ್ಲ ಎಂದು ಈ ಅಧ್ಯಯನ ಹೇಳುತ್ತದೆ.

ಸಪ್ಟಂಬರ್ 5 ರ ಕಿಸಾನ್-ಮಜ್ದೂರ್ ಮಹಾ ಪಂಚಾಯತ್

ಪುಟ 8 ರಿಂದ

ರಾಷ್ಟ್ರೀಯ ನಗದೀಕರಣ ಕ್ರಮಸರಣಿಯ ಮೂಲಕ ಇಡೀ ದೇಶವನ್ನು ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡುತ್ತಿದೆ ಎಂದು ನೇರವಾಗಿ ಆಪಾದಿಸಿದರು. ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿಯ ಕಾರ್ಮಿಕ ವರ್ಗದ ಬೇಡಿಕೆಯನ್ನು ಕೂಡ ಅವರು ಬೆಂಬಲಿಸಿದರು. ಜತೆಗೆ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮತ್ತಿತರ ಅಗತ್ಯ ವಸ್ತುಗಳ ಬೆಲೆಯೇರಿಕೆಗಳನ್ನು ಖಂಡಿಸಿದರು. ಹೀಗೆ, ಸಂಯುಕ್ತ ಕಿಸಾನ್ ಮೋರ್ಚಾದ ಈ ಮಹಾಪಂಚಾಯತ್, ಹತ್ತು ದಿನಗಳ ಹಿಂದೆ ನಡೆದ ರಾಷ್ಟ್ರೀಯ ಸಮಾವೇಶದಂತೆ ಕೃಷಿ ಕ್ಷೇತ್ರದ ಆಚೆಗಿನ ಪ್ರಶ್ನೆಗಳನ್ನೂ ಎತ್ತಿಕೊಂಡಿದೆ. ರೈತರ ಹೋರಾಟ ಮೂರು ಕೃಷಿ ಕಾಯ್ದೆಗಳು ಮತ್ತು ಎಂಎಸ್‌ಪಿ ಗಿಂತಲೂ ಹೆಚ್ಚಿನ ವ್ಯಾಪ್ತಿ ಪಡೆಯುತ್ತಿದೆ. ಅದು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯನ್ನು ರಕ್ಷಿಸುವುದಷ್ಟೇ ಅಲ್ಲ, ಆಳಗೊಳಿಸಿದೆ ನಮ್ಮ ಸಂವಿಧಾನವನ್ನು ರಕ್ಷಿಸುವ ಅತಿ ದೊಡ್ಡ ಆಂದೋಲನವಾಗಿ ಬಿಟ್ಟಿದೆ. ಇದನ್ನು ಹಲವು ಪ್ರಮುಖ ಭಾಷಣಕಾರರು ತಮ್ಮ ಭಾಷಣಗಳಲ್ಲಿ ಒತ್ತಿ ಹೇಳಿದರು.

ಐದನೆಯದಾಗಿ, ಯೋಗಿ ಸರಕಾರ ರೈತರಿಗೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸಿಲ್ಲ ಎಂದು ಭಾಷಣಕಾರರು ಆರೋಪಿಸಿದರು. ಬೆಳೆ ಖರೀದಿಯ ಭರವಸೆ ಕೂಡ 20%ದಷ್ಟೂ ನೆರವೇರಿಲ್ಲ. 86 ಲಕ್ಷ ರೈತರಿಗೆ ಸಾಲ ಮನ್ನಾದ ಆಶ್ವಾಸನೆ ನೀಡಿತ್ತು, 45 ಲಕ್ಷ ಮಂದಿ ಮಾತ್ರವೇ, ಅದೂ ಅಲ್ಪ-ಸ್ವಲ್ಪ ಪ್ರಯೋಜನ ಪಡೆದಿದ್ದಾರೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಕಬ್ಬು ಬೆಳೆಯುವ ಖರ್ಚು 2017ರಲ್ಲಿ ಕ್ವಿಂಟಾಲಿಗೆ 383ರೂ. ಆಗುತ್ತದೆ ಎಂದಿತ್ತು. ಆದರೆ ರೈತರಿಗೆ ಸಿಕ್ಕಿರುವುದು 325ರೂ. ಮಾತ್ರ. ಸಕ್ಕರೆ ಕಾರ್ಖಾನೆಗಳು ರೈತರಿಗೆ 12,000 ಕೋಟಿ ರೂ. ಬಾಕಿ ಇಟ್ಟುಕೊಂಡಿವೆ. ಬೆಳೆವಿಮೆ ಪಡೆದ ರೈತರ ಸಂಖ್ಯೆ 2016-17ರಲ್ಲಿದ್ದ 72ಲಕ್ಷ ದಿಂದ 2019-20ರಲ್ಲಿ 47 ಲಕ್ಷಕ್ಕೆ ಇಳಿದಿದೆ. ಆದರೆ ಬೆಳೆವಿಮಾ ಕಂಪನಿಗಳು 2508 ಕೋಟಿ ರೂ. ಲಾಭ ಗಳಿಸಿವೆ. ಉತ್ತರ ಪ್ರದೇಶ ಸರಕಾರ ಆಶ್ವಾಸನೆ ನೀಡಿದ ಕಬ್ಬಿಗೆ ಕ್ವಿಂಟಾಲಿಗೆ 450ರೂ. ದರಕ್ಕಾಗಿ ಒಂದು ಚಳುವಳಿಯನ್ನು ಸದ್ಯದಲ್ಲೇ ಎಸ್‌ಕೆಎಂ ಪ್ರಕಟಿಸಲಿದೆ.

ಹೋರಾಟದ ಜ್ವಾಲೆ

'ದಾಮ್ ನಹೀ ತೋ ವೋಟ್ ನಹೀ'(ನ್ಯಾಯಬೆಲೆ ಕೊಡದಿದ್ದರೆ ವೋಟ್ ಕೊಡುವುದಿಲ್ಲ), 'ವೋ ತೋಡೇಂಗೆ, ಹಮ್ ಜೋಡೇಂಗೆ'(ಅವರು ಮುರಿಯುತ್ತಾರೆ, ನಾವು ಜೋಡಿಸುತ್ತೇವೆ), ಜತೆಗೆ ಅಲ್ಲಾಹು ಅಕ್ಬರ್, ಹರಹರ ಮಹಾದೇವ್ ಮತ್ತು ಜೋ ಬೋಲೆ ಸೋ ನಿಹಾಲ್ ಧಾರ್ಮಿಕ ಘೋಷಣೆಗಳು ಒಟ್ಟಿಗೇ ಮೊಳಗಿದವು.

ತಮಿಳುನಾಡು, ಕರ್ನಾಟಕ, ಕೇರಳದ ಮುಖಂಡರು ತಂತಮ್ಮ ಭಾಷೆಗಳಲ್ಲೇ ಮಾತಾಡಿದಾಗ, ಅವರ ಮಾತುಗಳು ಅರ್ಥವಾಗದಿದ್ದರೂ ದೀರ್ಘ ಕರತಾಡನಗಳು ಅವನ್ನು ಸ್ವಾಗತಿಸಿದವು.

ಅದೇ ರೀತಿ, ಹುತಾತ್ಮರಾದ ಭಗತ್‌ಸಿಂಗ್, ಅಶ್ಫಾಕುಲ್ಲ ಖಾನ್ ಮತ್ತು ಡಾ.ಅಂಬೇಡ್ಕರ್, ಸ್ವಾಮಿ ಸಹಜಾನಂದ ಸರಸ್ವತಿ ಮತ್ತಿತರರ ಉಲ್ಲೇಖ ಮಾಡಿದಾಗಲೂ ದೀರ್ಘ ಕರತಾಡನಗಳು ಕಂಡು ಬಂದವು. ಇವೆಲ್ಲವೂ ಭಾರತದ ರೈತಾಪಿಗಳ ಐಕ್ಯತೆ ಮತ್ತು ದೃಢನಿರ್ಧಾರದ ಅಭಿವ್ಯಕ್ತಿಗಳು.

ಸಂಯುಕ್ತ ಕಿಸಾನ್ ಮೋರ್ಚಾದ ಸುಮಾರಾಗಿ ಎಲ್ಲ ಪ್ರಮುಖ ಮುಖಂಡರು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಈ ರ್‍ಯಾಲಿಯಲ್ಲಿ ಎಐಕೆಎಸ್‌ನ ಭಾಗವಹಿಸುವಿಕೆ ಗಮನಾರ್ಹವಾಗಿತ್ತು. ಉತ್ತರ ಭಾರತದ ಎಲ್ಲ ರಾಜ್ಯಗಳಿಂದ ಮತ್ತು ದೂರದ ಅಸ್ಸಾಂನಿಂದಲೂ ಎಐಕೆಎಸ್‌ನ ದೊಡ್ಡ ತುಕಡಿಗಳು ಭಾಗವಹಿಸಿದವು. ಬಿಹಾರ ಕಿಸಾನ್ ಸಭಾದ ಒಂದು ದೊಡ್ಡ ತಂಡ ಒಂದು ವಾರದ ಮೊದಲೇ ಗಾಝೀಪುರ ಗಡಿಯಲ್ಲಿ ಬಂದು ನೆಲೆಯೂರಿತ್ತು.

ಬಿಜೆಪಿ ಸರಕಾರ ಒಡ್ಡಿದ ಎಲ್ಲ ಅಡೆ-ತಡೆಗಳನ್ನು ಮೀರಿ ಈ ರ್‍ಯಾಲಿಯನ್ನು ಯಶಸ್ವಿಗೊಳಿಸಿದ ಲಕ್ಷಾಂತರ ರೈತರಿಗೆ ಸಂಯುಕ್ತ ಕಿಸಾನ್ ಮೋರ್ಚಾ ಅಭಿನಂದನೆಗಳನ್ನು ಸಲ್ಲಿಸಿದೆ.

ಕರ್ನಾಲ್ ರ್‍ಯಾಲಿ

ಇದಾದ ಮೇಲೆ ಇನ್ನೊಂದು ಬೃಹತ್ ರೈತ ರ್‍ಯಾಲಿ ಹರ್‍ಯಾಣದ ಕರ್ನಾಲ್‌ನಲ್ಲಿ ನಡೆದಿದೆ. ಸಪ್ಟಂಬರ್ 7ರಂದು ಎರಡು ಲಕ್ಷ ರೈತರು ಬಿಜೆಪಿ-ಜೆಜೆಪಿ ಸರಕಾರವನ್ನು ಖಂಡಿಸಿ ಈ ರ್‍ಯಾಲಿ ನಡೆದಿದೆ. "ತಲೆ ಒಡೆಯಿರಿ' ಎಂದು ಪೋಲೀಸರಿಗೆ ಸೂಚನೆ ನೀಡಿದ ಎಸ್‌ಡಿಎಂ ಆಯುಷ್ ಸಿನ್ಹರನ್ನು ಕೆಲಸದಿಂದ ತೆಗೆದು ಹಾಕಬೇಕು, ಆತನ ಮೇಲೆ ಕೊಲೆ ಮೊಕದ್ದಮೆ ನಡೆಸಬೇಕು ಎಂದು ಆಗ್ರಹಿಸಿ ಈ ರ್‍ಯಾಲಿ ನಡೆದಿದೆ. ಹರ್‍ಯಾಣ ಸರಕಾರ ಆತನನ್ನು ವಜಾ ಮಾಡುವ ಬದಲು ಬಿಜೆಪಿ ಮುಖ್ಯಮಂತ್ರಿ ಮತ್ತು ಜೆಜೆಪಿ ಉಪಮುಖ್ಯಮಂತ್ರಿಯ ಕೃಪಾಶೀರ್ವಾದದಿಂದ ಬಡ್ತಿ ಕೊಟ್ಟು ವರ್ಗ ಮಾಡಲಾಗಿದೆ. ಈಗಾಗಲೇ ವರದಿಯಾಗಿರುವಂತೆ ಆಗಸ್ಟ್28 ರಂದು ನಡೆದ ಅಮಾನುಷ ಲಾಠೀ ಪ್ರಹಾರದಲ್ಲಿ ಹತ್ತಾರು ರೈತರು ತೀವ್ರವಾಗಿ ಗಾಯಗೊಂಡಿದ್ದಾರೆ, ಸುಶೀಲ್ ಕಾಜಲ್ ಎಂಬ ಹೆಸರಿನ ರೈತ ಈ ಗಾಯಗಳಿಂದಾಗಿ ಹುತಾತ್ಮರಾಗಿದ್ದಾರೆ. ರಾಜ್ಯ ಸರಕಾರದ ವಿರುದ್ಧ ಈ ಹೋರಾಟ ಇನ್ನೂ ಮುಂದುವರೆಯುತ್ತಿದೆ.

ಮುಝಫ್ಫರ್‌ನಗರ ಮಹಾಪಂಚಾಯತ್‌ನಲ್ಲಿ ಎಸ್‌ಕೆಎಂ ಮುಖಂಡರು



ಕರ್ನಾಲ್‌ನಲ್ಲಿ ಪ್ರತಿಭಟನೆ



ವೃದ್ಧಾಪ್ಯ ಪಿಂಚಣಿಯ ನಿಕೃಷ್ಟ ಮೊತ್ತ: ಒಂದು ಹಗರಣ

ಹೊಣೆಗೇಡಿ ಸರಕಾರದ ವರ್ಗ-ಪಕ್ಷಪಾತದ ಲಜ್ಜೆಗೆಟ್ಟ ಪ್ರದರ್ಶನ



ಬಡವಾ ನೀ ಮಡಗಿದಂಗಿರು ಎನ್ನುವ ಪಾಳೆಯಗಾರೀ ಜಾತಿ-ಪದ್ಧತಿಯ ಸಮಾಜದ ನೀತಿಗೆ ಬದಲಾಗಿ ಪಿಂಚಣಿಯು ಎಲ್ಲಾ ನಾಗರಿಕರಿಗೂ ಒಂದು ಹಕ್ಕಿನ ವಿಷಯವಾಗಬೇಕಾದ ಪ್ರಜಾಪ್ರಭುತ್ವ ಸಮಾಜದಲ್ಲಿ 200 ರೂ.ಗಳ ನಿಕೃಷ್ಟ ಪಿಂಚಣಿಯ ಹೆಚ್ಚಳವನ್ನು ತಳ್ಳಿಹಾಕುವುದು ವರ್ಗ-ಪಕ್ಷಪಾತದ ಲಜ್ಜೆಗೆಟ್ಟ ಪ್ರದರ್ಶನವೇ ಸರಿ. ಇದು ಸರ್ಕಾರದ ನಿರ್ದಯತೆಯ ಮತ್ತು ಜವಾಬ್ದಾರಿಯಿಂದ ನುಣಿಚಿಕೊಳ್ಳುವ ಅಕ್ಷಮ್ಯ ಕೃತ್ಯವಾಗುತ್ತದೆ- ವಿಶೇಷವಾಗಿ ಇದೇ ಸರಕಾರ "ನಗದೀಕರಣ" ಎಂಬ ಹೆಸರಿನಲ್ಲಿ, ಜನರ ತೆರಿಗೆಗಳಿಂದ ನಿರ್ಮಿಸಿದ ರಾಷ್ಟ್ರದ ಸ್ವತ್ತುಗಳನ್ನು ತನ್ನ ಪ್ರೀತಿ-ಪಾತ್ರ ಶ್ರೀಮಂತರಿಗೆ ಹಸ್ತಾಂತರಿಸುವ, ಅವನ್ನು ವಹಿಸಿಕೊಳ್ಳಲಿಕ್ಕಾಗಿ ಅವರಿಗೆ ತೆರಿಗೆ-ವಿರಾಮಗಳನ್ನು ನೀಡಲು ಕೂಡ ಮುಂದಾಗುತ್ತಿರುವಾಗ!

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದಡಿ ವೃದ್ಧರಿಗೆ ನೀಡುವ ಮಾಸಿಕ ಪಿಂಚಣಿಯ ಹೆಚ್ಚಳವನ್ನು ಮೋದಿ ಸರ್ಕಾರದ ಗ್ರಾಮೀಣಾಭಿವೃದ್ಧಿ ಕಿರಿಯ ಸಚಿವೆ ಸಾಧ್ವಿ ನಿರಂಜನ್ ಜ್ಯೋತಿ ಅವರು ಸಂಸತ್ತಿನಲ್ಲಿ ತಳ್ಳಿಹಾಕಿದ್ದಾರೆ (ದಿ ಟೆಲಿಗ್ರಾಫ್, ಆಗಸ್ಟ್ 22). ಈ ಕಾರ್ಯಕ್ರಮದ ಅಡಿಯಲ್ಲಿ 60 ರಿಂದ 79 ವರ್ಷ ವಯಸ್ಸಿನ ಪ್ರತಿಯೊಬ್ಬ ಫಲಾನುಭವಿಗೂ ಪ್ರಸ್ತುತ ನೀಡಲಾಗುತ್ತಿರುವ ಮೊತ್ತವು ತಿಂಗಳಿಗೆ 200 ರೂ. ಇದೆ ಮತ್ತು 80 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳಿಗೆ ತಿಂಗಳಿಗೆ 500 ರೂ. ಇದೆ.

ವಯಸ್ಸಾದ ನಾಗರಿಕರಿಗೆ ಕೇಂದ್ರ ಸರ್ಕಾರವು ಇಷ್ಟು ಅಲ್ಪ ಮೊತ್ತವನ್ನು ನೀಡುತ್ತಿರುವುದು ನಾಚಿಕೆಗೇಡಿನ ಮತ್ತು ಅವಮಾನಕರ ವಿಷಯವೇ. ಮೇಲಾಗಿ, ಹಲವು ವರ್ಷಗಳಿಂದಲೂ ಈ ಮೊತ್ತವನ್ನು ಹೆಚ್ಚಿಸಿಯೂ ಇಲ್ಲ ಮತ್ತು ಅದನ್ನು ಹಣದುಬ್ಬರ-ಸೂಚ್ಯಂಕದೊಂದಿಗೆ ಹೊಂದಿಸಿಯೂ ಇಲ್ಲ. ಕೇಂದ್ರವು ನೀಡುವ ಈ ಅಲ್ಪ ಮೊತ್ತದ ಜೊತೆಗೆ ರಾಜ್ಯ ಸರ್ಕಾರಗಳೂ ಸಹ ಸ್ವಲ್ಪ ಹಣ ಸೇರಿಸುವುದರಿಂದಾಗಿ, ಕೆಲವು ರಾಜ್ಯಗಳಲ್ಲಿ, ಒಟ್ಟು ಮೊತ್ತವು ಹೆಚ್ಚೆಂದರೆ ತಿಂಗಳಿಗೆ 500 ರೂ. ಗಳ ಮಟ್ಟವನ್ನು ತಲುಪುತ್ತದೆ. ಇದು, ಯಾವುದೇ ಸಾಂಸ್ಥಿಕ ಪಿಂಚಣಿ ಯೋಜನೆಗೂ ಒಳಪಡದ ಭಾರತದ ಒಬ್ಬ ವೃದ್ಧನು ಪಿಂಚಣಿಯ ರೂಪದಲ್ಲಿ ಪಡೆಯುವ ಗರಿಷ್ಠ ಪ್ರಮಾಣದ ಪಿಂಚಣಿಯ ಮೊತ್ತ. ಅದಕ್ಕಿಂತಲೂ ಮುಖ್ಯವಾಗಿ, ಈ ಮೊತ್ತದ ಪಿಂಚಣಿಯನ್ನು ಪಡೆಯಬೇಕಾದ ಅನೇಕ ವ್ಯಕ್ತಿಗಳಿಗೆ ಅದು ಸಿಗುವುದೇ ಇಲ್ಲ! 2016-17ರಲ್ಲಿ, ರಾಷ್ಟ್ರೀಯ ಸಾಮಾಜಿಕ ಸಹಾಯ ಯೋಜನೆ (ಎನ್ಎಸ್ಎಪಿ) ಅಡಿಯಲ್ಲಿ ಕೇಂದ್ರ ಸರ್ಕಾರವು ಸುಮಾರು 5,900 ಕೋಟಿ ರೂ.ಗಳನ್ನು ಪಿಂಚಣಿಯಾಗಿ ನೀಡಿದೆ. ಅಂದರೆ, ತಿಂಗಳಿಗೆ 200 ರೂ.ಗಳ ಲೆಕ್ಕದಲ್ಲಿ, ಕೇವಲ 2.46 ಕೋಟಿ ಫಲಾನುಭವಿಗಳಿಗಷ್ಟೇ ಈ ಪಿಂಚಣಿ ಸಿಗುತ್ತದೆ.

ಅಂದರೆ, ಪಿಂಚಣಿಯನ್ನು ಎಷ್ಟು ಮಂದಿ ಪಡೆಯಬೇಕಾಗಿತ್ತೊ ಅದರ ಕೊಂಚ ಭಾಗ ಮಾತ್ರ ಪಡೆಯುತ್ತಿದ್ದಾರೆ ಎಂದಾಗುತ್ತದೆ. ದೇಶದ ಒಟ್ಟು ಜನ ಸಂಖ್ಯೆಯಲ್ಲಿ ಸುಮಾರು 12 ಕೋಟಿ ಜನರು 60 ಕ್ಕಿಂತ ಹೆಚ್ಚು ವಯಸ್ಸಿನವರು ಎಂದು ಅಂದಾಜಿಸಲಾಗಿದ್ದು, ವೃದ್ಧರ ಸಂಖ್ಯೆಯು ಜನಸಂಖ್ಯೆಯ ಶೇ.10 ರಷ್ಟಾಗುತ್ತದೆ. ಹಾಗಾಗಿ, ಯಾವುದೇ ಸಾಂಸ್ಥಿಕ ಪಿಂಚಣಿ ಯೋಜನೆಗೆ ಒಳಪಡದವರ ಅನುಪಾತವು ಅನೌಪಚಾರಿಕ ವಲಯದಲ್ಲಿ ತೊಡಗಿರುವವರ ಪ್ರಮಾಣಕ್ಕೆ (ಅಂದರೆ, ಸುಮಾರು ಶೇಕಡಾ 85) ಸರಿಸುಮಾರು ಸಮಾನವಾಗಿದೆ. ಅಂದರೆ, ಸರ್ಕಾರದಿಂದ ಪಿಂಚಣಿ ಪಡೆಯಬೇಕಾದವರ ಸಂಖ್ಯೆಯು ಸುಮಾರು 10 ಕೋಟಿಗೆ ಬರುತ್ತದೆ. ದೇಶದ ಒಟ್ಟು ಕೆಲಸಗಾರರ ಸಂಖ್ಯೆಯಲ್ಲಿ ಅರ್ಧದಷ್ಟು ಭಾಗವನ್ನು ಹೊಂದಿರುವ ಕೃಷಿ ಒಂದರಲ್ಲೇ 5 ರಿಂದ 6 ಕೋಟಿ ಮಂದಿ ಪಿಂಚಣಿದಾರರು ಇರಬಹುದು. ಚಿಲ್ಲರೆ ವ್ಯಾಪಾರ, ಅಸಂಘಟಿತ ಉತ್ಪಾದನೆ ಮತ್ತು ಸಣ್ಣ ಪುಟ್ಟ ಸೇವೆಗಳಂತಹ ವಲಯಗಳಲ್ಲಿ ತೊಡಗಿರುವವರನ್ನು ಲೆಕ್ಕಕ್ಕೆ ತೆಗೆದುಕೊಂಡಾಗ, ವಾಸ್ತವವಾಗಿ, ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವವರ ಸಂಖ್ಯೆಯು ಎಷ್ಟು ಮಂದಿ ಪಿಂಚಣಿ ಪಡೆಯಬೇಕಿತ್ತೊ ಅದರ ಕಾಲು ಭಾಗದಷ್ಟು ಮಾತ್ರ ಎಂಬುದು ಸ್ಪಷ್ಟವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸರ್ಕಾರದ ಪಿಂಚಣಿ ಯೋಜನೆಯು ಹಾಸ್ಯಾಸ್ಪದವಾಗಿದೆ: ತಿಂಗಳಿಗೆ 200 ರೂ.ಗಳ ಕ್ಷುಲ್ಲಕ ಮೊತ್ತವನ್ನು ಪಾವತಿಸುತ್ತದೆ ಮತ್ತು ಅದೂ ಸಹ ಅದನ್ನು ಪಡೆಯಬೇಕಾದವರ ಸಂಖ್ಯೆಯ ಕಾಲು ಭಾಗದಷ್ಟು ಜನರಿಗೆ ಮಾತ್ರ.

ಪಿಂಚಣಿದಾರರ ಈ ಹೀನಾಯ ಪರಿಸ್ಥಿತಿಯನ್ನು ಖಂಡಿಸುವ ನಾಗರಿಕ ಸಮಾಜ ಸಂಘಟನೆಗಳು, ಪಿಂಚಣಿಯ ಮೊತ್ತವು ಕನಿಷ್ಠ ವೇತನದ ಅರ್ಧದಷ್ಟಾದರೂ ಇರಬೇಕು ಎಂದು ಒತ್ತಾಯಿಸುತ್ತಲೇ ಬಂದಿವೆ. ಶಾಸನಬದ್ಧ ಕನಿಷ್ಠ ದಿನಗೂಲಿಯು ರಾಜ್ಯಗಳಾದ್ಯಂತ ಬೇರೆ ಬೇರೆ ಇದೆ, ನಿಜ. ಆದರೂ, ಸರಾಸರಿ ದಿನಗೂಲಿಯನ್ನು 300 ರೂ.ಗಳೆಂದು ತೆಗೆದುಕೊಂಡರೂ ಸಹ, ಪಿಂಚಣಿಯ ಮೊತ್ತವು ತಿಂಗಳಿಗೆ 4,500 ರೂ. ಆಗಬೇಕು. ಆದಾಗ್ಯೂ, ತಿಂಗಳಿಗೆ 3000 ರೂ.ಗಳನ್ನಾದರೂ ನಿಗದಿಪಡಿಸಬೇಕೆಂಬುದು ಈ ಸಂಸ್ಥೆಗಳ ಬೇಡಿಕೆ.

ಪಿಂಚಣಿಯು ಎಲ್ಲರಿಗೂ ದೊರಕಬೇಕು ಎಂಬ ವಾದವು, ನಿವೃತ್ತಿಯ ನಂತರ ವೃದ್ಧರು ತಮ್ಮ ಸಂತತಿಯ ಆರೈಕೆಯಿಂದ ಬದುಕಬೇಕೆಂದು ಯಾವುದೇ ಪ್ರಜಾಪ್ರಭುತ್ವವಾದೀ ಸಮಾಜವು ನಿರೀಕ್ಷಿಸಬಾರದು ಎಂಬ ತತ್ವದಿಂದ ಉದ್ಭವಿಸುತ್ತದೆ. ಪಿಂಚಣಿಯು ಎಲ್ಲಾ ನಾಗರಿಕರಿಗೂ ಒಂದು ಹಕ್ಕಿನ ವಿಷಯವಾಗಬೇಕು. ಯಾವುದೇ ಸಾಂಸ್ಥಿಕ ಯೋಜನೆಗಳ ಪಿಂಚಣಿ ದೊರೆಯದ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಗೆ ಅಥವಾ ಕಡಿಮೆ ಆದಾಯವನ್ನು ಗಳಿಸುವ ವ್ಯಕ್ತಿಗಳು ತಮ್ಮ ದುಡಿಯುವ ವರ್ಷಗಳಲ್ಲಿ ತಾವು ಗಳಿಸಿದ ಅತಿ ಕಡಿಮೆ ಆದಾಯದಲ್ಲೇ ತಮ್ಮ ವೃದ್ಧಾಪ್ಯಕ್ಕಾಗಿ ಉಳಿತಾಯ ಮಾಡಬೇಕೆಂದು ನಿರೀಕ್ಷಿಸಲಾಗದು. ಆದ್ದರಿಂದ, ಸರ್ಕಾರವೇ ಅವರಿಗೆ ಅಗತ್ಯ ಪಿಂಚಣಿಯನ್ನು ಒದಗಿಸಬೇಕು.

ಒಬ್ಬ ವ್ಯಕ್ತಿಗೆ ಸಿಗುವ ಸಾಪೇಕ್ಷ ಆದಾಯವು ಸಾಮಾಜಿಕವಾಗಿ ನಿರ್ಧರಿಸಲ್ಪಡುವ ಮತ್ತು ದೇಶದ ಆದಾಯ ಹಂಚಿಕೆಯ ಮಾದರಿಯಲ್ಲಿ ಹುದುಗಿರುವ ಕಾರಣದಿಂದಾಗಿ, ಪಿಂಚಣಿ ಒದಗಿಸುವ ವಿಷಯದಲ್ಲಿ ಸರ್ಕಾರದ ಜವಾಬ್ದಾರಿ ಉದ್ಭವಿಸುತ್ತದೆ. ಆದ್ದರಿಂದ, ಎಲ್ಲರಿಗೂ ಯೋಗ್ಯ ಜೀವನಕ್ಕಾಗಿ ಸಾಕಾಗುವಷ್ಟು ಪಿಂಚಣಿ ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದು ಸಮಾಜದ ಜವಾಬ್ದಾರಿಯಾಗುತ್ತದೆ. ಈ ಜವಾಬ್ದಾರಿಯು ಸಮಾಜದ ಇಚ್ಛಾಶಕ್ತಿಯ ಪ್ರತಿಪಾದಕನಾದ ಸರ್ಕಾರದ ಮೇಲೆ ವರ್ಗಾಯಿಸಲ್ಪಡುತ್ತದೆ.

ಸರ್ಕಾರವು ಪ್ರಸ್ತುತ ನೀಡುತ್ತಿರುವ ದರಿದ್ರ ಮೊತ್ತದ ಪಿಂಚಣಿಯ ಹೆಚ್ಚಳವನ್ನು ತಳ್ಳಿಹಾಕುವ ಕ್ರಮವು ಸರ್ಕಾರದ ನಿರ್ದಯತೆಗೂ ಮತ್ತು ಜವಾಬ್ದಾರಿಯಿಂದ ನುಣಿಚಿಕೊಳ್ಳುವ ಅಕ್ಷಮ್ಯ ಕೃತ್ಯಕ್ಕೂ ಸಮನಾಗುತ್ತದೆ. ಇದು, ಉತ್ತಮ ಜೀವನ ಮಟ್ಟವನ್ನು ನಿರಾಕರಿಸುವ ಮೂಲಕ ಬಡವಾ ನೀ ಮಡಗಿದಂಗಿರು ಎನ್ನುವ ಜಾತಿ-ಪದ್ಧತಿಯನ್ನು ಪೋಷಿಸುವ ಪಾಳೆಯಗಾರೀ ಸಮಾಜದ ನೀತಿಗೆ ಅನುಗುಣವಾಗಿದೆಯೇ ಹೊರತು, ಪ್ರತೀ ನಾಗರಿಕರೂ ಪಿಂಚಣಿಯ ಹಕ್ಕನ್ನು ಹೊಂದಿರುತ್ತಾರೆ ಎಂಬ ಆಧುನಿಕ ಪ್ರಜಾಪ್ರಭುತ್ವ ಸಮಾಜದ ಲಕ್ಷಣಕ್ಕೆ ಅನುಗುಣವಾಗಿಲ್ಲ.

ಪಿಂಚಣಿ ಒದಗಿಸುವ ಉದ್ದೇಶಕ್ಕಾಗಿ ಅಗತ್ಯವಿರುವ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವುದು ಹೇಗೆಂಬ ಪ್ರಶ್ನೆಯು ತಾತ್ವಿಕವಾಗಿ ಅಸಂಬದ್ಧ. ಸಂಪನ್ಮೂಲಗಳನ್ನು ಹೇಗಾದರೂ ಸರಿ, ಒದಗಿಸಿಕೊಳ್ಳಬೇಕು. 10 ಕೋಟಿ ಜನರಿಗೆ ತಿಂಗಳಿಗೆ ತಲಾ 3000 ರೂ.ಗಳ ಪಿಂಚಣಿ ನೀಡಬೇಕು ಎಂದಾದರೆ, ವರ್ಷಕ್ಕೆ 3.6 ಲಕ್ಷ ಕೋಟಿ ರೂ.ಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಇದು ಭಾರತದ ಜಿಡಿಪಿಯ ಶೇ. 1.8 ರಷ್ಟಾಗುತ್ತದೆ. ಜಿಡಿಪಿಯ ಶೇ. 1.8 ರಷ್ಟನ್ನು ಸರ್ಕಾರವು ಪಿಂಚಣಿಗಾಗಿ ಖರ್ಚು ಮಾಡಿದರೆ, ಪಿಂಚಣಿದಾರರು ಅಷ್ಟೂ ಮೊತ್ತವನ್ನು ವಿವಿಧ ಸರಕು-ಸರಂಜಾಮುಗಳು ಮತ್ತು ಸೇವೆಗಳನ್ನು ಪಡೆಯುಲು ಖರ್ಚು ಮಾಡುತ್ತಾರೆ. ಈ ಹಣವು, ಸರಕುಗಳು ಮತ್ತು ಸೇವೆಗಳ ಉತ್ಪಾದಕರಿಗೆ ಆದಾಯವಾಗಿ ಸೇರುತ್ತದೆ. ಇದರಲ್ಲಿ ಅವರು ಒಂದಿಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಹೀಗೆ, ಅನೇಕ ಸುತ್ತಿನ ಸತತ ಖರ್ಚುಗಳ ಮೂಲಕ ಹೆಚ್ಚುವರಿ ಆದಾಯ ಉಂಟಾಗುತ್ತದೆ. ಹಾಗಾಗಿ, ಸರ್ಕಾರವು ಜಿಡಿಪಿಯ ಶೇ. 1.8 ರಷ್ಟು ಹಣವನ್ನು ಖರ್ಚು ಮಾಡುವುದರಿಂದ ಒಂದು ಬಿಗಿ ಅಂದಾಜಿನ ಪ್ರಕಾರವೂ ಜಿಡಿಪಿಯು ಶೇ. 3.6ರಷ್ಟು ಹೆಚ್ಚುತ್ತದೆ. ಅದರ ಮೇಲೆ ಸರ್ಕಾರಕ್ಕೆ ಬರುವ ತೆರಿಗೆ ಆದಾಯವು, ಕೇಂದ್ರ ಮತ್ತು ರಾಜ್ಯಗಳು ಒಟ್ಟು ಶೇ. 15 ತೆರಿಗೆ ಹಾಕುತ್ತವೆ ಎಂದು ಊಹಿಸಿಕೊಂಡರೂ, ಜಿಡಿಪಿಯ ಶೇಕಡಾ 0.54 ರಷ್ಟಾಗುತ್ತದೆ. ಆದ್ದರಿಂದ, ಜಿಡಿಪಿಯ ಶೇ. 1.8 ರಷ್ಟು ಹಣವನ್ನು ಖರ್ಚು ಮಾಡಲು, ಸರ್ಕಾರವು ಜಿಡಿಪಿಯ ಶೇ. 1.26 ರಷ್ಟು (1.8 – 0.54 = 1.26) ಹೊಸ ಸಂಪನ್ಮೂಲಗಳನ್ನು ಎತ್ತಬೇಕಾಗುತ್ತದೆ.

ಒಂದು ಪಿಂಚಣಿ ಯೋಜನೆಯನ್ನು ಆರಂಭಿಸುವ ಬಗ್ಗೆ ಗಂಭೀರವಾಗಿರುವ ಸರ್ಕಾರಕ್ಕೆ ಹಣ ಹೊಂದಿಸಿಕೊಳ್ಳುವುದೇ ಒಂದು ಸಮಸ್ಯೆಯಾಗಬಾರದು.

ದೇಶದಲ್ಲಿರುವ ಖಾಸಗಿ ಸಂಪತ್ತಿನ ಮೌಲ್ಯವನ್ನು, ಬಿಗಿ ಅಂದಾಜಿನ ಲೆಕ್ಕ ಮಾಡಿದರೂ ಸಹ, ಜಿಡಿಪಿಯ ನಾಲ್ಕರಷ್ಟು ಇದೆ ಎಂದು ಪರಿಗಣಿಸಬಹುದು ಮತ್ತು ಈ ಅಂದಾಜು ದೇಶದಲ್ಲಿ ಗಮನಿಸಲಾದ ಬಂಡವಾಳ-ಉತ್ಪತ್ತಿಯ ಅನುಪಾತಕ್ಕೂ ಅನುಗುಣವಾಗಿದೆ. ಮತ್ತು, ಜನಸಂಖ್ಯೆಯ ಮೇಲ್ತುದಿಯ ಶೇ. ಒಂದರಷ್ಟು ಮಂದಿಯು ದೇಶದ ಒಟ್ಟು ಖಾಸಗಿ ಸಂಪತ್ತಿನ ಅರ್ಧದಷ್ಟು ಭಾಗವನ್ನು ಹೊಂದಿದ್ದಾರೆ ಎಂದು ಭಾವಿಸಿದರೆ, ಅವರು ಹೊಂದಿರುವ ಸಂಪತ್ತು ಜಿಡಿಪಿಯ ಎರಡರಷ್ಟಾಗುತ್ತದೆ. ಮೇಲ್ತುದಿಯ ಶೇ. ಒಂದರಷ್ಟು ಮಂದಿಯು ಹೊಂದಿರುವ ಸಂಪತ್ತಿನ ಮೇಲೆ ಕೇವಲ ಶೇಕಡ 0.63ರಷ್ಟು ಸಂಪತ್ತು ತೆರಿಗೆಯನ್ನು ವಿಧಿಸಿದರೆ, ಸಾಂಸ್ಥಿಕ ಪಿಂಚಣಿಯ ರಕ್ಷಣೆ ಹೊಂದಿರುವವರನ್ನು ಮಾತ್ರ ಬಿಟ್ಟು ಬಹುತೇಕ ಒಂದು ಸಾರ್ವತ್ರಿಕ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಅಗತ್ಯವಾದಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಬಹುದು.

ಕಲ್ಯಾಣ ಕ್ರಮಗಳನ್ನು ಆರಂಭಿಸುವ ಸಲುವಾಗಿ ಅಮೆರಿಕಾದಲ್ಲಿ ಸಂಪತ್ತಿನ ಮೇಲೆ ತೆರಿಗೆ ಹೇರುವ ಪ್ರಸ್ತಾಪವನ್ನು ಇತ್ತೀಚೆಗೆ ಮಾಡಲಾಗಿದೆ ಎಂಬುದನ್ನು ಗಮನಿಸಬಹುದು. ಇತ್ತೀಚೆಗೆ ಮುಕ್ತಾಯಗೊಂಡ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಟಿಕೆಟ್ ಆಕಾಂಕ್ಷಿಗಳಾಗಿದ್ದ ಬರ್ನಿ ಸ್ಯಾಂಡರ್ಸ್ ಮತ್ತು ಎಲಿಜಬೆತ್ ವಾರೆನ್, ಇಬ್ಬರೂ, ತಮ್ಮ ಚುನಾವಣಾ ಪ್ರಚಾರದಲ್ಲಿ ಸಂಪತ್ತಿನ ತೆರಿಗೆಯ ದರ ಹೆಚ್ಚಳವನ್ನು ಸೂಚಿಸಿದ್ದರು. ಅಂತಿಮವಾಗಿ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದ ಜೋ ಬಿಡೆನ್, ಸರ್ಕಾರದ ಗಣನೀಯ ವೆಚ್ಚದ ಕಾರ್ಯಕ್ರಮಗಳ ಮೂಲಕ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಹೆಚ್ಚಿನ ಸಂಪತ್ತು ಮತ್ತು ಕಾರ್ಪೊರೇಟ್ ತೆರಿಗೆಗಳನ್ನು ವಿಧಿಸಲು ಯೋಜಿಸುತ್ತಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಭಾರತದಲ್ಲಿ ನವ-ಉದಾರವಾದಿ ಆರ್ಥಿಕ ಆಳ್ವಿಕೆಯ ಅವಧಿಯಲ್ಲಿ ಸಂಪತ್ತಿನ ಅಸಮಾನತೆಗಳು ಅಸಾಧಾರಣ ಮಟ್ಟದಲ್ಲಿ ಹೆಚ್ಚಿದ್ದರೂ ಸಹ, ಸಂಪತ್ತಿನ ತೆರಿಗೆಯನ್ನು ಕೈಬಿಡಲಾಗಿದೆ. ಇದೇ ವಿದ್ಯಮಾನವು ಪ್ರಪಂಚದಾದ್ಯಂತವೂ ಸಂಭವಿಸಿದೆ ಮತ್ತು ಇದು ಪ್ರಜಾಪ್ರಭುತ್ವದ ಕಾರ್ಯ ನಿರ್ವಹಣೆಗೆ ಎದುರಾಗಿರುವ ಬೆದರಿಕೆಯಾಗಿದೆ ಎಂಬುದು ಬೂರ್ಜ್ವಾ ಮತ್ತು ಸಾಮಾಜಿಕ ಪ್ರಜಾಪ್ರಭುತ್ವವಾದಿ ಅರ್ಥಶಾಸ್ತ್ರಜ್ಞರಲ್ಲಿ ಕೂಡ ಆತಂಕದ ಒಂದು ಮೂಲವಾಗಿದೆ.

ಸಂಪತ್ತಿನ ತೆರಿಗೆಯ ಮೂಲಕ ಪಿಂಚಣಿ ಯೋಜನೆಗೆ ಹಣಕಾಸು ಒದಗಿಸುವ ಯೋಜನೆಯು ಏಕ ಕಾಲದಲ್ಲಿ ಮೂರು ಉದ್ದೇಶಗಳನ್ನು ಈಡೇರಿಸುತ್ತದೆ: ಅದು ಒಂದು ಸಾರ್ವತ್ರಿಕ ಪಿಂಚಣಿ ಪಡೆಯುವ ಹಿರಿಯ ನಾಗರಿಕರ ಹಕ್ಕನ್ನು ಎತ್ತಿಹಿಡಿಯುತ್ತದೆ; ಅದು ಪ್ರಸ್ತುತ ಸ್ಥಗಿತತೆ ಮತ್ತು ಬಿಕ್ಕಟ್ಟಿನಲ್ಲಿ ಮುಳುಗಿರುವ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಸಹಾಯ ಮಾಡುತ್ತದೆ; ಮತ್ತು ಅದು ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸದೆ ಈ ಕಾರ್ಯಗಳನ್ನು ಸಾಧಿಸುತ್ತದೆ. (ಸಂಪತ್ತಿನ ಮೇಲೆ ತೆರಿಗೆ ವಿಧಿಸುವ ಮತ್ತು ಅದರಿಂದ ಬರುವ ಆದಾಯವನ್ನು ಖರ್ಚು ಮಾಡುವ ಕ್ರಮವು ವಾಸ್ತವವಾಗಿ ಸಂಪತ್ತಿನ ಅಸಮಾನತೆಯನ್ನೇನೂ ಕಡಿಮೆ ಮಾಡುವುದಿಲ್ಲ; ಸಂಪತ್ತಿನ ಅಸಮಾನತೆಯು ಇನ್ನಷ್ಟು ಹದಗೆಡುವುದನ್ನು **ಪುಟ 14 ನೋಡಿ**



ಪಿಂಚಣಿಯು ಎಲ್ಲರಿಗೂ ದೊರಕಬೇಕು ಎಂಬ ವಾದವು, ನಿವೃತ್ತಿಯ ನಂತರ ವೃದ್ಧರು ತಮ್ಮ ಸಂತತಿಯ ಆರೈಕೆಯಿಂದ ಬದುಕಬೇಕೆಂದು ಯಾವುದೇ ಪ್ರಜಾಪ್ರಭುತ್ವವಾದೀ ಸಮಾಜವು ನಿರೀಕ್ಷಿಸಬಾರದು ಎಂಬ ತತ್ವದಿಂದ ಉದ್ಭವಿಸುತ್ತದೆ. ಪಿಂಚಣಿಯು ಎಲ್ಲಾ ನಾಗರಿಕರಿಗೂ ಒಂದು ಹಕ್ಕಿನ ವಿಷಯವಾಗಬೇಕು. ಪಿಂಚಣಿ ಒದಗಿಸುವ ಉದ್ದೇಶಕ್ಕಾಗಿ ಅಗತ್ಯವಿರುವ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವುದು ಹೇಗೆಂಬ ಪ್ರಶ್ನೆಯು ತಾತ್ವಿಕವಾಗಿ ಅಸಂಬದ್ಧ. ಸಂಪನ್ಮೂಲಗಳನ್ನು ಹೇಗಾದರೂ ಸರಿ, ಒದಗಿಸಿಕೊಳ್ಳಬೇಕು. 10 ಕೋಟಿ ಜನರಿಗೆ ತಿಂಗಳಿಗೆ ತಲಾ 3000 ರೂ.ಗಳ ಪಿಂಚಣಿ ನೀಡಬೇಕು ಎಂದಾದರೆ, ವರ್ಷಕ್ಕೆ 3.6 ಲಕ್ಷ ಕೋಟಿ ರೂ.ಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಇದು ಭಾರತದ ಜಿಡಿಪಿಯ ಶೇ. 1.8 ರಷ್ಟಾಗುತ್ತದೆ. ಇದನ್ನು ಹೊಂದಿಸಿಕೊಳ್ಳುವುದು ಸರಕಾರಕ್ಕೆ ಸಮಸ್ಯೆಯೇ ಆಗಬಾರದು...ಮೇಲ್ತುದಿಯ ಶೇ. ಒಂದರಷ್ಟು ಮಂದಿಯು ಹೊಂದಿರುವ ಸಂಪತ್ತಿನ ಮೇಲೆ ಕೇವಲ ಶೇಕಡ 0.63 ರಷ್ಟು ಸಂಪತ್ತು ತೆರಿಗೆಯನ್ನು ವಿಧಿಸಿದರೆ, ಅಗತ್ಯವಾದಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಬಹುದು.



ವೃದ್ಧಾಪ್ಯ ಪಿಂಚಣಿ ನಿಕೃಷ್ಟ ಮೊತ್ತದ ಹಗರಣ

ಪುಟ 13 ರಿಂದ

ಮಾತ್ರ ತಡೆಯುತ್ತದೆ).

ಮೋದಿ ಸರ್ಕಾರವು ಇದಕ್ಕೆ ತದ್ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಅದು ನೀಡುವ ನಿಕೃಷ್ಟ ಪಿಂಚಣಿಯನ್ನು ಹೆಚ್ಚಿಸುವುದಿಲ್ಲ ಎಂದು ಹೇಳಿದೆ ಮಾತ್ರವಲ್ಲ, ಶ್ರೀಮಂತರ ಮೇಲೆ ಸಂಪತ್ತಿನ ತೆರಿಗೆಯನ್ನು ವಿಧಿಸುವುದಕ್ಕೆ ಬದಲಾಗಿ, ಅದು ನಿಜಕ್ಕೂ ಶ್ರೀಮಂತರನ್ನು ಇನ್ನಷ್ಟು ಮುದ್ದು ಮಾಡುತ್ತಿದೆ. "ನಗದೀಕರಣ" ಎಂಬ ತಪ್ಪು ದಾರಿಗೆಳೆಯುವ ಹೆಸರಿನಲ್ಲಿ, ಹಿಡಿಗೂಳಿನ ಅಥವಾ ದುಗ್ಗಾಣಿಯು ಆಸೆಗಾಗಿ ಜನರ ತೆರಿಗೆಗಳಿಂದ ನಿರ್ಮಿಸಿದ ರಾಷ್ಟ್ರದ ಸ್ವತ್ತುಗಳನ್ನು ತನ್ನ ಪ್ರೀತಿ–ಪಾತ್ರ ಶ್ರೀಮಂತರಿಗೆ ಹಸ್ತಾಂತರಿಸುತ್ತಿದೆ. ಉದಾಹರಣೆಗೆ, ರೈಲ್ವೆ ಪ್ಲಾಟ್‌ಫಾರ್ಮ್‌ಗಳು, ರಸ್ತೆ ಬದಿಯ ಸ್ಥಳಗಳಿಂದ ಹಿಡಿದು ರಸ್ತೆಗಳು ಮತ್ತು ವಿಮಾನ ನಿಲ್ದಾಣಗಳವರೆಗಿನ ರಾಷ್ಟ್ರದ ಅನೇಕಾನೇಕ ಸ್ವತ್ತುಗಳನ್ನು "ನಗದೀಕರಣ"ದ ಹೆಸರಿನಲ್ಲಿ ಸ್ವಾಧೀನಪಡಿಸಿಕೊಳ್ಳುವ ಬಂಡವಾಳಶಾಹಿಗಳಿಗೆ ಈ ಸ್ವತ್ತುಗಳ ಬಳಕೆದಾರರನ್ನು ಶೋಷಿಸಲು, ಈ ಸ್ವತ್ತುಗಳನ್ನು ನಿರ್ವಹಿಸುವ ಕಾರ್ಮಿಕರನ್ನು ಶೋಷಿಸಲು ಮತ್ತು ಈ ಸ್ವತ್ತುಗಳನ್ನು ಬಡವರು ಬಳಸದಂತೆ ದುಬಾರಿ ದರಗಳನ್ನು ನಿಗದಿಪಡಿಸಲು ಪರವಾನಗಿ ನೀಡಲಾಗುತ್ತದೆ.

ಬಂಡವಾಳಗಾರರು ಈ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವಂತೆ "ಪ್ರೇರೇಪಿಸಲು" ಅವರಿಗೆ ತೆರಿಗೆ–ವಿರಾಮಗಳನ್ನು ನೀಡಲು ಸರ್ಕಾರವು ಯೋಜಿಸುತ್ತಿದೆ. ತೆರಿಗೆ ವಿರಾಮಗಳೊಂದಿಗೆ ರಾಷ್ಟ್ರದ ಆಸ್ತಿಗಳಿಗೆ ಸಂಬಂಧಿಸಿದ ಪ್ರಯೋಜನಗಳನ್ನೂ ಬಂಡವಾಳಶಾಹಿಗಳಿಗೆ ನೀಡಲು ಮುಂದಾಗುವ ಮೋದಿ ಸರ್ಕಾರವು 200 ರೂ.ಗಳ ನಿಕೃಷ್ಟ ಪಿಂಚಣಿಯ ಹೆಚ್ಚಳವನ್ನು ತಳ್ಳಿಹಾಕುತ್ತದೆ. ಇದು ವರ್ಗ–ಪಕ್ಷಪಾತದ ಲಜ್ಜೆಗೆಟ್ಟ ಪ್ರದರ್ಶನವೇ ಸರಿ.

ಪಾರಲಿಂಪಿಕ್ಸ್ ಭಾರತೀಯ ತಂಡಕ್ಕೆ ಅಭಿನಂದನೆ

ಪುಟ 2 ರಿಂದ

ಕಾರಣಗಳಿಗಾಗಿ ಅಂತರ್ರಾಷ್ಟ್ರೀಯ ಸಂಸ್ಥೆಯಿಂದ ಅಮಾನತು ಕ್ರಮವನ್ನು ಎದುರಿಸಬೇಕಾಗಿ ಬಂದಿತ್ತು ಎಂಬುದನ್ನೂ ಎ???.ಪಿ.ಆರ್.ಡಿ. ನೆನಪಿಸಿದೆ. ಟೋಕಿಯೋ ಕ್ರೀಡಾ ಸಮಾವೇಶದ ಮೊದಲು ನಡೆಯಬೇಕಾದ ರಾಷ್ಟ್ರೀಯ ಕ್ರೀಡಾ ಸಮಾವೇಶದ ನಿರ್ವಹಣೆಯೂ ಆರೋಪಗ್ರಸ್ತವಾಗಿತ್ತು. ಇದರಿಂದಾಗಿ ಕೊನೆಗಳಿಗೆಯಲ್ಲಿ ಅದು ಚೆನ್ನೈ ಬದಲು ಬೆಂಗಳೂರಿನಲ್ಲಿ ನಡೆಯಿತು.

ಈ ಕ್ರೀಡಾಸಂಸ್ಥೆಗಳ ಮೇಲೆ ಹಲವಾರು ಭ್ರಷ್ಟಾಚಾರದ ಆರೋಪಗಳಿವೆ. ಅವನ್ನು ಆಮೂಲಾಗ್ರವಾಗಿ ಸರಿಪಡಿಸಬೇಕಾಗಿದೆ, ಅವುಗಳ ನಿರ್ವಹಣೆಯಲ್ಲಿ ಪ್ರಜಾಪ್ರಭುತ್ವ ನಡವಳಿಕೆಗಳನ್ನು ತರಬೇಕಾಗಿದೆ, ರಾಜಕೀಯ ಕೃಪಾಪೋಷಣೆಯಿಂದ ಅವನ್ನು ಮುಕ್ತಗೊಳಿಸಬೇಕಾಗಿದೆ ಎಂದಿರುವ ಎ???.ಪಿ.ಆರ್.ಡಿ., ದೇಶದಲ್ಲಿ ವಿಕಲಾಂಗರ ಕ್ರೀಡೆಗಳಿಗೆ ಸಂಬಂಧಪಟ್ಟಂತೆ ಸಮಗ್ರ ಮಾರ್ಗನಿರ್ದೇಶನಗಳನ್ನು ಮತ್ತು ಜಾರಿ ಆದೇಶಗಳನ್ನು ವಿಶ್ವಸಂಸ್ಥೆಯ ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಅಧಿನಿರ್ಣಯ(ಯು.ಎನ್.ಸಿ.ಆ???.ಪಿ.ಡಿ) ಮತ್ತು ವಿಕಲಾಂಗತೆಯ ವ್ಯಕ್ತಿಗಳ ಹಕ್ಕುಗಳ ಕಾಯ್ದೆಗೆ ಅನುಗುಣವಾಗಿ ರೂಪಿಸಿ ಕೊಡುವ ಅಗತ್ಯವಿದೆ, ಇದಕ್ಕೆ ಬೆಂಬಲವಾಗಿ ಇತರ ಕ್ರೀಡೆಗಳಿಗೆ ಸಮಾನವಾಗಿ ಹಣಕಾಸು ಒದಗಿಸಬೇಕಾಗಿದೆ ಎಂದು ಎ???.ಪಿ.ಆರ್.ಡಿ. ಆಗ್ರಹಿಸಿದೆ. ಇಂತಹದೊಂದು ನಿಲುವು ಮಾತ್ರವೇ ರಿಯೊ ಡಿ ಜನೆರೊದಲ್ಲಿ ಉಂಟಾಗಿ ಟೋಕಿಯೋದಲ್ಲಿ ಮುಂದುವರೆದ ಗತಿಶೀಲತೆಯನ್ನು ಖಾತ್ರಿಪಡಿಸಿಕೊಂಡು ಹೊಸ ಎತ್ತರಕ್ಕೆ ಏರಲು ಸಾಧ್ಯ ಎಂದು ಅದು ಹೇಳಿದೆ.

ದೆಹಲಿಯಲ್ಲಿ ಮತ್ತೊಂದು ಅತ್ಯಾಚಾರ-ಕೊಲೆ: ತನಿಖೆ ಕೈಗೊಳ್ಳಲು ಹಿಂದೇಟು

ದೇಶದ ರಾಜಧಾನಿ ದೆಹಲಿಯಲ್ಲಿ ಮತ್ತೊಂದು ಬರ್ಬರ ಅತ್ಯಾಚಾರ ಮತ್ತು ಹತ್ಯೆ ನಡೆದಿದೆ. ಆಕೆ 21 ವರ್ಷದ ಯುವತಿ. ದೆಹಲಿ ಸಿವಿಲ್ ಡಿಫೆನ್ಸ್‌ನಲ್ಲಿ ಅಧಿಕಾರಿ. ಕಳೆದ ತಿಂಗಳ 26ರಂದು ದೆಹಲಿಯ ಸಂಗಮ್ ವಿಹಾರ್ ಕಛೇರಿಗೆ ಕೆಲಸಕ್ಕೆ ಹೋದವಳು ಮನೆಗೆ ಮರಳಿ ಬರಲಿಲ್ಲ.



ಯುವತಿ ಮೇಲಿನ ಅತ್ಯಾಚಾರ ಮತ್ತು ಹತ್ಯೆಯನ್ನು ಖಂಡಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯೂಎ) ಮತ್ತು ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ದೆಹಲಿಯಲ್ಲಿ ಪ್ರತಿಭಟನೆಯನ್ನು ನಡೆಸಿ ಘಟನೆಯನ್ನು ಖಂಡಿಸಿದ್ದಾರೆ.

ಅಂದು ಕಛೇರಿ ಕೆಲಸದ ಅಂಗವಾಗಿ ಯಾವುದೋ ಪ್ರಕರಣವೊಂದರ ತನಿಖೆಗೆ ಪೋಲಿಸ್ ಸ್ಟೇಷನ್ನಿಗೆ ಹೋಗಿದ್ದಾರೆಂಬ ಮಾಹಿತಿಯನ್ನು ನಂಬಿ ಆಕೆಯ ಬರುವಿಕೆಗೆ ಕಾದು ಕೂತ ಕುಟುಂಬಕ್ಕೆ ಸಿಕ್ಕಿದ್ದು ಬಾಯಿಯ ಬಳಿ ಚಾಕುವಿನಿಂದ ಇರಿತ, ಕತ್ತರಿಸಿದ ಮೊಲೆಗಳು ಮತ್ತು ಛಿದ್ರಗೊಂಡ ದೇಹವಾದ ಶವ ಮಾತ್ರ.

ಕುಟುಂಬದವರ ಪ್ರಕಾರ ಆ ದಿನದಿಂದ ತಲೆತಪ್ಪಿಸಿಕೊಂಡ ಇಬ್ಬರು ಸಹೋದ್ಯೋಗಿಗಳೇ ಈ ಕೃತ್ಯದ ಹೊಣೆಗಾರರು ಎನ್ನಲಾಗಿದೆ. ಪ್ರಕರಣದ ತನಿಖೆ ನಡೆಸಿ ಸತ್ಯ ಹೊರಗೆಳೆದು ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ಕ್ರಮವಹಿಸಬೇಕಾದ ಪೋಲೀಸರು ದೂರು ದಾಖಲಿಸಿಕೊಳ್ಳುತ್ತಿಲ್ಲವೆಂದು ಕುಟುಂಬದವರು ದೂರಿದ್ದಾರೆ.

ನಿರ್ಭಯಾ ಪ್ರಕರಣದ ಸಂದರ್ಭದಲ್ಲಿ ತೀವ್ರ ಆಕ್ರೋಶದ ಹೋರಾಟಕ್ಕೆ ಸಾಕ್ಷಿಯಾದ ದೆಹಲಿಯ ನೆಲ ಮತ್ತೆ ಮತ್ತೆ ಹೀನ ಕೃತ್ಯಗಳಿಂದ ನರಳುತ್ತಿದೆ. ಮಹಿಳೆಯರ ರಕ್ತದಿಂದ ತೋಯುತ್ತಿದೆ. ಕೇಂದ್ರದ ಗೃಹ ಇಲಾಖೆಯ ಅಡಿ ಕಾರ್ಯ ನಿರ್ವಹಿಸುತ್ತಿರುವ ದೆಹಲಿ ಪೋಲೀಸರು ಮತ್ತು ರಾಷ್ಟ್ರದ ರಾಜಧಾನಿ ದೆಹಲಿ ಮತ್ತೆ ಮತ್ತೆ ಕುಖ್ಯಾತಿ ಪಡೆಯುತ್ತಿದೆ. ಸಂತ್ರಸ್ಥೆಯು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವಳೆಂಬುದು ಪ್ರಕರಣದ ಬಗ್ಗೆ ತೋರುತ್ತಿರುವ ನಿರ್ಲಕ್ಷ್ಯಕ್ಕೆ ಕಾರಣವೇ? ಅಥವಾ ಆರೋಪಿಗಳನ್ನು ರಕ್ಷಿಸುವುದು ಸರಕಾರದ ಉದ್ದೇಶವೇ? ಎಂದು ಸಂಘಟನೆಗಳು ಪ್ರಶ್ನೆ ಮಾಡಿವೆ.

ಒಂದು ನಿಷ್ಪಕ್ಷಪಾತ ತನಿಖೆ ಅಪರಾಧಿಗಳ ಪತ್ತೆ ಮತ್ತು ಶೀಘ್ರ ಶಿಕ್ಷೆಗೆ ಆಗ್ರಹಿಸಿ ದೆಹಲಿಯಲ್ಲಿ ಮಹಿಳಾ ಸಂಘಟನೆಗಳು ಜಂಟಿ ಹೋರಾಟದ ಮೂಲಕ ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ.

ಈ ಕುರಿತು ಮಹಿಳಾ ಸಂಘಟನೆಗಳು ಒಂದು ಪತ್ರಿಕಾ ಹೇಳಿಕೆಯನ್ನು ನೀಡಿದ್ದು ಅದರಲ್ಲಿ ದಿಲ್ಲಿ ಪೋಲಿಸ್‌ನ ನಿರ್ಲಕ್ಷ್ಯದ ನಡೆಯನ್ನು ಬಲವಾಗಿ ಖಂಡಿಸಲಾಗಿದೆ. ಪೋಲೀಸರು ಈ ಘಟನೆಯ ಬಗ್ಗೆ ಮಾಡುತ್ತಿರುವ ವರದಿಗಳಲ್ಲಿ ಅಸಾಂಗತ್ಯ ಕಾಣ ಬರುತ್ತಿದೆ. ಮರಣೋತ್ತರ ಪರೀಕ್ಷೆ ಯಾವಾಗ ಸಾವು ಸಂಭವಿಸಿರಬಹುದೆಂದು ಹೇಳಿಲ್ಲ, ಪೀಡಿತೆಯ ಮೈಮೇಲಿನ ಗಾಯಗಳನ್ನು ಸರಿಯಾಗಿ ವಿವರಿಸಿಲ್ಲ. ಎಫ್‌ಐಆರ್ ಒಬ್ಬ ವ್ಯಕ್ತಿ ಬಂದು ತಾನು ಆಕೆಯ ಗಂಡ, ತಾನೇ ಕೊಲೆ ಮಾಡಿರುವುದು ಎಂದು ತಪ್ಪೊಪ್ಪಿಕೊಂಡಿರುವುದಾಗಿ ಹೇಳಿದ್ದಾನೆ ಎನ್ನುತ್ತದೆ. ಆದರೆ ಯುವತಿಯ ತಂದೆ–ತಾಯಿ ಇದನ್ನು ನಿರಾಕರಿಸಿದ್ದಾರೆ. ಈ ದುಷ್ಕೃತ್ಯದಲ್ಲಿ ಯುವತಿಯ ಮೇಲಧಿಕಾರಿ ಮತ್ತು ಇನ್ನು ಕೆಲವರು ಶಾಮೀಲಾಗಿರುವ ಸಂದೇಹ ಇದೆ. ಆದರೆ ಪೋಲೀಸ್ ಈ ಕುರಿತು ತನಿಖೆ ಮಾಡಿಲ್ಲ. ತನಿಖೆ ಸರಿಯಾಗಿ ನಡೆದಿಲ್ಲವೆಂದೇ ಕಂಡು ಬರುತ್ತಿದೆ ಎಂದು ಮಹಿಳಾ ಸಂಘಟನೆಗಳು ಹೇಳಿವೆ. ಅವು ಈ ಕೆಳಗಿನ ಆಗ್ರಹಗಳನ್ನು ಮುಂದಿಟ್ಟಿವೆ:

1. ಈ ಭೀಕರ ಕೊಲೆಯ ಎಲ್ಲ ಆಯಾಮಗಳ ಬಗ್ಗೆ ಮತ್ತು ಅದರಲ್ಲಿ ಶಾಮೀಲಾಗಿರುವವರ ಬಗ್ಗೆ, ಒಬ್ಬ ನ್ಯಾಯಾಂಗ ಅಧಿಕಾರಿಯ ಮಾರ್ಗನಿರ್ದೇಶನದಲ್ಲಿ ಒಂದು ಸ್ವತಂತ್ರ, ನ್ಯಾಯಯುತ ಮತ್ತು ಸಮಯಬದ್ಧ ತನಿಖೆ ನಡೆಯಬೇಕು,
2. ನೇರವಾಗಿ ಮತ್ತು ಪರೋಕ್ಷವಾಗಿ ಶಾಮೀಲಾಗಿರುವ ಎಲ್ಲರನ್ನೂ ಬಂಧಿಸಬೇಕು.
3. ದುಡಿಯುವ ಮಹಿಳೆಯರ ಸುರಕ್ಷಿತತೆ ಮತ್ತು ಭದ್ರತೆಯನ್ನು ಖಾತ್ರಿಪಡಿಸಬೇಕು.
4. ಎಲ್ಲ ಕೆಲಸದ ಸ್ಥಳಗಳಲ್ಲಿ ಆಂತರಿಕ ದೂರು ಸಮಿತಿಗಳು ಇರುವಂತೆ ಖಾತ್ರಿಪಡಿಸಬೇಕು.
5. ಕೊಲೆಯಾದ ಯುವತಿಯ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು, ಸಂಕಷ್ಟವನ್ನು ಪರಿಗಣಿಸಿ ತಕ್ಷಣವೇ ಹಣಕಾಸು ಪರಿಹಾರವನ್ನು ಮತ್ತು ಆಕೆಯ ಕುಟುಂಬದ ಒಬ್ಬರಿಗೆ ಉದ್ಯೋಗವನ್ನು ಒದಗಿಸಬೇಕು.

ಎಐಡಿಡಬ್ಲ್ಯುಎ, ಎಐಎಂಎಸ್‌ಎಸ್, ಸಿಎಸ್‌ಡಬ್ಲ್ಯು, ಎನ್‌ಎಫ್‌ಐಡಬ್ಲ್ಯು, ಪಿಎಂಎಸ್, ಎಸ್‌ಎಂಎಸ್ ಮತ್ತಿತರ ಹಲವು ಸಂಘಟನೆಗಳು ಈ ಹೇಳಿಕೆಗೆ ಸಹಿ ಹಾಕಿವೆ.

ಚರಿತ್ರೆಯನ್ನು ತಿರುಚುವ ಬಿಜೆಪಿಯ ಹುನ್ನಾರ

ಪುಟ 11 ರಿಂದ

ಬಗ್ಗುಬಡಿಯುವುದಾಗಿತ್ತು.

ಭಾರತೀಯ ಸೇನೆಯಲ್ಲಿದ್ದ ಕೆಲವು ಶಕ್ತಿಗಳು ಹಿಂದು ಕೋಮುವಾದಿ ಶಕ್ತಿಗಳ ಕಾಯಾಚರಣೆಗಳ ಪರವಾಗಿ ಅದನ್ನು ಬೆಂಬಲಿಸುವವರಾಗಿದ್ದರು ಎಂದು ಸಂದರ್‌ಲಾಲ್ ಸಮಿತಿ ಟಿಪ್ಪಣಿ ಮಾಡಿತ್ತು. "ಹಲವಾರು ಸ್ಥಳಗಳಲ್ಲಿ, ಅವರು(ಭಾರತೀಯ ಸೇನೆಯವರು) ಮುಸ್ಲಿಮರ ಅಂಗಡಿಗಳನ್ನು ಮತ್ತು ಮನೆಗಳನ್ನು ಲೂಟಿ ಮಾಡಲು ಹಿಂದು ಗುಂಪುಗಳನ್ನು ಪ್ರೋತ್ಸಾಹಿಸುತ್ತಿದ್ದರು ಹಾಗೂ ಪ್ರೇರೇಪಿಸುತ್ತಿದ್ದರು. ಮತ್ತೆ ಕೆಲವು ಸ್ಥಳಗಳಲ್ಲಿ ಅವರೇ ಲೂಟಿಯಲ್ಲಿ ಪಾಲ್ಗೊಳ್ಳುತ್ತಿದ್ದರು .. ಮಿಲಿಟರಿಯವರ, ಮುಖ್ಯವಾಗಿ ಸಿಖ್ ಸೈನಕರ ವಿರುದ್ಧ ಮಹಿಳೆಯರ ಅತ್ಯಾಚಾರ ಮತ್ತು ಹುಡುಗಿಯರ ಅಪಹರಣದ ದೂರುಗಳು ದುರ್ಲಭವಾಗಿರಲಿಲ್ಲ." ಒಂದು ನಿರ್ದಿಷ್ಟ ಸಮುದಾಯದತ್ತ ಈ ಮೃದು ಧೋರಣೆ ಹೊಂದಿರುವುದೆಂದರೆ ಅದು "ಶಸ್ತ್ರಾಸ್ತ್ರಗಳನ್ನು ಹೊಂದಿರುವ ಹಿಂದುಗಳನ್ನು ಬಿಟ್ಟುಬಿಡುವ ನೀತಿಯು ಬಹುಪಾಲು ಸರ್ವೇಸಾಮಾನ್ಯವಾಗಿತ್ತು", ಅದು ಯಾವುದೇ ಭಯವಿಲ್ಲದೇ ತಮ್ಮ ದೌರ್ಜನ್ಯಗಳನ್ನು ಎಸಗಲು ಕೋಮುವಾದಿ ಶಕ್ತಿಗಳಿಗೆ ಸಹಾಯವಾಗುತ್ತಿತ್ತು. ಇದರ ಪರಿಣಾಮವಾಗಿ, ನಿಜಾಮನ ದೌರ್ಜನ್ಯಗಳಿಗೆ ವಿರುದ್ಧವಾಗಿದ್ದ ಸಾಮಾನ್ಯ ಮುಸ್ಲಿಮರ ವಿರುದ್ಧ ಇವರು ದಾಳಿಮಾಡುತ್ತಿದ್ದರು ಮತ್ತು ಅವರು ಹೇಳತೀರದ ಕಷ್ಟಗಳನ್ನು ಅನುಭವಿಸುತ್ತಿದ್ದರು. ಆ ಹಳ್ಳಿಗಳಲ್ಲಿದ್ದ ಹಿಂದು ಜನರು ಅಂತಹ ಸಾಮಾನ್ಯ ಮುಸ್ಲಿಮರನ್ನು ರಕ್ಷಿಸುತ್ತಿದ್ದರು, ತಮ್ಮ ಮನೆಗಳಲ್ಲೇ ಅವರಿಗೆ ವಸತಿ ವ್ಯವಸ್ಥೆ ಮಾಡುತ್ತಿದ್ದರು ಹಾಗೂ ಹಾಗೆ ಸಾವಿರಾರು ಮುಸ್ಲಿಂ ಕುಟುಂಬಗಳಿಗೆ ರಕ್ಷಣೆ ದೊರಕಿತ್ತು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿನ ಈ ಜನಸಾಮಾನ್ಯರ ಐಕ್ಯತೆ ಮತ್ತು ಅವರ ಹೋರಾಟವು ಅಂತಿಮವಾಗಿ ನಿಜಾಮನ ಶರಣಾಗತಿಯನ್ನು ಖಾತ್ರಿಪಡಿಸಿತು ಮತ್ತು ಹೈದರಾಬಾದ್ ಭಾರತದ ಅವಿಭಾಜ್ಯ ಅಂಗವಾಯಿತು.

ನಿಜಾಮ, ಭೂಮಾಲಕರು ಮತ್ತು ಹಳ್ಳಿಗಳಲ್ಲಿರುವ ಅವರ ಸಶಸ್ತ್ರ ಹಿಂಬಾಲಕರ ವಿರುದ್ಧದ ಕಮ್ಯುನಿಸ್ಟ್ ಪಕ್ಷದ ಹೋರಾಟದಲ್ಲಿ ಸರಿಸುಮಾರು 2,000 ಹೋರಾಟಗಾರರು ಮತ್ತು ಮುಖಂಡರು ಹುತಾತ್ಮರಾದರು. ವೆಟ್ಟಿ ಪದ್ಧತಿ, ಕಾನೂನುಬಾಹಿರ ಬಲವಂತದ ಸುಲಿಗೆ, ಜಮೀನಿನಿಂದ ಒಕ್ಕಲೆಬಿಸುವುದು, ದುಬಾರಿ ಸಾಲಗಳು, ಭ್ರಷ್ಟ ಅಧಿಕಾರಿಗಳ ಕಿರುಕುಳ ಮತ್ತು ಗ್ರಾಮೀಣ ಪೀಡಕರಿಂದ ಮುಕ್ತಿ ಪಡೆಯುವಲ್ಲಿ; ಕೃಷಿ ಕೂಲಿಗಾರರಿಗೆ ತೃಪ್ತಿಕರ ಕೂಲಿ ಜಾರಿ ಮಾಡುವಲ್ಲಿ ಮತ್ತು ಧಾನ್ಯಗಳನ್ನು ವಿತರಿಸುವಲ್ಲಿ ಅವರು ಯಶಸ್ವಿಯಾದರು. ಗೇಣಿದಾರರಿಗೆ ಅವರು ಸಾಗುವಳಿ ಮಾಡುತ್ತಿದ್ದ ಜಮೀನುಗಳ ಹಕ್ಕುಪತ್ರಗಳನ್ನು ನೀಡಲಾಯಿತು. 3,000 ಹಳ್ಳಿಗಳಲ್ಲಿ ಗ್ರಾಮ ಸ್ವಯಮಾಡಳಿತ ಸ್ಥಾಪಿಸಲಾಯಿತು. ಜನತಾ ಸಮಿತಿಗಳು ಶಿಕ್ಷಣ, ಆರೋಗ್ಯ ಹಾಗೂ ಇತರ ಎಲ್ಲಾ ಗ್ರಾಮೀಣ ಸೇವೆಗಳನ್ನು ಸಂಘಟಿಸಿದವು. ಹತ್ತು ಲಕ್ಷ ಎಕರೆ ಜಮೀನುಗಳನ್ನು ಹಂಚಲಾಯಿತು. ಭೂಮಾಲಕರು, ದೇಶಮುಖರು ಮತ್ತು ಬಡ್ಡಿಸಾಹುಕಾರರುಗಳಿಂದ ಪಡೆದ ಸಾಲವನ್ನು ರದ್ದು ಮಾಡುವುದರ ಮೂಲಕ ನೂರಾರು ಸಾವಿರ ಜನರಿಗೆ ಅನುಕೂಲ ಕಲ್ಪಿಸಲಾಯಿತು. ಇದು ವಾಸ್ತವ.

ನಿಜಾಮ ಅಥವಾ ಅವನ ಪಾಳೇಗಾರಿ ದಬ್ಬಾಳಿಕೆಗಳ ವಿರುದ್ಧ ಹೋರಾಡುವುದು ಸಂಘ ಪರಿವಾರದ ಕಾರ್ಯಸೂಚಿಯಲ್ಲಿ ಎಂದಿಗೂ ಇರಲಿಲ್ಲ. ರಾಜಕೀಯದಲ್ಲಿ ಅವರು ಮಾಡಿದ ಗಾಯದ ಕಲೆಗಳು ಇವತ್ತಿಗೂ ಕೂಡ ಹೈದರಾಬಾದಿನಲ್ಲಿ ಹಾಗೆಯೇ ಉಳಿದುಕೊಂಡಿವೆ ಮತ್ತು ಈಗ ಹಲವಾರು ಯಾತ್ರೆಗಳ ಹೆಸರಿನಲ್ಲಿ ಕಟ್ಟುಕತೆಗಳನ್ನು ಇತಿಹಾಸವೆಂದು ಹರಡುವ ಮೂಲಕ ಕೋಮುವಾದಿ ಗಾಯದ ಕಲೆಗಳನ್ನು ಮತ್ತೆ ಕೆರಳಿಸಲು ಬಯಸುತ್ತಿದ್ದಾರೆ. ಅವರ ಆ ಯೋಜನೆ ಯಾವುದೇ ಕಾರಣಕ್ಕೂ ಸಫಲವಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲಿದೆ.

ಬ್ರೆಜಿಲಿನಾದ್ಯಂತ ಕೂಗು: "ಬೊಲ್ಸನಾರೊ ತೊಲಗು"



ವಸಂತರಾಜ ಎನ್.ಕೆ.

ಸೆಪ್ಟೆಂಬರ್ 7 ಬ್ರೆಜಿಲ್ ನ ಸ್ವಾತಂತ್ರ್ಯ ದಿನ. ಈ ವರ್ಷದ ಸ್ವಾತಂತ್ರ್ಯ ದಿನದಂದು, ಬ್ರೆಜಿಲಿನಾದ್ಯಂತ ಬಹು ವಿವಾದಿತ ಅಧ್ಯಕ್ಷ ಜೈರ್ ಬೊಲ್ಸನಾರೊ ಪರ ಮತ್ತು ವಿರೋಧಿ ಪ್ರದರ್ಶನಗಳು ನಡೆದವು. ದೇಶದಾದ್ಯಂತ 160ಕ್ಕೂ ಹೆಚ್ಚು ನಗರಗಳಲ್ಲಿ ಬೊಲ್ಸನಾರೊ–ವಿರೋಧಿ ಪ್ರದರ್ಶನಗಳು ನಡೆದವು. 3 ಲಕ್ಷಕ್ಕೂ ಹೆಚ್ಚು ಜನ ಈ ಪ್ರದರ್ಶನಗಳಲ್ಲಿ ಭಾಗವಹಿಸಿದ್ದರು ಎನ್ನಲಾಗಿದೆ. "ಬೊಲ್ಸನಾರೊ ತೊಲಗು" (ಸ್ಪಾನಿಷ್ ನಲ್ಲಿ "ಫೋರಾ ಬೊಲ್ಸನಾರಾ") ಎಂಬುದು ಈ ಪ್ರದರ್ಶನಗಳಲ್ಲಿ ಪ್ರಮುಖ ಘೋಷಣೆಯಾಗಿತ್ತು. ಸೆಪ್ಟೆಂಬರ್ 7ರಂದು ಹಿಂದಿನಿಂದಲೂ "ಹೊರದಬ್ಬಲ್ಪಟ್ಟವರ ಕೂಗು" (ಕ್ರೈ ಆಫ್ ದಿ ಎಕ್ಸ್ ಕ್ಲೂಡೆಡ್) ಎಂಬ ಸಾಮಾಜಿಕ ಚಳುವಳಿಗಳ ಕೂಟ ಸಾಮಾಜಿಕ ದಬ್ಬಾಳಿಕೆಗೊಳಗಾದವರ ಹಕ್ಕುಗಳ ಪರವಾಗಿ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಖಂಡಿಸುವ ಸಭೆ ನಡೆಸುತ್ತದೆ. ಈ ವರ್ಷ ಆ ಸಭೆಯನ್ನು "ಮೊದಲು ಜೀವನ" (ಲೈಫ್ ಇನ್ ದಿ ಫಸ್ಟ್ ಪ್ಲೇಸ್) ಎಂಬ ಘೋಷಣೆಯೊಂದಿಗೆ ನಡೆಸಿದ್ದು, ಅದು "ಬೊಲ್ಸನಾರೊ ತೊಲಗು" ಚಳುವಳಿಗೆ ತನ್ನ ಬೆಂಬಲ ಘೋಷಿಸಿತು.

ಅಧ್ಯಕ್ಷ ಬೊಲ್ಸನಾರೊ ಸಹ ಅಂದು ತನ್ನ ಪರ ದೇಶದಾದ್ಯಂತ ಪ್ರದರ್ಶನ ಮತ್ತು ಸಭೆಗಳನ್ನು ಏರ್ಪಡಿಸಿ ತನಗೆ ಬೆಂಬಲ ಸೂಚಿಸುವಂತೆ ಕರೆ ನೀಡಿದ್ದರು. 'ಬ್ರೆಜಿಲ್ ನ ಟ್ರಂಪ್" ಎಂದು ಕರೆಯಲಾಗುವ ಬೊಲ್ಸನಾರೊ ಟ್ರಂಪ್ ಮಾದರಿಯಲ್ಲಿ ತಮಗೆ ತೊಡಕಾಗುವ ಸಾಂವಿಧಾನಿಕ ಪ್ರಜಾಪ್ರಭುತ್ವದ ನೀತಿ–ನಿಯಮಗಳನ್ನು ಬಹಿರಂಗವಾಗಿ ಉದ್ಧಟತನದಿಂದ ಉಲ್ಲಂಘಿಸುವ, ತನ್ನ ಅಧಿಕಾರ ದುರ್ಬಳಕೆ ಮಾಡಿ ಸಾಂವಿಧಾನಿಕ ಪ್ರಜಾಪ್ರಭುತ್ವದ ಸಂಸ್ಥೆ ಅಥವಾ ವ್ಯಕ್ತಿಗಳ ಮೇಲೆ ದಾಳಿ ಮಾಡುವ ಉಗ್ರ ಬಲಪಂಥೀಯ ಅಧ್ಯಕ್ಷ. ಇತ್ತೀಚೆಗೆ ಸುಪ್ರೀಂ ಮತ್ತು ಇತರ ಕೋರ್ಟುಗಳು ಹಾಗೂ ಪಾರ್ಲಿಮೆಂಟ್ ಅವರ ವಿರುದ್ಧದ ಹಲವಾರು ಗುರುತರ ಆಪಾದನೆಗಳ ವಿಚಾರಣೆ ನಡೆಸುತ್ತಿದ್ದು ಅವು ನಿರ್ಣಾಯಕ ಹಂತ ತಲುಪಿವೆ. ಬೊಲ್ಸನಾರೊ ಈ ಯಾವುದೇ ಪ್ರಕರಣಗಳಲ್ಲಿ ತಪ್ಪಿತಸ್ಥ ಅಂತ ತೀರ್ಪು ಬಂದರೆ ಅವರು ಅಧಿಕಾರಾವಧಿ ಮುಗಿಯುವ ಮೊದಲೇ ತಮ್ಮ ಪದವಿಯನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಅವರ ಹಲವಾರು ನೀತಿ–ನಿಯಮಗಳ ಉಲ್ಲಂಘನೆ ಮತ್ತು ಭಾರೀ ಕೊವಿಡ್ ಸಾವು–ನೋವುಗಳು ಸೇರಿದಂತೆ ಹಲವು ವೈಫಲ್ಯಗಳ ಆಧಾರದ ಮೇಲೆ ಪಾರ್ಲಿಮೆಂಟು ಅವರ ವಿರುದ್ಧ ದೋಷಾರೋಪಣೆ ಮೂಲಕ ಅವರನ್ನು ಅಧಿಕಾರದಿಂದ ಇಳಿಸುವ ಸಾಧ್ಯತೆಯಿದೆ.

ಇವೆಲ್ಲದರಿಂದ ತಪ್ಪಿಸಿಕೊಂಡರೂ 2022ಕ್ಕೆ ಅವರ ಅಧಿಕಾರಾವಧಿ ಮುಗಿಯುತ್ತಿದ್ದು, ಮುಂದಿನ ಚುನಾವಣೆಯಲ್ಲಿ ಅವರಿಗೆ ಸೋಲು ಗ್ಯಾರಂಟಿ ಎಂದು ಹಲವು ಸಮೀಕ್ಷೆಗಳು ತಿಳಿಸಿವೆ. ಸಮೀಕ್ಷೆಗಳಲ್ಲಿ ಶೇ.60 ಜನ ಯಾವುದೇ ಸಂದರ್ಭದಲ್ಲಿಯೂ ಬೊಲ್ಸನಾರೊ ಗೆ ಮತ ನೀಡುವುದಿಲ್ಲ ಎಂದಿದ್ದಾರೆ. ಪ್ರಮುಖ ವಿರೋಧ ಪಕ್ಷವಾದ ವರ್ಕರ್ಸ್ ಪಾರ್ಟಿಯ ಜನಪ್ರಿಯ ನಾಯಕರಾದ ಲುಲಾ ದ ಸಿಲ್ವಾ ಮತ್ತು ದಿಲ್ಮಾ ರೌಸೆಫ್ ಅವರನ್ನು ಹುಸಿ ಆಪಾದನೆಗಳನ್ನು ಬಳಸಿ ಕಾನೂನುಬಾಹಿರವಾಗಿ ಚುನಾವಣೆಗೆ ಸ್ಪರ್ಧಿಸದಂತೆ ಮಾಡಿದ್ದು, ಈಗ ಅದು ವಿಫಲವಾಗಿದೆ. ಬಂಧನಕ್ಕೂ ಒಳಗಾಗಿದ್ದ ಲುಲಾ ಅವರನ್ನು ಕೋರ್ಟುಗಳು ಆಪಾದನೆ ಮುಕ್ತಗೊಳಿಸಿ ಬಿಡುಗಡೆ ಮಾಡಿವೆ. ಲುಲಾ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಿದರೆ ಗೆಲ್ಲುವುದು ಖಚಿತ ಎನ್ನಲಾಗಿದೆ.

ಇವೆಲ್ಲದರಿಂದ ಬೊಲ್ಸನಾರೊ ಹತಾಶೆಗೊಂಡಿದ್ದಾರೆ. ಅವರು "ಟ್ರಂಪ್ ಶೈಲಿ"ಯಲ್ಲಿ ತಮ್ಮ ಬೆಂಬಲಿಗರನ್ನು ಸುಪ್ರೀಂ ಮತ್ತಿತರ ಕೋರ್ಟಗಳಿಗೆ ಮತ್ತು ಪಾರ್ಲಿಮೆಂಟಿಗೆ "ಮುತ್ತಿಗೆ ಹಾಕಿ ವಶಪಡಿಸಿಕೊಳ್ಳಲು" ಕರೆ ಕೊಟ್ಟಿದ್ದಾರೆ. ಕಾರ್ಯಾಂಗಕ್ಕೆ ಪರಮಾಧಿಕಾರವಿದೆ ಎಂದು ಹೇಳುತ್ತಾ, ಇತರ ಅಂಗಗಳಾದ ಶಾಸಕಾಂಗ ಮತ್ತು ನ್ಯಾಯಾಂಗಗಳು ತಮ್ಮ "ಮಿತಿಗಳನ್ನು ಮೀರಿದರೆ" ವ್ಯವಸ್ಥೆ "ಕುಸಿದು ಬೀಳಬಹುದು" ಎಂದು ಎಚ್ಚರಿಸುತ್ತಿದ್ದಾರೆ. ಅವರ ಬೆಂಬಲಿಗರು ಸಂಘಟಿಸುತ್ತಿರುವ ಬಹಿರಂಗ ಸಭೆಗಳಲ್ಲಿ ಹೀಗೆ ರಾಜಾರೋಷವಾಗಿ ಸಾರುತ್ತಿದ್ದಾರೆ. ಅವರ ಸಭೆಗಳಲ್ಲಿ ಪೋಲಿಸರು ಮತ್ತು ಮಿಲಿಟರಿ ಪೋಲಿಸರು ಭಾಗವಹಿಸುತ್ತಿದ್ದಾರೆ. ಇವರಿಗೆ ಬ್ರೆಜಿಲ್ ಕಾನೂನು ಪ್ರಕಾರ ರಾಜಕೀಯ ಸಭೆಗಳಲ್ಲಿ (ತಮ್ಮ ರಜಾದಿನಗಳಲ್ಲೂ) ಭಾಗವಹಿಸಲು ಅನುಮತಿಯಿಲ್ಲ. ಅವರ ವಿರುದ್ಧ ಕಾನೂನು ಪ್ರಕಾರ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದ ಗವರ್ನರುಗಳು ಮತ್ತು ಅಧಿಕಾರಿಗಳಿಗೆ, ಬೊಲ್ಸನಾರೊ ಅವರ ಮೇಲೆ ಕ್ರಮಕೈಗೊಳ್ಳುವ ಬೆದರಿಕೆ ಹಾಕಿದ್ದಾರೆ. ಅವರ ಬೆಂಬಲಿಗರು ಅಗಸ್ಟ್ ನಲ್ಲಿ ಯೇ ಚುನಾವಣಾ ವ್ಯವಸ್ಥೆ ಬದಲಾಯಿಸುವ ಮಸೂದೆ ಮಂಡಿಸಿದ್ದಾರೆ. ಅಗಸ್ಟ್ 10 ರಂದು ರಾಜಧಾನಿಯಲ್ಲಿ ಒಂದು ಮಿಲಿಟರಿ ಪರೇಢ್ ಸಂಘಟಿಸಿದ್ದರು. ಅಧ್ಯಕ್ಷ ಬೊಲ್ಸನಾರೊ ಒಂದು ಹೇಳಿಕೆ ನೀಡಿ "ಪಾರ್ಲಿಮೆಂಟು ಮತ್ತು ಸುಪ್ರೀಂ ಕೋರ್ಟು ನಡೆಸಲಿರುವ ಕ್ಷಿಪ್ರಕ್ರಾಂತಿಯ ವಿರುದ್ಧ ಪ್ರತಿರೋಧ"ಕ್ಕೆ (!) ಇದು ತಯಾರಿ ಎಂದು ಹೇಳಿದ್ದಾರೆ.

ಈ ಎಲ್ಲ ಹೇಳಿಕೆಗಳು ಚುನಾವಣೆಯ ಮೊದಲು ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸಿ ಪ್ರಜಾಪ್ರಭುತ್ವವನ್ನು ಕೊನೆಗೊಳಿಸಲು ಅವರು ಪ್ರಯತ್ನಿಸುತ್ತಿದ್ದಾರೆ, ಎಂಬ ಸೂಚನೆ ನೀಡುತ್ತಿತ್ತು. ಇದಕ್ಕೆ ಪ್ರತಿಯಾಗಿಯೇ ವಿರೋಧ ಪಕ್ಷಗಳು "ಬೊಲ್ಸನಾರೊ ತೊಲಗು" ಚಳುವಳಿಗೆ ಕರೆ ನೀಡಿದ್ದವು. ಬೊಲ್ಸನಾರೊ–ವಿರೋಧಿ ಪ್ರದರ್ಶನಗಳಲ್ಲಿ ಮತ್ತು ಸಭೆಗಳಲ್ಲಿ "ಬೊಲ್ಸನಾರೊ ತೊಲಗು", "ಬೊಲ್ಸನಾರೊ ವಿರುದ್ಧ ದೋಷಾರೋಪಣೆ ಮಾಡಿ", "2022ರ ವರೆಗೆ ಕಾಯಲು ಸಾಧ್ಯವಿಲ್ಲ, ಬೊಲ್ಸನಾರೋ ಪದಚ್ಯುತಿ ಈಗಲೇ ಆಗಬೇಕು" ಎಂಬ ಘೋಷಣೆಗಳು ಕೇಳಿಬಂದವು. ಸ್ವಾತಂತ್ರ್ಯ ದಿನದಂದು ನಡೆಸಿದ ಬೊಲ್ಸನಾರೊ–ಪರ ಮತಪ್ರದರ್ಶನಗಳು ಮತ್ತು ಬಹಿರಂಗ ಸಭೆಗಳಲ್ಲಿ ಸಹ ಸುಪ್ರೀಂ ಮತ್ತಿತರ ಕೋರ್ಟಗಳಿಗೆ ಮತ್ತು ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಲು ಕರೆ ನೀಡಿದರು. ಈ ಸಭೆಗಳು ಮತ್ತು ಪ್ರದರ್ಶನಗಳು ಶಾಸಕಾಂಗ ಮತ್ತು ನ್ಯಾಯಾಂಗಗಳೀಗೆ "ಅಂತಿಮ ಎಚ್ಚರಿಕೆ" ಯೆಂದು ಬೆದರಿಸಿದರು. ಅವರ ಮತಪ್ರದರ್ಶನ ಮತ್ತು ಸಭೆಗಳಲ್ಲಿ ಪೋಲಿಸರು ಮತ್ತು ಮಿಲಿಟರಿ ಪೋಲಿಸರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪ್ರದರ್ಶನಕಾರರು ಸುಪ್ರೀಂ ಮತ್ತು ಪಾರ್ಲಿಮೆಂಟ್ ಕಟ್ಟಡಗಳ ಹತ್ತಿರ ಹೋಗದಂತೆ ತಡೆಗೋಡೆಗಳನ್ನು ನಿರ್ಮಿಸಲಾಗಿತ್ತು. ಅವುಗಳನ್ನು ಲಾರಿ ಜೆಸಿಬಿ ಯಂತಹ ವಾಹನಗಳನ್ನು ಬಳಸಿ ಒಡೆದು, ಹತ್ತಿ ಹಾರಿ ಉಲ್ಲಂಘಿಸಿ ಈ ಕಟ್ಟಡಗಳ ಹತ್ತಿರ ಹೋಗಲು ಪೋಲಿಸರು ಅನುವು ಮಾಡಿಕೊಟ್ಟರು ಎನ್ನಲಾಗಿದೆ. ಮುಂದೆ ವಾಶಿಂಗ್ಟನ್ ನಲ್ಲಿ ಟ್ರಂಪ್ ಬೆಂಬಲಿಗರು ಪಾರ್ಲಿಮೆಂಟ್ ಕಟ್ಟಡಕ್ಕೆ ಲಗ್ಗೆ ಹಾಕಿದಂತೆ ಬ್ರೆಜಿಲ್ ನಲ್ಲೂ ಆಗಬಹುದು ಎಂದು ಹೇಳಲಾಗಿದೆ.

ಈ ನಡುವೆ ಬೊಲ್ಸನಾರೊ ಮತ್ತೆ 'ಟ್ರಂಪ್ ಶೈಲಿ"ಯಲ್ಲಿ (ತಾನು ಸೋಲುವುದು ಖಚಿತವಾಗಿರುವ) ಮುಂದಿನ ಚುನಾವಣೆಯ ಕುರಿತು ಸಂಶಯವನ್ನು ಬಿತ್ತುವ ಕೆಲಸದಲ್ಲಿ ತೊಡಗಿರುವುದು, ಈಗಲೇ ಸುಪ್ರೀಂ ಕೋರ್ಟು ಮತ್ತು ಪಾರ್ಲಿಮೆಂಟಿನ ಮೇಲೆ ದಾಳಿ ಯೋಜಿಸಿರುವುದು, ಮಿಲಿಟರಿ ಕ್ಷಿಪ್ರಕ್ರಾಂತಿಗೆ ತಯಾರಿ ನಡೆಸುತ್ತಿರುವುದು ಬ್ರೆಜಿಲಿನಲ್ಲಿ ಮಾತ್ರವಲ್ಲ ಇಡೀ ಲ್ಯಾಟಿನ್ ಅಮೆರಿಕದಲ್ಲೂ ಜಗತ್ತಿನಲ್ಲಿಯೂ ಆತಂಕ ಮೂಡಿಸಿದೆ. ಇದರ ವಿರುದ್ಧ ಸ್ಪೈನಿನ ಮಾಜಿ ಪ್ರಧಾನಿ ಝಪಟೆರೊ, ಮಾಜಿ ಗ್ರೀಕ್ ಅರ್ಥಮಂತ್ರಿ ಯಾನಿಸ್, ಯುಕೆ ಲೇಬರ್ ಪಾರ್ಟಿಯ ಮಾಜಿ ನಾಯಕ ಕೊರ್ಬಿನ್, ಮಾಜಿ ಪರಾಗುವೇ ಅಧ್ಯಕ್ಷ ಲುಗೊ, ಅರ್ಜೆಂಟಿನಾದ ನೊಬೆಲ್ ಪ್ರಶಸ್ತಿ ವಿಜೇತ ಹಾಗೂ ಮಾನವ ಹಕ್ಕು ಹೋರಾಟಗಾರ ಅಡೊಲ್ಫೊ ಪೆರೆಸ್, ಯುಕೆ ಗ್ರೀನ್ ಪಕ್ಷದ ಸಂಸದೆ ರೊಲಿನ್ ಲುಕಾಸ್ ಮುಂತಾದ 150 ಪ್ರತಿಷ್ಟಿತ ವ್ಯಕ್ತಿಗಳು ಬಹಿರಂಗ ಪತ್ರ ಬರೆದು "ಜಗತ್ತಿನ ಮೂರನೆಯ ಅತಿ ದೊಡ್ಡ ಪ್ರಜಾಪ್ರಭುತ್ವದಲ್ಲಿ ಕ್ಷಿಪ್ರಕ್ರಾಂತಿಯ ಆತಂಕವೆಬ್ಬಿಸುತ್ತಿದೆ ಬ್ರೆಜಿಲ್ ನ ಪ್ರಜಾಸತ್ತಾತ್ಮಕ ಸಂಸ್ಥೇಗಳಿಗೆ ಅಪಾಯವೊದಗಿದ್ದು ಅವುಗಳ ರಕ್ಷಣೆಗೆ ಎಲ್ಲರೂ ಧಾವಿಸಬೇಕಾಗಿದೆ" ಎಂದಿದ್ದಾರೆ.

ಅಧ್ಯಕ್ಷ ಬೊಲ್ಸನಾರೊ ಎಲ್ಲ ಜನವಿಭಾಗಗಳಿಂದ ತಮ್ಮ ಕ್ರಮಗಳಿಗೆ ವಿರೋಧ ಎದುರಿಸುತ್ತಿದ್ದಾರೆ. ಬುಡಕಟ್ಟು ಸಮುದಾಯಗಳ ಜನ ತಲೆತಲಾಂತರಗಳಿಂದ ವಾಸಿಸುತ್ತಾ ಚಟುವಟಿಕೆ ನಡೆಸುತ್ತಿರುವ ಭೂಮಿಯ ಮೇಲಿನ ಹಕ್ಕನ್ನು ಕಿತ್ತುಕೊಳ್ಳುವ ಕೆಳಗಿನ ಕೋರ್ಟಿನ ತೀರ್ಪೊಂದರ ವಿರುದ್ಧ ಅಪೀಲನ್ನು ಸುಪ್ರೀಂ ಕೋರ್ಟು ಕೈಗೆತ್ತಿಕೊಂಡಿತ್ತು. ಸಾಂತಾ ಕಟರಿನಾ ಪ್ರಾಂತದಲ್ಲಿ ಬುಡಕಟ್ಟು ಸಮುದಾಯವೊಂದರ ಜನ ಅಕ್ಟೋಬರ್ 1988ರಲ್ಲಿ ಅವರು ಹಕ್ಕು ಸಾಧಿಸುತ್ತಿರುವ ಭೂಮಿಯ ಮೇಲೆ ವಾಸವಿರಲಿಲ್ಲ. ಆದ್ದರಿಂದ ಅವರು ಅದರ ಮೇಲೆ ಹಕ್ಕು ಸಾಧಿಸುವಂತಿಲ್ಲವೆಂದು ತೀರ್ಪು ನೀಡಿತ್ತು.

1988ರ ಹಿಂದಿನ 20 ವರ್ಷಗಳಲ್ಲಿ ಬ್ರೆಜಿಲಿನಲ್ಲಿ ಮಿಲಿಟರಿ ಸರ್ವಾಧಿಕಾರವಿದ್ದು, ಬುಡಕಟ್ಟು ಸಮುದಾಯಗಳನ್ನು ಓಡಿಸಲಾಗಿತ್ತು. ಆದ್ದರಿಂದ ಈ ತಾಂತ್ರಿಕ ಕಾರಣ ಕೊಟ್ಟು ತಲೆತಲಾಂತರಗಳಿಂದ ಬಂದಿರುವ ಭೂಮಿಯ ಮೇಲಿನ ಹಕ್ಕನ್ನು ಕಿತ್ತುಕೊಳ್ಳಬಾರದು. ಈ ತೀರ್ಪು ಒಂದು ಪ್ರಾಂತದ ಒಂದು ಬುಡಕಟ್ಟು ಸಮುದಾಯದ ಹಕ್ಕಿನ ಕುರಿತಾಗಿದ್ದರೂ ಅದನ್ನು ಎಲ್ಲ ಕಡೆ ಅನ್ವಯಗೊಳಿಸುವ ಅಪಾಯವಿದೆ. ಅಲ್ಲದೆ ಪಾರ್ಲಿಮೆಂಟಿನಲ್ಲಿ ಮಂಡಿಸಲಾದ ಮಸೂದೆಯೊಂದು ಅಕ್ಟೋಬರ್ 1988 ಭೂಒಡೆತನ ನಿರ್ಧರಿಸಲು ಕಟ್–ಆಫ್ ದಿನಾಂಕ ಎಂದು ನಮೂದಿಸಿದೆ. ಇದನ್ನು ಸಹ ಸಂವಿಧಾನ–ಬಾಹಿರವೆಂದು ಪರಿಗಣಿಸಬೇಕು, ಎಂಬುದು ಸುಪ್ರೀಂ ಕೋರ್ಟಿಗೆ ಬುಡಕಟ್ಟು ಸಮುದಾಯಗಳ ಜನರ ಅಹವಾಲು.

ಇದನ್ನು ಅಪೀಲ್ ಮೂಲಕ ಮಾತ್ರವಲ್ಲದೆ, ನೇರವಾಗಿ ಕೋರ್ಟಿಗೆ ಮನವರಿಕೆ ಮಾಡಲು 173 ವಿವಿಧ ಬುಡಕಟ್ಟುಗಳಿಗೆ ಸೇರಿದ 6 ಸಾವಿರಕ್ಕೂ ಹೆಚ್ಚು ಜನ ತಮ್ಮ ಸಾಂಪ್ರದಾಯಿಕ ವೇಷಭೂಷಣಗಳಲ್ಲಿ ಸುಪ್ರಿಂ ಕೋರ್ಟು ಮತ್ತು ಪಾರ್ಲಿಮೆಂಟಿನ ಮುಂದೆ ಅಗಸ್ಟ್ 25ರಂದು ಮತಪ್ರದರ್ಶನ ನಡೆಸಿದರು. ಬೊಲ್ಸನಾರೊ ಇದಕ್ಕೆ ಒಪ್ಪಿಕೊಂಡರೆ "ಅರಾಜಕತೆ" ಆದೀತು ಎಂದು ಹೇಳುತ್ತಾ, ಬ್ರೆಜಿಲಿನ ಭಾರೀ ಎಸ್ಟೇಟ್ ಮಾಲೀಕರ ಅಭಿಪ್ರಾಯವನ್ನು ಮಾರ್ದನಿಸಿದ್ದಾರೆ. ಆದ್ದರಿಂದ ಎಲ್ಲ ಬುಡಕಟ್ಟು ಸಮುದಾಯಗಳ ಜನ ಬೊಲ್ಸನಾರೊ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಬ್ರೆಜಿಲ್ ಬೊಲ್ಸನಾರೊ ಪರ ಮತ್ತು ವಿರೋಧಿ ರಾಜಕೀಯ ಶಕ್ತಿಗಳ ನಡುವೆ ಸಂಘರ್ಷ ಬ್ರೆಜಿಲಿನ ಮಾತ್ರವಲ್ಲ, ಇಡೀ ಲ್ಯಾಟಿನ್ ಅಮೆರಿಕದ ಮಾತ್ರವಲ್ಲ, ಇಡೀ ಜಗತ್ತಿನ ಉಗ್ರ ಬಲಪಂಥೀಯ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನಡುವಿನ ಸಂಘರ್ಷದ ಮೇಲೆ ಗಮನಾರ್ಹ ಪರಿಣಾಮ ಬೀರಲಿದೆ.

ಕಾರ್ಮಿಕ ದಿನದಂದು ಉಡುಗೊರೆ: ನಿರುದ್ಯೋಗ ಭತ್ಯೆ ಕಟ್

ಸೆಪ್ಟೆಂಬರ್ ನಲ್ಲಿ ಯಾವ ಕಾರ್ಮಿಕ ದಿನ ಎಂದಿರಾ? ಹೌದು. ಇಡೀ ಜಗತ್ತಿನಲ್ಲಿ ಮೇ 1 ರಂದು ಕಾರ್ಮಿಕ ದಿನವನ್ನು ಆಚರಿಸಿದರೆ, ಮೇ ದಿನದ ಹುತಾತ್ಮರ ನಾಡಾದ ಯು.ಎಸ್ ನಲ್ಲಿ ಸೆಪ್ಟೆಂಬರ್ ಮೊದಲ ಸೋಮವಾರವನ್ನು 'ಕಾರ್ಮಿಕ ದಿನ'ವಾಗಿ ಆಚರಿಸಲಾಗುತ್ತದೆ. ಈ ಕಾರ್ಮಿಕ ದಿನದಂದು (ಸೆ.6) ಯು.ಎಸ್. ಸರಕಾರ ಕೊವಿಡ್ ಮಹಾಸೋಂಕಿನಿಂದ ನಿರುದ್ಯೋಗಿಯಾದ ಕಾರ್ಮಿಕರಿಗೆ ಒಂದು "ವಿಶೇಷ ಕೊಡುಗೆ" ನೀಡಿತು. ಅವರಿಗೆ ಕಳೆದ 18 ತಿಂಗಳಿಂದ ಕೇಂದ್ರ ಸರಕಾರ ಕೊಡುತ್ತಿದ್ದ ನಿರುದ್ಯೋಗ ಭತ್ಯೆಯನ್ನು ನಿಲ್ಲಿಸಿದೆ. ಇದು ಸುಮಾರು 93 ಲಕ್ಷ ನಿರುದ್ಯೋಗಿ ಕಾರ್ಮಿಕರನ್ನು ಮತ್ತು ಅವರ ಕುಟುಂಬದ 2.6 ಕೋಟಿ ಜನರನ್ನು ಬಾಧಿಸಲಿದೆ. ಇದರ ಜತೆಗೆ ಬಾಡಿಗೆ ಪಾವತಿ ಮಾಡಿದ್ದಕ್ಕೆ ಮತ್ತು ಸಾಲದ ಕಂತು ಕಟ್ಟದ್ದಕ್ಕೆ ಮನೆ ಬಿಡಿಸುವುದರ ಮೇಲಿದ್ದ ನಿಷೇಧವನ್ನೂ ಹಿಂತೆಗೆದುಕೊಳ್ಳಲಾಗಿದೆ. ಡೆಲ್ಟಾ ರೂಪಾಂತರದಿಂದಾಗಿ ಕೊವಿಡ್ ಮಹಾಸೋಂಕು ಸರಾಸರಿ ವಾರಕ್ಕೆ 1.32 ಲಕ್ಷ ಹೊಸ ಸೋಂಕಿತರು ಪತ್ತೆಯಾಗುತ್ತಿರುವಾಗ ಈ ಕಡಿತ ಮಾಡಲಾಗುತ್ತಿದೆ, ಕೊವಿಡ್ ಮಹಾಸೋಂಕಿನಿಂದ ನಿರುದ್ಯೋಗಿಯಾದ ಕಾರ್ಮಿಕರಿಗೆ ವಾರಕ್ಕೆ 600 ಡಾಲರು ಮತ್ತು ಅವರು ಉದ್ಯೋಗ ಕಳೆದುಕೊಂಡಾಗ ಒಂದು ಬಾರಿಗೆ 1200 ಡಾಲರು ನೆರವು ನೀಡುತ್ತಿತ್ತು.

ಈ ಕಡಿತಕ್ಕೆ ನಿರುದ್ಯೋಗ ಭತ್ಯೆಗೆ ಅರ್ಜಿಗಳು ಕಡಿಮೆಯಾಗುತ್ತಿರುವುದು (ಮಾರ್ಚ್ 2020 ನಂತರದ ಅತಿ ಕಡಿಮೆ ಸಂಖ್ಯೆ 3.4 ಲಕ್ಷ) ಮತ್ತು ನಿರುದ್ಯೋಗ ದರ (ಎಪ್ರಿಲ್ 2020ರಲ್ಲಿ ಶೇ. 14.8 ರಿಂದ ಈಗಿನ ಶೇ.5.2ಕ್ಕೆ ಇಳಿಕೆ) ಕಡಿಮೆಯಾಗುತ್ತಿರುವುದರಿಂದ ಈ ನಿರ್ಣಯ ಕೈಗೊಳ್ಳಲಾಗಿದೆ ಎಂಬುದು ಸರಕಾರದ ಸಮಜಾಯಿಷಿ. ಆದರೆ ನಿರುದ್ಯೋಗದ ದರ ಇನ್ನೂ ಕೊವಿಡ್–ಪೂರ್ವ ಮಟ್ಟಕ್ಕಿಂತ ಹೆಚ್ಚಿದೆ. ನಿರುದ್ಯೋಗ ಭತ್ಯೆಗೆ ಕಡಿತ ಒಮ್ಮೆಗೆ ಬಂದಿದ್ದಲ್ಲ. ಡಿಸೆಂಬರ್ 2020ರಲ್ಲಿ ಈ ಯೋಜನೆಯನ್ನು ಮುಂದುವರಿಸಿದಾಗಲೇ ವಾರಕ್ಕೆ 600 ಡಾಲರುರಿನಿಂದ 300 ಡಾಲರಿಗೆ ಮತ್ತು ಒಂದು ಬಾರಿಗೆ ಕೊಡುವ ನೆರವಾದ 1200 ಡಾಲರನ್ನು 600 ಡಾಲರಿಗೆ ಕಡಿತ ಮಾಡಿತ್ತು. ಅಲ್ಲದೆ 50ರಲ್ಲಿ 25 ಪ್ರಾಂತಗಳು (ಹೆಚ್ಚಾಗಿ ರಿಪಬ್ಲಿಕನ್ ಆಡಳಿತವಿರುವ ರಾಜ್ಯಗಳು) ನಿರುದ್ಯೋಗ ಭತ್ಯೆಯನ್ನು ಜುಲೈ 2021ರಲ್ಲೇ ನಿಲ್ಲಿಸಿದ್ದವು. .

JANASHAKTHI KANNADA VARA PATRIKE September 13-19, 2021 Price: Rs. 10/- Date of Publication: 10 September 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಕರೋನಾ ಫ್ರಂಟ್ ಲೈನ್ ವಾರಿಯರ್ಸ್ ಆಗಿ ದುಡಿದ ಅಂಗನವಾಡಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯದ ಶಾಸಕರಿಗೆ ಮನವಿ













ಕರ್ನಾಟಕ ರಾಜ್ಯ ಗ್ರಾಮಪಂಚಾಯತಿ ನೌಕರರ ಸಂಘ ಬೆಂಗಳೂರು (ಸಿಐಟಿಯು ಸಂಯೋಜಿತ) ರಾಜ್ಯ ಸಮಿತಿಯು ನೌಕರರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಬೆಂಗಳೂರಿನಲ್ಲಿ ಧರಣಿ ಸತ್ಯಗ್ರಹವನ್ನು ಸೆಪ್ಟೆಂಬರ್ 6, 2021 ರಂದು ನಡೆಸಿತು. ಹೋರಾಟದ ನೇತೃತ್ವವನ್ನು ಜಿ. ರಾಮಕೃಷ್ಣ, ಆರ್.ಎಸ್. ಬಸವರಾಜ, ಎಂ.ಬಿ. ನಾಡಗೌಡ, ಗೋಪಾಲಕೃಷ್ಣ ಅರಳಹಳ್ಳಿ, ಗೈಬು ಜೈನೆಖಾನ್, ಶಿವಾನಂದ, ಉಮೇಶ್ ಮುಂತಾದವರಿದ್ದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**